
ಕರ್ಮವೀರ


ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
. ವಾ. ಪುರೋಹಿತ]

ದಿ. ಲೋಕಮಾನ್ಯ ಬಾಲ ಗಂಗಾಧರ ತಿಲಕರು

"ಸ್ವರಾಜ್ಯವೆಂಬದು ನನ್ನ ಜನ್ಮಸಿದ್ಧ ಹಕ್ಕು ಅದನ್ನು ನಾನು ಸಂಪಾದಿಸಿಯೇ ತೀರುವೆ" ಎಂದು ಗರ್ಜಿಸಿ ಹಿಂದೀ ರಾಜಕಾರಣವನ್ನು ಮೊಟ್ಟ ಮೊದಲು ನಿರ್ಭಯತೆಯ ಅಡಿಗಲ್ಲ ಮೇಲೆ ನಿಲ್ಲಿಸಿ ಮಲಗಿದ ಭಾರತ ಸಿಂಹವನ್ನೆಚ್ಚರಿಸಿದ ಲೋಕಮಾನ್ಯರನ್ನು ಸ್ವಾತಂತ್ರ್ಯದಿನದಲ್ಲಿ ಮರೆಯದೆ ನೆನೆಯೋಣ !





ರಾಷ್ಟ್ರಪಿತ

ಮಹಾತ್ಮಾ ಗಾಂಧಿ

ರಾಜಕಾರಣದಲ್ಲಿ ಸತ್ಯಧರ್ಮಗಳಿಗೆಡೆಯಿಲ್ಲವೆಂಬ ದುರ್ವಾದವನ್ನು ನಿರಾಕರಿಸಿ ಧರ್ಮಮಾರ್ಗದಿಂದ ಸ್ವರಾಜ್ಯವನ್ನು ಸಾಧಿಸಿಕೊಟ್ಟು ರಾಷ್ಟ್ರದ ಮಾನವುಳಿಸಲು ತಾನು ಪ್ರಾಣ ಕೊಟ್ಟ ಮಹಾವಿಭೂತಿಗೆ ಶರಣು !

ಗಾಂಧೀಜಿಯ "ಉತ್ತರಾಧಿಕಾರಿ"



ಪಂ. ನೆಹರೂ

ಒಂದು ವರ್ಷದ ಸ್ವಾತಂತ್ರ್ಯ

— ಪುಟ ೫

KARMAVEER

ಧರ್ಮ ಮತ್ತು ಜಾತೀಯತೆ

ಲೇ— ಶ್ರೀ. ವಿಶ್ವನಾಥ ಕೇಣ್ಯೆ ಬೆಣೂರಕರ

ಕೆಲ್ಲಿ ಇವರು ಇವರು ಧರ್ಮ ಮತ್ತು ಜಾತೀಯತೆಯನ್ನು ಒಂದಾಗಿ ಭಾವಿಸಿಕೊಂಡು, ಎರಡನ್ನು ಒಟ್ಟಿಗೆ ಕಲಸಿ, ಒಂದರ ದೋಷಗಳನ್ನು ಇನ್ನೊಂದರ ಮೇಲೆ ಹೇರಿ ಒಂದು ಕೊಡಕಿನ ಪರಿಸ್ಥಿತಿಯನ್ನು ನಿರ್ಮಿಸುತ್ತಾರೆ. ಇಂತಹ ಅವ್ಯವಸ್ಥೆಯಿಂದ ನಾವು ದೂರ ಉಳಿಯಬೇಕಾದರೆ ಧರ್ಮ ಭಾವನೆಗೂ ಜಾತೀಯತೆಗೂ ಇರುವ ಅಂತರವನ್ನು ನಾವು ಸರಿಯಾಗಿ ತಿಳಿದುಕೊಳ್ಳಬೇಕು.

ಮಂಗಲ ಜೀವನವೆ ಧರ್ಮ

ಮಾನವನ ಜೀವನವನ್ನು ಉನ್ನತಿಯ ಮತ್ತು ಮಂಗಳಕರವಾದ ದಾರಿಯಲ್ಲಿ ಕೊಂಡು ಹೋಗುವಂಥ ಸ್ವಭಾವದ ಆ ಉಚ್ಚವಾದ ಭಾವನೆಗಳಿಗೆ ಧರ್ಮವೆಂದು ಹೆಸರು. ಭಗವಾನ್ ಮನುವು ಸತಧರ್ಮದ ಹತ್ತು ಲಕ್ಷಣಗಳನ್ನು ಹೇಳುವಾಗ, ಯಾವ ಗುಣಗಳನ್ನು ಹೊಂದುವುದರಿಂದ ಮನುಷ್ಯನ ಜೀವನ ಶುದ್ಧಿ, ಪವಿತ್ರತೆ, ಸಂಯಮ, ಉದಾರತೆ ಮತ್ತು ಪ್ರಗತಿ ಆಗುವುವೋ, ಅಂಥ ಗುಣಗಳನ್ನೆ ಹೇಳಿರುವನು. ಇಂಥ ಧರ್ಮವೆ ಮನುಷ್ಯ ಪ್ರಾಣಿಯ ಸ್ವಭಾವವು ಮತ್ತು ಅವನ ಅಂತರಾತ್ಮನ ಧ್ವನಿಯು ಆಗಿರುವುದು. ಇಂಥ ಧರ್ಮವನ್ನು ಆಚರಿಸಿದರೆ, ಅವನ ಹೃದಯದಲ್ಲಿ ಶಾಂತಿಯು ಹುಟ್ಟುವುದು, ವಿಪರೀತವಾದರೆ ಅಶಾಂತಿ ಹುಟ್ಟುವುದು.

ಎರಡು ಕಾಲಿನ ಈ ಪ್ರಾಣಿಯನ್ನು ನಿಜವಾದ ಅರ್ಥದಲ್ಲಿ ಮನುಷ್ಯನನ್ನಾಗಿ ಮಾಡುವ ಬಗ್ಗೆಯೆ ಧರ್ಮವು ಹುಟ್ಟಿತು. ಈ ಧಾರ್ಮಿಕ ಭಾವನೆಯು, ಮಾನವನ ಮನಸ್ಸಿನ ಅಂತರಾಳದಲ್ಲಿ ಶಾಶ್ವತವಾಗಿ ಉಳಿಯಬೇಕೆಂದೆ ವಿವಿಧ ಧಾರ್ಮಿಕ ಕ್ರಮಗಳು, ಪೂಜೆ ಪ್ರಾರ್ಥನೆಗಳು, ಕರ್ಮಕಾಂಡಗಳು, ವಿಶ್ವಾಸ, ಸಿದ್ಧಾಂತ, ಸಂಸ್ಕಾರ, ಶಾಸ್ತ್ರಗಳ ವ್ಯವಸ್ಥೆ ಆಯಿತು. ಇವೆಲ್ಲವುಗಳು ಸೇರಿ ಒಂದು 'ಸಮಾಜ ಧರ್ಮ'ವಾಗುವುದು.

ಹಿಂದು ಧರ್ಮ, ಕ್ರೈಸ್ತ ಧರ್ಮ, ಮುಸಲ್ಮಾನೀಯ ಧರ್ಮ, ಬೌದ್ಧ ಧರ್ಮವೆ ಮೊದಲಾದ ಎಲ್ಲ ಧರ್ಮಗಳು, 'ಸಮಾಜ ಧರ್ಮ' ವೆಂಬ ಒಂದೇ ಮೂಲ ತತ್ವದಿಂದ ಹುಟ್ಟಿ, ಅದರಿಂದಲೆ ಶಕ್ತಿಯನ್ನು ಪಡೆದು ಬೆಳೆದಿವೆ. ಮತ್ತು ಅದರ ಆಧಾರದಿಂದಲೆ ತಮ್ಮ ಹೊರ ರೂಪವನ್ನು ನಿರ್ಮಿಸಿಕೊಂಡಿವೆ. ಎಲ್ಲಾ 'ಸಮಾಜಧರ್ಮ'ಗಳು ಮನುಷ್ಯನ ಹೃದಯದಲ್ಲಿ ಸತ್ಯ, ಪ್ರೇಮ, ನ್ಯಾಯ, ಕರ್ತವ್ಯಪರಾಯಣತೆ, ಸದಾಚಾರ, ಜನಸೇವೆ, ಉದಾರತೆಯೇ ಮೊದಲಾದ ಉಚ್ಚ ಮಾನವೀಯ ಗುಣಗಳನ್ನು ನಿರ್ಮಿಸುವಂಥ ಉದ್ದೇಶದಿಂದಲೇ ಹುಟ್ಟಿದುವುಗಳಾಗಿವೆ.

ಎಲ್ಲಾ ಧರ್ಮಗಳ ಮೂಲ ಅಂತರಂಗದಲ್ಲಿ ಇಷ್ಟು ಸಮಾನತೆ ಏಕತೆ ಇದ್ದರೂ ಇಂದು ಜಗತ್ತಿನಲ್ಲಿ, ಹೆಚ್ಚೇಕೆ, ನಮ್ಮೀ ಪವಿತ್ರ ಭಾರತ ವರ್ಷದಲ್ಲಿ ಧರ್ಮದ ಹೆಸರಿನಲ್ಲಿ ಘೋರ ರಕ್ತಪಾತ, ಭಯಂಕರ ದ್ವೇಷ ಹಬ್ಬಿತ್ತು ಇದೆ. ಇದರ ಫಲ ಲಕ್ಷಗಟ್ಟಲೆ ಜನರ ಸರ್ವನಾಶ. ಇವೆಲ್ಲವನ್ನು ಹೊರ ದೃಷ್ಟಿಯಿಂದ, ಸ್ಥೂಲ ದೃಷ್ಟಿಯಿಂದ ನೋಡುವವರು, ಇಷ್ಟೆಲ್ಲ ಹಾನಿಗಳಿಗೂ ಕಷ್ಟಗಳಿಗೂ ಕಾರಣವಾದದ್ದು ಈ ಧರ್ಮ, ಇಂ.. ಧರ್ಮವನ್ನೆ ಸಮೂಲವಾಗಿ ನಾಶ ಮಾಡಿ.. ಜಗತ್ತು ಶಾಂತಿಯಿಂದ ಬಾಳಬಹುದು ಎಂಬ ವಿಚಾರಕ್ಕೆ ಬಂದಿರುವರು. ಆದರೆ ಇದು ಕೇವಲ ತಿಳುವಳಿಕೆ ಇಲ್ಲದ ಮಾತಾಗಿದೆ.

ಬಹುರೂಪಿ ಜಾತೀಯತೆ

ವರ್ಮಶ್ಯಾಗಿಯೂ ಧರ್ಮಗಳ ಕಾರಣಗಳಿಗಾಗಿಯೂ ಎಲ್ಲಿಯೂ ಈತನಕ ಜಗಳಗಳಾಗಿಲ್ಲ. ಜಗಳಗಳ ಕಾರಣ ಜಾತೀಯತೆ. ಈ ಜಾತೀಯತೆಯ ಅರ್ಥವು– ಸಂಕುಚಿತ ಬುದ್ಧಿ, ಸ್ವಾರ್ಥಪರತೆ, ಅಹಂಕಾರ, ಕ್ರೂರತೆ, ಕೋಪವೇ ಮೊದಲಾದ್ದುವಾಗಿರುವುವು. ಈ ಜಾತೀಯತೆಯು ಯಾವ ಕ್ಷೇತ್ರದಲ್ಲಿ ಬರುವುದೋ ಅಲ್ಲಿ ಭಯಂಕರ ದ್ವೇಷ, ಕೋಪ, ಕ್ರೂರತೆ, ಗಲಾಟೆಗಳು ಕೇಳಬರುವವು. ಈ ಜಾತೀಯ ಪೆಡಂಭೂತವು ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಇದು ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿಯೂ ತನ್ನ ವಿಷದ ಹಲ್ಲನ್ನು ತೋರಿಸುತ್ತಿದೆ. ಅಂತರ್‍ರಾಷ್ಟ್ರೀಯ ಕ್ಷೇತ್ರದಲ್ಲಿ ಇದು ಹರ್ವದ್ವೇಷವಾಗಿ ಕಾಣಿಸುವುದು. ಐರ್ಲೆಂಡಿನಲ್ಲಿ ಯಹೂದಿಗಳ ವಿರುದ್ಧ, ಆಫ್ರಿಕಾ ಖಂಡದಲ್ಲಿ ಭಾರತೀಯರ ವಿರುದ್ಧ, ಅಮೇರಿಕದಲ್ಲಿ ನಿಗ್ರೋಗಳ ವಿರುದ್ಧ ಇದೆ ಜಾತೀಯತೆಯು ಕೆಲಸ ಮಾಡಿರುವುದು. ದೇಶಭಕ್ತಿಯ ಹೆಸರಿನಲ್ಲಿ ಒಂದು ದೇಶದವರು ತಮ್ಮ ದೇಶದ ಲಾಭಕ್ಕೋಸ್ಕರವಾಗಿ ಇನ್ನೊಂದು ದೇಶವನ್ನು ಕೊಳ್ಳೆ ಮಾಡುವರು. ಜರ್ಮನು ಜನರ ಮೇಲೆಯೂ ಇಟಲಿಯು ಅಬಿಸೀನಿಯದ ಮೇಲೆಯೂ ಜಪಾನಿಯು ತನ್ನ ನೆರೆಹೊರೆಯ ರಾಷ್ಟ್ರಗಳ ಮೇಲೆಯೂ ಆಕ್ರಮಣ ಮಾಡಿತು. ಭಾರತ ವರ್ಷವನ್ನು ಸಹ ಇದೇ ಭೂತವು ಇನ್ನೂರು ವರ್ಷ ಗುಲಾಮತನದಲ್ಲಿ ಇಟ್ಟಿತು.

ಆರ್ಥಿಕ ಕ್ಷೇತ್ರದಲ್ಲಿ ಇದು ಬೇರೆಯೆ ಹೆಸರಿನಿಂದ ಕರೆಯಲ್ಪಡುವುದು. ಇಲ್ಲಿ ಇದರ ಹೆಸರುಗಳು ಬಂಡವಲಶಾಹಿ, ಸಾಮ್ರಾಜ್ಯವಾದವೇ ಮೊದಲಾದವಾಗಿರುವವು. ಇಲ್ಲಿ ಒಂದು ವರ್ಗವು ತನ್ನ ಲಾಭಕ್ಕೋಸ್ಕರವಾಗಿ ಅಸಂಖ್ಯ ಜನರನ್ನು ಶೋಷಿಸಿ, ಹಸಿವು ತಾಪತ್ರಯಗಳ ಬಲೆಗೆ ಅವರನ್ನು ನೂಕಿಸುವುದು. ಇಂಥ ಒಂದು ವರ್ಗದ ಜನರ ಸ್ವಾರ್ಥದಿಂದಲೇ ಒಂದೇ ಬಂಗಾಲದಲ್ಲಿ ಲಕ್ಷಗಟ್ಟಲೆ ಜನರು ಅನ್ನಾನ್ನಗತಿಕರಾಗಿ, ಹಸಿವಿನಿಂದ ತಳಮಳಿಸಿ ಸತ್ತರು.

ಸಾಮಾಜಿಕ ಕ್ಷೇತ್ರದಲ್ಲಿ ಇದು ಸ್ಪೃಶ್ಯಾಸ್ಪೃಶ್ಯತೆ, ಸ್ತ್ರೀ, ಪುರುಷ, ಜಾತಿ, ಪಾತಿಗಳ ರೂಪದಲ್ಲಿ ಎದುರು ಬರುವುದು. ಇಲ್ಲಿ ಸಹ ಒಂದು ವರ್ಗವು, ತನ್ನ ವಂಶವು ದೈವದತ್ತವಾಗಿ ಬಂದಿರುವಂಥವಾಗಿದೆ. ಇತರ ವರ್ಗವೆಲ್ಲವೂ ಕೀಳೆಂದು ಭಾವಿಸಿ, ತನ್ನ ವರ್ಗದ ಜನರ ಲಾಭಕೋಸ್ಕರವಾಗಿ ಇತರವರ್ಗದವರಿಗೆ ಯಾವ ತರದ ಹಾನಿ ಮಾಡಲೂ ಹಿಂಜರಿಯುವುದಿಲ್ಲ. ಮುಸ್ಲಿಂ ಲೀಗಿನವರು ಈ ಜಾತೀಯ ಪೆಡಂಭೂತದ ಸಹಾಯದಿಂದಲೆ ಒಂದು ಉಗ್ರ ವಿಷವನ್ನು ನಿರ್ಮಾಣ ಮಾಡಿದರು. ಇದರ ಪರಿಣಾಮವೇನಾಯಿತೆಂದು ಬರೆಯುವ ಅವಶ್ಯಕವಿಲ್ಲ. ನಾವು ಪಂಜಾಬ, ಬಂಗಾಲ, ಸಿಂಧಗಳ ಜೀವಂತ ಉದಾಹರಣೆಗಳನ್ನು ಓದಿರುವೆವು, ಕೇಳಿರುವೆವು, ತಿಳಿದಿರುವೆವು. ಹಿಂದುಗಳಲ್ಲಿ ಸಹ ಒಳಗಿಂದೊಳಗೆ ಈ ಜಾತೀಯತೆಯ ವಿಷಯವು ತುಂಬಾ ತುಂಬಿದೆ. ಇದರ ಉದಾಹರಣೆ ಬೇರೆ ಬೇಡ, ನಮ್ಮಲ್ಲಿಯ ಸಾವಿರಾರು ಜಾತಿಗಳು ಮತ್ತು ಈ ಜಾತಿಗಳ ಹೆಸರಿನಿಂದ ನಿತ್ಯವೂ ನಡೆಯುವ ನೂರಾರು ಜಗಳಗಳೆ ಇದಕ್ಕೆ ನಿದರ್ಶನ. ಇದೇ ಮಾತು ಸ್ತ್ರೀಯರ ವಿಷಯಕ್ಕೂ ಅನ್ವಯಿಸುವದು. ಅವಳು ಸ್ತ್ರೀಯಾಗಿ ಜನ್ಮತಾಳಿರುವಳೆಂಬ ಒಂದೇ ಕಾರಣದಿಂದ, ಯಾವ ಹಕ್ಕುಗಳನ್ನು ಪುರುಷನು ನಿರ್ಭೀತಿಯಿಂದ ಉಪಯೋಗಿಸುವನೋ ಅವೇ ಹಕ್ಕುಗಳನ್ನು ಸ್ತ್ರೀಯು ಅಪೇಕ್ಷೆಪಟ್ಟರೆ ನಮ್ಮ ಕಣ್ಣು ಕೆರಳುವುದು.

ವೈಯಕ್ತಿಕ ಕ್ಷೇತ್ರದಲ್ಲಿ ಈ ಜಾತೀಯತೆಯು ಪಕ್ಷಪಾತ, ಸ್ವಾರ್ಥ, ಮೋಹ, ಮದ, ಅಹಂಕಾರ, ಮತ್ಸರ, ಲೋಭ, ದ್ವೇಷ, ಕೋಪವೇ ಮೊದಲಾದ ರೂಪಗಳಿಂದ ಕಾಣಿಯುವುದು.

ಈ ಜಾತೀಯತೆಯೆಂಬುದು ಒಂದು ಬಣ್ಣದ ಕನ್ನಡಕದಂತಿರುವದು. ಇದನ್ನು ಯಾರು ಧರಿಸುವನೊ, ಅವನಿಗೆ, ಸ್ವಾರ್ಥ, ಅಹಂಕಾರದಿಂದ ತುಂಬಿದ ವಸ್ತುಗಳೆ ತೋರುವವು. ಈ ದೃಷ್ಟಿಕೋಣದಿಂದ ವಿಚಾರ ಮಾಡುವವನು, ತನ್ನ ವರ್ಗದ ಲಾಭಗೋಸ್ಕರ, ಪರರ ವಿನಾಶ ಮಾಡಲು ಸ್ವಲ್ಪವೂ ಹಿಂಜರಿಯುವುದಿಲ್ಲ. ಇಡೀ ವಿಶ್ವದ ಎಲ್ಲ ತರಹದ ಜಗಳ, ಗಲಾಟೆಗಳ ಮೂಲ ಬೀಜವು ಇದೇ ಜಾತೀಯತೆಯಾಗಿರುವುದು.

ಇಂದು ಭಾರತ ವರ್ಷದಲ್ಲಿ, ಈ ಜಾತೀಯತೆಯು ಹಿಂದು ಮುಸ್ಲಿಂ ಜಗಳದ ರೂಪದಲ್ಲಿ ತನ್ನ ನಗ್ನ ನೃತ್ಯವನ್ನು ಪ್ರಾರಂಭಿಸಿರುವದು. ಆದರೆ ಈ ಭೂತದ ದೋಷವನ್ನು ಧರ್ಮದ ಮೇಲೆ ಹೇರಿದರೆ, ಹೇಗಾಗುವುದೆಂದರೆ, ಒಂದು ಪಿಶಾಚಿಯು, ಒಂದು ಪಾರಿವಾಳದ ಪತ್ತಿರೆ ಕುಳಿತುಕೊಂಡು ಒಂದು ಮಗುವನ್ನು ತಿಂದರೆ, ಪಾರಿವಾಳವೆ ಮಗುವನ್ನು ತಿಂದಿತು ಎಂದು ಹೇಳಿದರೆ ಹೇಗಾಗುವುದೊ ಹಾಗೆ ಆಗುವುದು. ಧರ್ಮವನ್ನು ನಾಶ ಮಾಡಿದರೆ ಜಾತೀಯತೆಯು ನಾಶವಾಗಲಾರದು. ಹರಿಂತು ಅದರ ಒಂದೇ ಒಂದಾದ ಬಂಧನವು ನಾಶವಾಗಿ ಪ್ರಳಯಂಕಾರಿ ರೂಪದಲ್ಲಿ ಅದು ಸಂಚರಿಸಿದೆ.

ಯಾವನಾದರೂ ಕಳ್ಳನು ಕಂಬಳಿ ಹೊದ್ದುಕೊಂಡು ಕಳ್ಳತನ ಮಾಡಿದರೆ, ಕಳ್ಳತನದ ದೋಷವು ಕಂಬಳಿಯಲ್ಲಿರುವುದೇ? ಹೇಳಿ. ಎಮ್ಮೆ ಹಾಲು ಉತ್ಪತ್ತಿಮಾಡುವವರು. ಅದರೆ ಹಾಲು ಉತ್ಪತ್ತಿಯೂ ಅವರು ಬೇಕೇ ಮಾಡಾಗುವವೆ? ಜಗಳ ತಂಟೆಗಳು ಎಂತು ಬೇರೆ ಬೇರೆ ಧರ್ಮದವರಿಲ್ಲ, ಧರ್ಮದ ಹೆಸರಿನಿಂದಲೇ ಜಗಳಾಡಬಹುದು. ಆದರೆ ಜಗಳದ ಕಾರಣವು ಧರ್ಮವಾಗಲಾರದು. ಬೆಳೆ ಬೆಳೆಸುವಾಗ ಇಬ್ಬರು ರೈತರೊಳಗೆ ಪರಸ್ಪರ ಜಗಳವಾಗಬಹುದು. ಇದರ ಫಲ ಬೆಳೆಯನ್ನೆ ನಾಶ ಮಾಡಿದರೆ ಸರಿಯಾಗಲಾರದು. ಜಗಳದ ಮೂಲ ಕಾರಣ ಶೋಧ ಮಾಡಿ ಬಿಡಿಸಬೇಕು. ಕಳ್ಳನು ಕಂಬಳಿಯನ್ನು ಹೊದ್ದುಕೊಳ್ಳುವರೆಂದು ಕಂಬಳಿಯನ್ನು ನಾಶಮಾಡಿದರೆ ಕಳ್ಳತನವು ನಿಲ್ಲುವದೆ? ಕೆಲವರು ವಿದ್ಯಾವಂತರು ಕೆಟ್ಟ ಕೆಲಸ ಮಾಡುವರೆಂದು ವಿದ್ಯೆ ಕಲಿಸುವದನ್ನು ನಿಲ್ಲಿಸುವದೆ? ಇದೇ ಪ್ರಕಾರ ಜಾತೀಯತೆಯ ದೋಷವನ್ನು ಧರ್ಮದ ಮೇಲೆ ಹೇರಿದರೆ ತಪ್ಪಾಗುವುದು. ಧರ್ಮವು ಇದಕ್ಕೆ ಉತ್ತರದಾಯಿ ಅಲ್ಲ– ಧರ್ಮವು ಮನುಷ್ಯನ ಅಂತರ ಮತ್ತು ಬಾಹ್ಯ ಪರಿಸ್ಥಿತಿಗಳಲ್ಲಿ (ಮಾನಸಿಕ ಮತ್ತು ದೈಹಿಕ) ಸುಖ ಶಾಂತಿಯನ್ನು ನಿರ್ಮಿಸುವದಾದರೆ, ಜಾತೀಯತೆಯು ಅವನಲ್ಲಿದ್ವೇಷ ಮತ್ತು ಹಿಂಸೆಯನ್ನು ಬೆಳೆಸುವದು. ಆದುದರಿಂದ ನಾವು ಧರ್ಮ ಮತ್ತು ಜಾತಿಯತೆಗಿರುವ ಸಂಪೂರ್ಣ ಅಂತರವನ್ನು ಸರಿಯಾಗಿ ತಿಳಿದುಕೊಳ್ಳಬೇಕು ಮತ್ತು ಧರ್ಮದ ಶ್ರೇಷ್ಠತ್ವ ಹಾಗೂ ಜಾತೀಯತೆಯ ತುಚ್ಛತ್ವವನ್ನು ಸಹ ಸರಿಯಾಗಿ ಅರಿತುಕೊಳ್ಳಬೇಕು.

ಋಷಿವರ್‍ಯ ಗಾಂಧೀಜಿಯು ಈ ಯುಗದ ಸರ್ವಶ್ರೇಷ್ಠ ಧರ್ಮಾತ್ಮರಾಗಿದ್ದರು. ಇವರ ಜೀವನವು ಧರ್ಮದ ಸಂಪೂರ್ಣ ಆದರ್ಶಗಳಿಂದ ತುಂಬಿತುಳುಕುವದಾಗಿತ್ತು. ಧರ್ಮದ ಮೇಲೆ ಇವರಿಗೆ ಅಪಾರವಾದ ಶ್ರದ್ಧೆ ಇತ್ತು. ಜಾತಿಯತೆಯ ವಿರುದ್ಧ ಪ್ರತಿಯೊಂದು ಕ್ಷೇತ್ರದಲ್ಲಿಯೂ ತುಂಬಿರುವ ಈ ಜಾತಿಯಭೂತದ ವಿರುದ್ಧ ಇವರು ಹೋರಾಡುತ್ತಿದ್ದರು ಮತ್ತು ಇದೇ ಯುದ್ಧದಲ್ಲಿ ಒಬ್ಬ ವೀರ ಸೇನಾಪತಿಯು ಹಾಗೆ ವೀರ ಮರಣವನ್ನು ಹೊಂದಿದರು. ಈ ಮಹಾವಿಭೂತಿಯು, ಆ ಪವಿತ್ರವಾದ ಉಚ್ಚ ಆದರ್ಶಗಳನ್ನು ಮರೆಯದೆ ಅದರಂತೆ, ನಮ್ಮ ಆ ಮಹಾನ್ ಧರ್ಮದ ಸಂಘಟನೆ, ಪ್ರಚಾರ ಮತ್ತು ಅಭಿವೃದ್ಧಿಗೋಸ್ಕರ ತನು ಮನ ಧನಗಳಿಂದ ಯತ್ನಗೈಯುವ. ಆದರೆ ಎಚ್ಚರಿಕೆ, ಆ ಜಾತೀಯತೆಯ ಪೆಡಂಭೂತವು ನಿಮ್ಮನ್ನು ಆಕ್ರಮಣ ಮಾಡೀತು! ಒಬ್ಬ ವೀರಸಿಪಾಯಿಯಂತೆ ಅದರೊಡನೆ ಹೋರಾಡಿರಿ.

ಪಾಟಣಾ ಸೆಕ್ರೆಟೇರಿಯಟ್ಟದಲ್ಲಿರುವ ಪೋಲೀಸ ಇನಸ್ಪೆಕ್ಟರ ಜನರಲ್ ಕಚೇರಿಯಲ್ಲಿದ್ದ ಧಾಯರಲೆಸ್ ಟ್ರಾನ್ಸಮಿಟರದ ಯಂತ್ರವೇ ಮಾಯವಾಗಿದೆ. ಇದನ್ನು ಬಲವಾದ ಕಾವಲಿದ್ದ ಸ್ಥಳದಲ್ಲಿಯೇ ಇಡಲಾಗಿತ್ತು. ಈ ಯಂತ್ರವು ಇಡೀ ಹಿಂದುಸ್ತಾನದಲ್ಲಿಯೇ ಅತ್ಯಂತ ಶ್ರೇಷ್ಠತರಗತಿಯದಾಗಿತ್ತು. ಈ ಬಗ್ಗೆ ಒಬ್ಬ ಪೋಲೀಸ ಕಾನ್‍ಸ್ಟೇಬಲನನ್ನು ಬಂಧಿಸಲಾಗಿದೆ.

ಉಲ್ಲಾಸ (ಕೆಂಬನಿ)

ಮುಂಜಾವು ಭುಸುವ ಮುಗಿಲಿಗೆ ಬೇ—
ನೋಟಿಕೆ ಎಂದವೆ

ಮುಮುಮುಸುಕುವ ಸಾವಿನ ಹೊಳೆ
ಈಸಲೆಂದು ತೆರೆಳಿ ೧

ಕೃಷ್ಣಯ ಜೋಕು ಇಲ್ಲವಾಯ್ತು
ಆ ನಗೆ ಮೊಗ ನೋಟ!

ಬಿರಿಯಿತು ಮುದ, ಸರಿಯಿತು ಪದ
ಹೊರಳಲು ಯಮನಾಟ ೨

ಅಕ್ಕ–ಮಾವ, ಅಪ್ಪ– ಅವ್ವ, ಅಜ್ಜ
ಎಲ್ಲ ಪರಿಯ

ಮುಗಿವುದೆಂತೊ ತೊದಲ್ನುಡಿಗಳ
ಸುಂದರ ಮುಯುಕರಿಯ ೩

ರಿಕ್ತಹಸ್ತ ತಂದೆ ಅಕ್ಕ
ಸನ್ನ ತಾಯಿ ಕಂದು

ಶೋಕ ಸಪ್ತವಾರಿಧಿಗಳ—
ನೆಲ್ಲ ನುಂಗಿಕೊಂಡು ೪

ಅಕ್ಕರೆಯಿಂದೊರೆಲು ತಿಹರು
ಕಂದ, ಕಂಡೆ ಹೇಳು?

ಕೀನಿಲ್ಲದ ಕಪಟನಾಟ್ಯ—
ದೆಂಥ ಹಾಳು ಬಾಳು ೫

ಬಾ, ಮುದ್ದಿನ ಉಲ್ಲಾಸನೆ
ಮತ್ತೊಮ್ಮೆಯೆ ಇಳೆಗೆ!

ಸಂತೈಸಲು ಹಡೆದ ತಾಯ
ಹನಿಸಿ, 'ಒಲ್ಮೆ– ಬೆಳೆ' ಗೆ ೬

ನಿಸ್ಸಾಲಯ ನೀನಿರದಿರೆ
ಬಟ್ಟಬಯಲು ಕಾನೆ

ಯಾವಸೊಗವು ಬಂದರೇನು
ನಿನ್ನನ್ನಂತು ಕಾ— ೭

ಎಳೆ ಜೀವಕೆ ಮುಕ್ತಿಪಥದ
ಕಾಳ್ಗಿಚ್ಚಿನ ದಾಟಿ!

ತೆರೆದಿತು! ಸರಿ, ಸರಿಯಿತು ಬಾಳ್—
ಬೆಂಕಿಯನ್ನು ತೂರಿ! ೮

ಸರಲ ನಡೆಯ ದೇವಭಾವ
ಕರುಣೆಯಾಂತ ಜನವು

ಬೆಂದೊಡಲಿನ ಪರಿತಾಪವು
ಅತನಾಜ್ಞೆ ಮನವು! ೯

ಅನ್ಯಾಯದ ಅಂಧಕಾರ
ನೋಡಿದೆಡೆಯ ಮುಸುಕಿ

ನಿಸ್ವಾರ್ಥದ ಬೆಳಕಿನ ಸೆಲೆ
ಬಂದೊಂದೇ ಹಿಸುಕಿ ೧೦

ವಜ್ರದ ಪಂಜರವಿದ್ದರು
ಭೇದಿಸಿ ಬಾ ದೊರೆಯೆ!

ನಿಜ ಒಲವಿಗೆ ಕಣ್ಣಾಗಿರೆ
ನಿನಗಿದೊಂದು ಹೊರೆಯೆ? ೧೧

—ರಾಮಚಂದ್ರ ಕೀಡಬಾಳ, ಮುಂಬಯಿ

ಸ್ವತಂತ್ರ ಭಾರತದ ವಿದೇಶ ನೀತಿ

(೩ ನೇ ಪುಟದಿಂದ)

ರುವ ಹಿಂದೀಯರಿಗೆ ಅಲ್ಲಿನ ನಾಗರಿಕತ್ವವನ್ನು ಕೊಡುವ ಒಂದು ಮಸೂದೆ ಸಿಂಹಳ ಶಾಸನ ಸಭೆಯ ಮುಂದಿದೆ. ಆ ಬಗ್ಗೆ ಭಾರತ ಸರಕಾರ ಸಿಂಹಳ ಸರಕಾರದೊಡನೆ ಚರ್ಚೆಯನ್ನು ನಡೆಸಿದೆ.

ಬ್ರಹ್ಮದೇಶದಲ್ಲಿರುವ ಹಿಂದೀಯರ ಪ್ರಶ್ನೆ ಮುಖ್ಯತಃ ಅವರ ನಾಗರಿಕತ್ವ, ವಲಸೆಯ ಸಮಸ್ಯೆ ಮತ್ತು ಬ್ರಹ್ಮೀ ಸರಕಾರದ ಭೂಕಾಯಿದೆಯ ಧೋರಣೆ ಇವುಗಳನ್ನು ಸಂಬಂಧಿಸಿದ್ದು. ಕೆಲವು ಕರಾರುಗಳ ಮೇಲೆ ಬ್ರಹ್ಮವಾಸಿ ಹಿಂದೀಯರಿಗೆ ಬ್ರಹ್ಮೀ ನಾಗರಿಕತ್ವವನ್ನು ಕೊಡುವ ಕಾಯಿದೆ ಈಗಾಗಲೆ ಬ್ರಹ್ಮೀ ಶಾಸನ ಸಭೆಯಲ್ಲಿ ಅಂಗೀಕೃತವಾಗಿರುವದರಿಂದ ಆ ಪ್ರಶ್ನೆ ಇತ್ಯರ್ಥವಾದಂತೆಯೆ ಆಗಿದೆ. ಹೊಸದಾಗಿ ಬ್ರಹ್ಮದೇಶಕ್ಕೆ ಭಾರತೀಯರನ್ನು ವಲಸೆ ಕಳಿಸುವದರಲ್ಲಿ ಹಿಂದೀ ಸರಕಾರಕ್ಕೆ ಆಸ್ಥೆಯಿಲ್ಲ. ಈಗಾಗಲೆ ವಲಸೆ ಹೋಗಿರುವವರಿಗೆ ಇಲ್ಲಿಗೆ ಬಂದುಹೋಗುವ ಸೌಕರ್ಯವಿರಬೇಕೆಂಬದಿಷ್ಟೇ ನಮ್ಮ ಪ್ರಯತ್ನ. ಆದರೆ ಬ್ರಹ್ಮೀ ಸರಕಾರದ ಭೂಧಾರಣೆಯ ಧೋರಣೆ ಮಾತ್ರ ವಾದಗ್ರಸ್ತವಾಗಿದೆ. ಬ್ರಹ್ಮೀ ಸರಕಾರ ಈಚೆಗೆ ಪಾಸುಮಾಡಿರುವ ಕೆಲ ಕಾಯಿದೆಗಳ ಪರಿಣಾಮವಾಗಿ ಅಲ್ಲಿ ಭೂಮಿಗಳನ್ನು ಕೊಂಡುಕೊಂಡಿರುವ ಭಾರತೀಯರ ಒಡೆತನವನ್ನು ಸರಿಯಾದ ಪ್ರತಿಫಲಕೊಡದೆ ಕಸಿದುಕೊಂಡಂತಾಗಿದೆ. ಬ್ರಹ್ಮವಾಸಿ ಹಿಂದೀಯರಿಗೆ ಬ್ರಹ್ಮದೇಶದ ನಾಗರಿಕರಾಗಿರಲು ಒಪ್ಪುವ ಬಿಡುವ ಅವಕಾಶ ಕೊಡುವ ಮೊದಲೇ ಈ ಕ್ರಮ ಕೈಕೊಂಡದ್ದು ಯೋಗ್ಯವಲ್ಲೆಂದು ಭಾರತ ಸರಕಾರ ಪ್ರತಿಭಟಿಸಿದೆ. ಭೂಮಿಯ ರಾಷ್ಟ್ರೀಕರಣವೇ ಬ್ರಹ್ಮೀ ಸರಕಾರದ ಉದ್ದೇಶವಾಗಿರುವಂತಿದೆ. ಆದರೆ ಇದರಿಂದ ಅನೇಕಾನೇಕ ಭಾರತೀಯ ಭೂ ಮಾಲಕರ ಹಿತ ಸಂಬಂಧಗಳಿಗೆ ಧಕ್ಕೆ ಬರುವದರಿಂದ ಯೋಗ್ಯ ಪರಿಹಾರ ಕೊಡಬೇಕೆಂಬ ತತ್ವವನ್ನು ಅಂಗೀಕರಿಸಿದ ಬಳಿಕವೇ ಕಾಯಿದೆ ಬರಬೇಕೆಂಬ ತತ್ವವನ್ನು ಬ್ರಹ್ಮೀ ಸರಕಾರ ಒಪ್ಪುವಂತೆ ಮಾಡಲು ಭಾರತ ಸರಕಾರ ಹೆಣಗುತ್ತಿದೆ.

ಮಲಯದಲ್ಲಿ ಜಪಾನಿಗಳ ಆಕ್ರಮಣ ಕಾಲದಲ್ಲಿ ನಡೆದ ಭೂಮಿ ಮತ್ತು ಹಣಕಾಸಿನ ವ್ಯವಹಾರದ ವಿಷಯದಲ್ಲಿ ಎರಡು ಮಸೂದೆಗಳು ವಿಚಾರದಲ್ಲಿವೆ. ಇದರಲ್ಲಿ ಅನೇಕ ಹಿಂದೀಯರ ಹಿತ ಸಂಬಂಧವಿರುವದರಿಂದ ಅವರ ಪರವಾಗಿ ಮಲಯ ಸರಕಾರದ ಮುಂದೆ ಆವಶ್ಯಕ ಪ್ರತಿಪಾದನೆಗಳನ್ನಿಡಲಾಗಿದೆ.

ಮಲಯ ಮತ್ತು ಸಿಂಗಾಪುರಗಳಲ್ಲಿ ಶಾಸನ ಸಭೆಗಳಲ್ಲಿ [illegible]ದೀಯರಿಗೆ ಯೋಗ್ಯ ಪ್ರಾತಿನಿಧ್ಯ [illegible] [illegible]ಲ್ಲಿ ವಲಸೆಯನ್ನು ಪ್ರತಿ[illegible]ಬಗಳು ಪಾಸು ಮಾಡಲ್ಪ[illegible] ವಿರುದ್ಧ ಹಿಂದುಸ್ತಾನ ಸರಕಾರ ಪ್ರತಿಭಟಿಸಿದೆ. ಅಲ್ಲಿ ಹಿಂದೀಯರ ವಿರುದ್ಧ ನಡೆದಿರುವ ಪಕ್ಷಪಾತವನ್ನೂ ಪ್ರತಿಭಟಿಸಲಾಗಿದೆ.

ಫ್ರೆಂಚ ಭಾರತ

ಭಾರತ ಮತ್ತು ಫ್ರೆಂಚ ಸರಕಾರಗಳ ನಡುವೆ ಆದ ಮಾತುಕತೆಗಳ ಪರಿಣಾಮವಾಗಿ ಭಾರತದಲ್ಲಿರುವ ೫ ಫ್ರೆಂಚ ಭಾಗಗಳ ಜನರಿಗೆ ತಮ್ಮ ಭವಿಷ್ಯವನ್ನು ಅನಿರ್ಬಂಧ ವಿಚಾರ ವಿನಿಮಯದ ಮೂಲಕ ನಿರ್ಧರಿಸಿಕೊಳ್ಳಲು ಫ್ರೆಂಚ ಸರಕಾರ ಅನುಮತಿಕೊಟ್ಟಿದೆ. ಪಾಂಡಿಚೇರಿ? ಮದ್ರಾಸ, ಮುಂಬಯಿ ಮತ್ತು ಓಡಿಸಾದಲ್ಲಿ ಅಲ್ಲಲ್ಲಿದ್ದ ಸಣ್ಣಪುಟ್ಟ ಫ್ರೆಂಚ್ “ಲೋಜ” ಗಳು ಭಾರತದಲ್ಲಿ ಲೀನವಾಗಿವೆ.

ಯುಕ್ತ ರಾಷ್ಟ್ರಸಂಘ

ಯುಕ್ತರಾಷ್ಟ್ರ ಸಂಘದ ತತ್ವದಲ್ಲಿ ಭಾರತಕ್ಕೆ ಶ್ರದ್ಧೆಯಿರುವದರಿಂದ ಅದು ಅದರ ಚಟುವಟಿಕೆಗಳಲ್ಲೆಲ್ಲ ಸಹಕರಿಸುತ್ತಿದೆ. ಪರಾಧೀನ ದೇಶಗಳ ವಿಷಯದಲ್ಲಿ ತನಗೆ ಪರಮ ಸಹಾನುಭೂತಿಯಿರುವದರಿಂದ ಅವುಗಳಿಗೆ ಸಹಾಯ ಮಾಡಲು ಸಾಧ್ಯವಾದುದನ್ನೆಲ್ಲ ಅದು ಮಾಡುತಿದೆ. ಇದೇ ದೃಷ್ಟಿಯಿಂದ ಇಂಡೋನೇಶಿಯಾಕ್ಕೂ ಡಚ್ಚರಿಗೂ ನಡೆದ ತಿಕ್ಕಾಟದ ಪ್ರಶ್ನೆಯನ್ನು ಜುಲೈ ೧೯೪೭ ರಲ್ಲಿ ಅದು ಭದ್ರತಾ ಮಂಡಲದ ಮುಂದೆ ಎತ್ತಿತು. ನೈಋತ್ಯ ಆಫ್ರಿಕೆಯನ್ನು ದಕ್ಷಿಣ ಆಫ್ರಿಕೆಯಲ್ಲಿ ಲೀನಗೊಳಿಸುವ ಯೋಜನೆಯ ವಿರುದ್ಧ ಯುಕ್ತರಾಷ್ಟ್ರ ವಿಶ್ವಸ್ತ ಮಂಡಲದಲ್ಲಿ ನಡೆದ ಹೋರಾಟದ ನಾಯಕತ್ವವನ್ನೂ ಭಾರತ ವಹಿಸಿತು.

ಆದರೆ ಯುಕ್ತ ರಾಷ್ಟ್ರ ಸಂಘದಮುಂದಿರುವ ಎಲ್ಲ ಪ್ರಶ್ನೆಗಳಲ್ಲೂ ಭಾರತ ಸ್ವತಂತ್ರವಾದ ನಿಲುವನ್ನೇ ಅಂಗೀಕರಿಸಿದೆ. ಕ್ಷಣಿಕ ಲಾಭಕ್ಕಾಗಿ ಅದು ಯಾವುದೊಂದು ಗುಂಪಿನ ಬೆನ್ನು ಕಟ್ಟಿಲೊಪ್ಪಿಲ್ಲ. ಪಾಲಿಸ್ತಾನದ ವಿಭಜನೆಯ ವಿರುದ್ಧ ಗ್ರೀಸಿನಲ್ಲಿರುವ ವಿದೇಶಿ ಸೈನ್ಯಗಳು ಹಿಂತೆಗೆದು ಕೊಳ್ಳಲ್ಪಡಬೇಕೆಂಬ ಸೋವಿಯಟ್ ಗೊತ್ತುವಳಿಯ ಪರವಾಗಿ, ದಕ್ಷಿಣ ಕೊರಿಯದಲ್ಲಿ ಚುನಾವಣೆಗಳನ್ನು ನಡೆಸಬೇಕೆಂಬ ಅಮೇರಿಕನ್ ಸೂಚನೆಯ ಪರವಾಗಿ ಮತ ಕೊಟ್ಟು ಅದು ತನ್ನ ನಿಷ್ಪಕ್ಷಪಾತ ನಿಲುಮೆಗೆ ನಿದರ್ಶನಕೊಟ್ಟಿದೆ. ಈ ಸ್ವತಂತ್ರ ವರ್ತನೆಯೂ ಗುಂಪುಗಳ ರಾಜಕಾರಣದಿಂದ ದೂರ ಉಳಿದದ್ದೂ ಹಾನಿಕರವಾಯಿತೆಂದು ಸಂಕುಚಿತ ದೃಷ್ಟಿಯಿಂದ ನೋಡುವವರಿಗೆ ತೋರಬಹುದು. ಆದರೆ ಪಂ. ಜವಾಹರಲಾಲರು ಡಿಸೆಂಬರ ೪ ಕ್ಕೆ ಭಾರತ ಪಾರ್ಲಮೆಂಟಿನಲ್ಲಿ ಹೇಳಿದಂತೆ, “ಸಂಕುಚಿತ ರಾಷ್ಟ್ರೀಯತೆಯಿಂದ ಪ್ರೇರಿತವಾದ ಧೋರಣೆಯನ್ನನುಸರಿಸಿದರೆ ಜನಜಂಗುಳಿಗೇನೋ ಜಾತೀಯತೆಯ ಕೂಗಿನಿಂದ ಬಂದಂತೆ ಕ್ಷಣಿಕ ಉತ್ತೇಜನ ದೊರೆಯಬಹುದು. ಆದರೆ ಅದು ರಾಷ್ಟ್ರಕ್ಕೂ ಹಿತವಲ್ಲ, ಅಂತರ್ ರಾಷ್ಟ್ರೀಯ ದೃಷ್ಟಿಯಿಂದಲೂ ಒಳಿತಲ್ಲ. ಏಕೆಂದರೆ ಅದರಿಂದ ನಾವು ಕೊನೆಯ ಶ್ರೇಯಸ್ಸನ್ನು ಕಡೆಗಣಿಸಿ ನಮ್ಮ ಹಿತಕ್ಕೇ ಗಂಡಾಂತರವನ್ನು ತಂದುಕೊಂಡಂತಾಗುವದು. ಆದುದರಿಂದ ನಾವು ಜಾಗತಿಕ ಶಾಂತಿಗೆ ತೊಡಕಾಗದಂತೆ ಭಾರತದ ಹಿತರಕ್ಷಣೆ ಮಾಡಬೇಕೆನ್ನುತ್ತೇನೆ. ಅದರಿಂದ ಇತರ ದೇಶಗಳೊಡನೆ ನಾವು ಸ್ನೇಹದಿಂದಲೇ ಇರಬೇಕೆನ್ನುತ್ತೇವೆ. ಇನ್ನು ಅವರಾಗಿ ತೊಂದರೆಗಳನ್ನುಂಟುಮಾಡಿದರೆ ಮಾತ್ರ ಯತ್ನವಿಲ್ಲ.”

ನ್ಯಾಯದ ತಳಹದಿಯ ಮೇಲೆ ನಿಂತ ಈ ವಿದೇಶ ಧೋರಣೆಗೆ ಕ್ಷಣಿಕ ಯಶಸ್ಸು ದೊರಕದಿದ್ದರೂ ದೂರದೃಷ್ಟಿಯಿಂದ ನೋಡಿದರೆ ಅದೇ ಹಿತಕಾರಿಯೆಂದು ಒಪ್ಪಲೇಬೇಕಾಗುವದು.

ಗೋಪಾಲರಾವ ಸಮಿತಿ ನಿರ್ಣಯ ವಿರುದ್ಧ ಅಪೀಲು ಇಲ್ಲ

ಮೈಸೂರು ಸರಕಾರದ ಸುಗ್ರೀವಾಜ್ಞೆ

ಬೆಂಗಳೂರಿನ ವ್ಯಾಪಾರಸ್ಥರಾದ ಶ್ರೀ ಗೋಪಾಲರಾವ ಇವರ ಆರ್ಥಿಕ ವ್ಯವಹಾರದ ಮೂಲಕ ಸಂಸ್ಥಾನದ ಅನೇಕ ಪ್ರಜೆಗಳು ಹಾನಿಗೆ ಒಳಗಾದರೆಂಬ ಆರೋಪದ ವಿಚಾರಣೆಗಾಗಿ ಮೈಸೂರು ಸರಕಾರವು ಗೋಪಾಲರಾವ ವಿಚಾರಣಾ ಸಮಿತಿಯೆಂಬ ಸಮಿತಿಯನ್ನು ನೇಮಿಸಿರುವದಷ್ಟೆ. ನ್ಯಾಯಮೂರ್ತಿ ಮೇದಪ್ಪ ಶ್ರೀ ಎಸ್ ಸಿಜಲಿಂಗಪ್ಪ ಮತ್ತು ಕುಮಕೂರು ಸುಬ್ರಹ್ಮಣ್ಯಂ ಇವರು. ಈ ಸಮಿತಿಯ ಸದಸ್ಯರಿರುವವರು ಈ ಸಮಿತಿಯ ರಚನೆ ಮುಂತಾದ್ದರ ಸಂಬಂಧದಲ್ಲಿ ಕೋರ್ಟಿಗೆ ಅಪಮಾನಕಾರಕ ವಿಷಯವನ್ನು ಪ್ರಸಿದ್ಧಿಸಿದರೆಂದು ಬೆಂಗಳೂರಿನ ಪ್ರಸಿದ್ಧ ವಕೀಲರಾದ ಶ್ರೀ ಎಲ್. ಎಸ್. ರಾಜು, ಡೇಲೀ ನ್ಯೂಜ ಪತ್ರಿಕೆಯ ಸಂಪಾದಕ ಶ್ರೀ ಪಿ. ಆರ್. ರಾಮಯ್ಯ ಮತ್ತು ತಾಯಿನಾಡು ಪತ್ರಿಕೆಯ ಸಂಪಾದಕ ಶ್ರೀ ಪಿ. ಬಿ. ಶ್ರೀನಿವಾಸನ್‌ರಿಗೆ ಶಿಕ್ಷೆ ವಿಧಿಸಲಾಗಿತ್ತಷ್ಟೆ. ಆ ಶಿಕ್ಷೆಯ ವಿರುದ್ಧ ಅವರು ಮೈಸೂರು ಹಾಯಕೋರ್ಟಿಗೆ ಅಪೀಲು ಮಾಡಿದ್ದರು. ಆದರೆ ಸರಕಾರದವರು ಸುಗ್ರೀವಾಜ್ಞೆಯೊಂದನ್ನು ಹೊರಡಿಸಿ ಸಮಿತಿಯ ತೀರ್ಮಾನದ ಮೇಲೆ ಅಪೀಲು ನಡೆಯತಕ್ಕದ್ದಲ್ಲ ಎಂದು ವಿಧಿಸಿದ್ದಾರೆ. ಸರಕಾರದ ಈ ಸುಗ್ರೀವಾಜ್ಞೆಯ ಬಗ್ಗೆ ಮೈಸೂರು ಹಾಯಕೋರ್ಟಿನಲ್ಲಿ ಚರ್ಚೆ ನಡೆಯಿತು. ಆದರೆ ವಿಷಯವು ಮಹತ್ವದ್ದಿರುವದರಿಂದ ಫುಲ್ ಬೆಂಚಿನಲ್ಲಿಯೇ ಇದರ ವಿಚಾರವಾಗಬೇಕೆಂದು ಇದೇ ಅಗಸ್ಟ ೧೨ ಕ್ಕೆ ಖಟ್ಲೆಯನ್ನು ಮುಂದರಿಸಲಾಯಿತು.

ಜ. ಶಹಾನವಾಜರಿಗೆ ಚಿತ್ರಹಿಂಸೆ

ಸುಭಾಸ ಸೇನೆಯ ಜನರಲ್ ಶಹಾನವಾಜರು ಪಾಕಿಸ್ತಾನದಲ್ಲಿ ಚಿತ್ರಹಿಂಸೆಗೆ ಗುರಿಯಾದರು. ಅವರ ಸಂಗಡಿಗರನ್ನೆಲ್ಲ ಸೆರೆಹಿಡಿದು ರಾವಳಪಿಂಡಿಯಲ್ಲಿ ಬಂಧಿಸಿಡಲಾಗಿದೆ. ಜ. ಶಹಾನವಾಜರ ಪ್ರಾಣಹರಣದ ಪ್ರಯತ್ನ ಕೂಡ ನಡೆಯಿತೆಂದು ತಿಳಿಯುತ್ತದೆ. ಈಗ ಅವರು ದಿಲ್ಲಿಗೆಬಂದಿದ್ದು ಯಾವಕಾರ್ಯ ಕೈಕೊಳ್ಳಬೇಕೆಂಬ ವಿಚಾರ ನಡೆಸಿದ್ದಾಗಿ ತಿಳಿಯುತ್ತದೆ.

ಹೈದರಾಬಾದದ ಬಗ್ಗೆ ಹಿಂದುಸ್ತಾನ ಸರಕಾರದ ಶ್ವೇತಪತ್ರ

ಭಾರತ ಸರಕಾರವು ಹೈದರಾಬಾದದ ಬಗ್ಗೆ ತಾ. ೯ ರಂದು ಒಂದು ಶ್ವೇತಪತ್ರ ಹೊರಡಿಸಿದ್ದು ಅದರ ಸಾರ ಹೀಗಿದೆ:—

ರಕ್ಷಣೆಯ ಹೊಣೆ ಭಾರತಕ್ಕೆ, ಸಾರ್ವಭೌಮತ್ವ ಪ್ರಜೆಗಳಿಗೆ

ಸಮಗ್ರ ಭಾರತದ ರಕ್ಷಣೆಯು ಮತ್ತು ಭದ್ರತೆಯ ಹೊಣೆಯುಭಾರತ ಸರಕಾರದಮೇಲಿದೆ. ಹೈದರಾಬಾದದಲ್ಲಿ ನಡೆದ ಅರಾಜಕತೆಯನ್ನು ಭಾರತ ಸರಕಾರವು ಅಲಕ್ಷಿಸಿ ಸುಮ್ಮನೆ ಕೂಡಲಾರದು. ಅದ್ದರಿಂದ ನಿಜಾಮರಿಗೆ ಸ್ವತಂತ್ರರಾಗಿರಲು ಅಸ್ಪದ ಕೊಡುವದು ಸಾಧ್ಯವೇ ಇಲ್ಲ. ಮೇಲಾಗಿ ಈ ಸ್ವಾತಂತ್ರ್ಯದ ಬೇಡಿಕೆಗೆ ಅಲ್ಲಿಯ ಜನತೆಯ ಬೆಂಬಲವಿಲ್ಲ. ಬ್ರಿಟಿಶರು ನಿಜಾಮರಿಗೆ ಹೆಚ್ಚಿನ ಸೌಕರ್ಯಗಳನ್ನು ಕೊಟ್ಟಿದ್ದಿಲ್ಲ. ಎಲ್ಲ ನರೇಂದ್ರರಂತೆ ಇವರನ್ನೂ ನಡೆಸಿಕೊಳ್ಳುತ್ತಿದ್ದರು. ಆದರೆ ಇಷ್ಟೇ ಇವರು ಎಲ್ಲ ನರೇಂದ್ರರಿಗಿಂತ ಪ್ರಮುಖರೆಂದು ಮಾತ್ರ ಗಣಿಸಿದ್ದರು. ಬ್ರಿಟಿಶರ ಸಾರ್ವಭೌಮತ್ವ ಅಳಿದ ಮೇಲೆ ಆ ಸಾರ್ವಭೌಮತ್ವವು ಪ್ರಜೆಗಳಿಗೆ ಸೇರುವದು ಕ್ರಮಪ್ರಾಪ್ತ. ಭಾರತ ಸರಕಾರಕ್ಕೆ ಈ ಅಭಿಪ್ರಾಯವು ಸಮ್ಮತವಿದೆ.

ನಿಜಾಮರು ಸಂಧಿಸಾಧಕ ರಾಜರು

ಉದಯಪುರ ಮೊದಲಾದ ಸಂಸ್ಥಾನಗಳ ರಾಜಮನೆತನಗಳಿಗೆ ಉಜ್ವಲ ಇತಿಹಾಸವಿದೆ. ಅವರು ಪರಕೀಯ ದಾಳಿಗಾರರನ್ನು ಪ್ರತಿಭಟಿಸಿ ರಕ್ತದ ಕಾಲುವೆ ಹರಿಸಿದ್ದುಂಟು. ದೇಶದ ಮಾನ ಮತ್ತು ಸ್ವಾತಂತ್ರ್ಯ ರಕ್ಷಣೆಗೆ ಮಾಡಿದ ಅವರ ತ್ಯಾಗ ಅಪರಿಮಿತವಾಗಿದೆ. ನಿಜಾಮ ಮನೆತನದವರು ಸಮಯಸಾಧಕರು. ದ್ರೋಹ ಬಗೆದೇ ಅವರು ರಾಜ್ಯ ಸಂಪಾದಿಸಿರುವರಲ್ಲದೆ ಅವರು ಯಾವ ತತ್ವಕ್ಕೂ ಅಂಟಿಕೊಂಡವರಲ್ಲ. ತಾವು ಮೊಗಲ ಅರಸರ ಉತ್ತರಾಧಿಕಾರಿಗಳೆಂದು ನಿಜಾಮರು ಜಂಬ ಕೊಚ್ಚುವದರಲ್ಲಿ ಎಳ್ಳಷ್ಟೂ ಹುರುಳಿಲ್ಲ.

ಹೈದರಾಬಾದಕ್ಕೆ ಭಾರತವೇ ಶರಣು

ಹೈದ್ರಾಬಾದವು ಪ್ರತ್ಯೇಕ ರಾಷ್ಟ್ರವೆಂದು ನಿಜಾಮರು ಅಂದಾಕ್ಷಣಕ್ಕೆ ಅದು ಎಂದೂ ಹಾಗಾಗಲಾರದು. ಹೈದರಾಬಾದವು ಭಾರತದ ಒಂದು ಅಂಗವೇ. ಅಲ್ಲಿ ೧೬೩ ಲಕ್ಷ ಜನಸಂಖ್ಯೆ ಇದರಲ್ಲಿ ನೂರಕ್ಕೆ ೮೬ ಜನ ಹಿಂದುಗಳು ೧೨ ಜನರು ಮಾತ್ರ ಮುಸಲ್ಮಾನರು. ಇವರು ನೆರೆಯ ಜನರಲ್ಲಿ ಸಮರಸರಾಗಿದ್ದಾರೆ. ೭೦ ಲಕ್ಷ ಜನ ತೆಲಗು, ೪೦ ಲಕ್ಷ ಜನ ಮರಾಠಿ. ೩೦ ಲಕ್ಷ ಜನ ಕನ್ನಡ ಮಾತನಾಡುತ್ತಾರೆ. ಸಂಸ್ಥಾನದ ಸುತ್ತಲೂ ನೈಸರ್ಗಿಕ ಗಡಿಯಿಲ್ಲ. ರೇಲ್ವೆ, ಅಂಚೆ, ತಂತಿ, ಟೆಲಿಫೋನ, ವಿಮಾನ ಸಾರಿಗೆ ಮೊದಲಾದ ಸೌಕರ್ಯಗಳಿಗೆ ಹೈದರಾಬಾದವು ಭಾರತವನ್ನೇ ಅವಲಂಬಿಸಿದೆ. ಇಲ್ಲಿಯ ಜನರು ಭಾರತದಲ್ಲಿಕಾಲಿಡದೆ ಎಲ್ಲಿಗೂ ಹೋಗುವಂತಿಲ್ಲ. ಹೈದರಾಬಾದದ ಜನರ ಆಚಾರ ವಿಚಾರ ಸಂಸ್ಕೃತಿ ಭಾಷೆ ಜೀವನ ವಿಧಾನ ಎಲ್ಲವೂ ಭಾರತದೊಂದಿಗೆ ಬೆಸುಗೆಗೊಂಡಿವೆ. ವಿದೇಶಗಳೊಡನೆ ಹೈದರಾಬಾದವು ಭಾರತದ ಹಿತಸಂಬಂಧಗಳಿಗೆ ಬಾಧಕವಾಗುವಂತಹ, ಸಂರಕ್ಷಣ ಮೊದಲಾದ ಯಾವದೇ ಒಡಂಬಡಿಕೆ ಮಾಡಿಕೊಂಡರೆ ಭಾರತದಲ್ಲಿ ಕಾಲಿಟ್ಟು ಅದರ ಸಾರ್ವಭೌಮತ್ವವನ್ನು ಉಲ್ಲಂಘಿಸಿಯೇ ಆ ಒಡಂಬಡಿಕೆಗಳನ್ನು ಪೂರೈಸಬೇಕು. ಹೀಗೆಲ್ಲ ಇರುವಾಗ ಹೈದರಾಬಾದವು ಸ್ವತಂತ್ರ ರಾಷ್ಟ್ರವಾಗುವ ಹಂಬಲ ತಾಳಿದರೆ ಅದು ಹಾಸ್ಯಾಸ್ಪದವಲ್ಲವೆ ?

ಯಥಾಸ್ಥಿತಿ ಒಪ್ಪಂದ, ನಿಜಾಮರ ಮೋಸಗಾರಿಕೆ

ನಿಜಾಮರ ಮಾತಿನಲ್ಲಿ ವಿಶ್ವಾಸವಿಟ್ಟು ೧೯೪೭ ನವೆಂಬರ ೨೯ ಕ್ಕೆ ಯಥಾಸ್ಥಿತಿ ಒಪ್ಪಂದಮಾಡಿಕೊಂಡು ಹೈದರಾಬಾದದಲ್ಲಿ [illegible] ಭಾರತ ಸರಕಾರವು [illegible]. ಇದರ ದುರ್ಲಾಭ ಪಡೆದು ನಿಜಾಮರು ಭಾರತದ ವಿರುದ್ಧ ಕ್ರಮ ಕೈಕೊಳ್ಳಲು [illegible]. [illegible] ೨೦ ಕೋಟಿ ರೂ. ಗಳ ಸಾಲ [illegible]. ಹಿಂದೀ ನಾಣ್ಯ [illegible] [illegible] ಸಂಸ್ಥಾನದಲ್ಲಿ [illegible].

ಇತ್ತೀಚೆ ಭಾರತದಲ್ಲಿ ಸೇರ್ಪಡೆಯ [illegible] ಹೈದರಾಬಾದದ ಮುಖ್ಯ ಮಂತ್ರಿಗಳು ಒಂದೇ ಮಾತಿನ ಬಗ್ಗೆ ಹೆಚ್ಚು [illegible] ಕೊಡುತ್ತಿದ್ದರು. ಅವರಿಂದ ತನ್ನ ಈ ಬಗೆಯ ಸ್ವಾತಂತ್ರ್ಯ ಗಳನ್ನು ಭಾರತದ ಮಾರ್ಗ ಕಡೆಗೆ [illegible] ಕೊಡಬೇಕೆಂದು [illegible] [illegible] ಸಂಸ್ಥೆಗಳು ಭಾರತ ದೇಶವನ್ನು ಕಾಪಾಡು [illegible]. ಭಾರತ ಸರಕಾರದ ಹೈದರಾಬಾದ [illegible] ಮಾಡುವ ಪ್ರಯತ್ನ ಮಾಡಿದರೂ [illegible]. ರಾಜರ [illegible] ಭಾರತಕ್ಕೆ [illegible] ಕ್ಕೆ ಮಾಡಿಕೊಂಡ ದಿನ್ನಕ್ಕೂ ವ್ಯರ್ಥವಾಯಿತು. ಅತ್ಯಂತ ಪರಿಶ್ರಮದಿಂದ [illegible] ಒಪ್ಪಂದದ ಕರಡನ್ನು ರಜಾಕಾರರ ಸಂಸ್ಥೆಯನ್ನು ಪುರಸ್ಕರಿಸಹೋಗಿ ನಿಜಾಮರು ತಿರಸ್ಕರಿಸಿದರು.

ರಜಾಕಾರರ ಹುಟ್ಟು

ನಿಜಾಮರ ಪ್ರೋತ್ಸಾಹದಿಂದಲೇ ರಜಾಕಾರರ ಸಂಸ್ಥೆ ೧೯೪೭ ಜುಲೈಯಲ್ಲಿ ಹುಟ್ಟಿತು. ದೇಶ್ಮುಖವಲ್ಲಿ ಮುಸಲ್ಮಾನ ರಾಜ್ಯವನ್ನು ಸ್ಥಿರಗೊಳಿಸುವ ಮಹತ್ವಾಕಾಂಕ್ಷೆಯಿಂದ ರಜಾಕಾರರು ಮತ್ತರಾಗಿಕೊಲೆಸುಲಿಗೆ ಮಾನಭಂಗ ಇವುಗಳಲ್ಲಿ ನಿರತರಾಗಿದ್ದಾರೆ. ಇವರಲ್ಲಿ ೬೦ ಸಾವಿರ ಜನಕ್ಕೆ ಸೈನ್ಯ ಶಿಕ್ಷಣ ಕೊಡಲಾಗಿದ್ದು ಅವರು ಈಗ ೧೪ ಲಕ್ಷ ಆಗಿದ್ದಾರೆ. ತಮ್ಮ ಪ್ರಚಾರಕ್ಕಾಗಿ ಮತ್ತು ಭಾರತದ ಅಪಪ್ರಚಾರಕ್ಕಾಗಿ ೧ ಇಂಗ್ಲೀಷ, ೩ ಉರ್ದು ದೈನಿಕ, ಮತ್ತು ೬ ಉರ್ದು ಸಾಪ್ತಾಹಿಕ ಪತ್ರಿಕೆಗಳು ಇವರ ಸ್ವಾಧೀನದಲ್ಲಿರುವದಲ್ಲದೆ ಸಂಸ್ಥಾನದ ಆಕಾಶವಾಣಿಯನ್ನೂ ಇವರು ಧಾರಾಳವಾಗಿ ಬಳಸುತ್ತಾರೆ. ಇವರಿಗೆ ಪುಕ್ಕಟೆ ಪ್ರವಾಸದ ಸೌಕರ್ಯ ಕೊಡಲಾಗಿದೆ.

ನಿಜಾಮರು ದಿಗ್ಬಂಧನದ ವಿಷಯಕ್ಕೆ ತುಂಬಾ ಅಪಪ್ರಚಾರ ನಡೆಸಿದ್ದಾರೆ. ಶಸ್ತ್ರಾಸ್ತ್ರಗಳನ್ನೂ ಯುದ್ಧೋಪಯೋಗಿ ಕಚ್ಚಾ ಪದಾರ್ಥಗಳನ್ನೂ ಮಾತ್ರ ಭಾರತ ಸರಕಾರವು ತಡೆಹಿಡಿದಿದೆ. ಔಷಧ ಉಪ್ಪು ಮತ್ತು ಇತರ ಜೀವನಾವಶ್ಯಕ ಪದಾರ್ಥಗಳನ್ನು ಪ್ರಚುರ ಪ್ರಮಾಣದಲ್ಲಿ ಕೊಡಲಾಗಿದೆ.

ನಿಜಾಮರು ತಮ್ಮ ರಾಜ್ಯದಲ್ಲಿ ಉಂಟುಮಾಡಿದ ಅರಾಜಕತೆಯನ್ನು ಭಾರತವು ಸುಮ್ಮನೆ ನೋಡುತ್ತ ಕೂಡುವ ಕಾಲವೀಗ ಉಳಿದಿಲ್ಲ. ಅದರ ತಪ್ಪು ಅವರಿಗೆ ಕಂಡೀತೆಂಬ ಆಶೆಯುತ್ತು. ಹೈದರಾಬಾದ ವಿಷಯದಲ್ಲಿ ನಾವೀಗ ನಿರ್ಣಯಕ ಹೆಜ್ಜೆ ಹಾಕಲೇಬೇಕಾಗಿದೆ. ಹಾಗೆ ಸೈನ್ಯದ ಚಲನವಲನವೂ ನಡೆದಿದೆ ಅಂತೂ ಹೊಣೆಗಾರ ಸರಕಾರ ಸ್ಥಾಪನೆ, ರಜಾಕಾರರ ವಿಸರ್ಜನೆ, ಸೇರ್ಪಡೆಗೆ ಒಪ್ಪಿಗೆ ಇವೇ ಇನ್ನು ನಿಜಾಮರನ್ನು ಉಳಿಸಬಲ್ಲವು.

ಪುನಃ ಭನಸಾಲಿಯವರ ಆಮರಣ ಉಪವಾಸ

ಪ್ರೊ. ಭನಸಾಲಿಯವರು ತಾ. ೧೬ ರ ಮಧ್ಯರಾತ್ರಿಯಿಂದ ಮತ್ತೆ ಆಮರಣ ಉಪವಾಸ ಕೈಕೊಂಡಿದ್ದಾರೆ. ರಜಾಕಾರರ ಮತ್ತು ನಿಜಾಮ ಪೋಲೀಸರ ಅಸುರೀ ಕೃತ್ಯಗಳನ್ನು ಪಾದಚಾರಿಗಳಾಗಿ ಹೈದರಾಬಾದ ಸಂಸ್ಥಾನ ಹಳ್ಳಿಗಳಲ್ಲಿ ತಿರುಗಿ ನೋಡಿದರು. ಹೊಡೆದ ಲೂಟಿ ಸುಟ್ಟ ಮನೆಗಳು [illegible] ಮಾಡಲಾದ ಹೈದುಗಳು [illegible] ಗೊಂಡ ಸ್ತ್ರೀಯರು ಈ [illegible] ನೋಡಿ ನೋಡಿ ತಮ್ಮ [illegible] [illegible] [illegible] ರಜಾಕಾರರ ಮತ್ತು ನಿಜಾಮ ಸರಕಾರದ [illegible] ಗಳನ್ನು ನಿಷೇಧಿಸಲು ಆಮರಣ ಉಪವಾಸ [illegible] [illegible] [illegible] [illegible].

[illegible]

ಸ್ವತಂತ್ರ ಭಾರತದ ವಿದೇಶ ನೀತಿ

ಒಂದು ವರ್ಷದ ಕಾರ್ಯ: ಪರತಂತ್ರ ದೇಶಗಳಿಗೆ ಬೆಂಬಲ— "ಪ್ರವಾಸಿ" ಭಾರತೀಯರ ಹಿತರಕ್ಷಣೆ "ಗುಂಪು"ಗಳ ರಾಜಕಾರಣದಲ್ಲಿ ತಾಟಸ್ಥ್ಯ

ಸ್ವಾತಂತ್ರ್ಯ ಲಾಭದೊಡನೆ ಹಿಂದುಸ್ಥಾನ ಸರಕಾರ ವಿದೇಶಗಳ ಸಂಗಡ ನೇರವಾಗಿ ಸಂಪರ್ಕ ಬೆಳೆಸಲು ಅಧಿಕಾರ ಹೊಂದಿತು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆತ ಬಗೆ, ಅದರ ಆಕಾರ ಮತ್ತು ಜನಸಂಖ್ಯೆ, ಅದರ ಭೌಗೋಲಿಕ ಸ್ಥಾನ ಇವೆಲ್ಲವುಗಳನ್ನು ನೋಡಿದರೆ ಅದಕ್ಕೆ ಜಾಗತಿಕ ರಾಜಕಾರಣದಲ್ಲಿ ಪ್ರಭಾವಶಾಲಿಯಾದ ಪಾತ್ರದೊರಕಿಯದೊರಕ ಬೇಕೆಂಬುದು ಸ್ಪಷ್ಟವಾಗಿದೆ. ಈ ದೃಷ್ಟಿಯಿಂದ ಹಿಂದುಸ್ಥಾನ ಸರಕಾರ ಜಾಗತಿಕ ಪ್ರಶ್ನೆಗಳಲ್ಲಿ ತನ್ನ ವರ್ಚಸ್ಸನ್ನು ಬೀರಲು ಅವಶ್ಯವಾದ ಕ್ರಮಗಳ ಅಡಿಗಲ್ಲನ್ನು ಸ್ವಾತಂತ್ರ್ಯದ ಪ್ರಥಮ ವರ್ಷದಲ್ಲೇ ಹಾಕಿದೆಯೆಂದು ಹೇಳಬಹುದು.

ಈ ವರ್ಷದಲ್ಲಿ ಸಾಧಿಸಿದ ಕಾರ್ಯದಲ್ಲಿ, ಪ್ರಬಲ ರಾಷ್ಟ್ರಗಳನ್ನೊಳಗೊಂಡು ಅನೇಕ ರಾಷ್ಟ್ರಗಳೊಡನೆ ರಾಯಭಾರ ಸಂಬಂಧವನ್ನು ಸ್ಥಾಪಿಸಿದ್ದು ಉಲ್ಲೇಖಾರ್ಹವಾಗಿದೆ. ಈ ವಿಷಯದಲ್ಲಿ ಒಮ್ಮೊಮ್ಮೆ ಭಾರತವೇ ಮುಂದೆ ಹೋಗಿ ಸಂಬಂಧ ಸ್ಥಾಪಿಸಲು ಅಪೇಕ್ಷೆಪಟ್ಟಿದ್ದರೆ ಎಷ್ಟೋ ಸಲ ಆಯಾ ರಾಷ್ಟ್ರಗಳೇ ಸ್ನೇಹಹಸ್ತದೊಡನೆ ಮುಂದೆ ಬಂದವು. ಇದಲ್ಲದೆ ಬ್ರಿಟಿಶ ಸರಕಾರದೊಡನೆ ದೀರ್ಘಕಾಲದ ಸಂಧಾನ ನಡೆಸಿ ಅನೇಕ ಬ್ರಿಟಿಶ ವಸಾಹತುಗಳಲ್ಲಿ "ಕಮೀಶನರ"ರನ್ನು ನೇಮಿಸಲಾಗಿದೆ. ಇಂದು ಹಿಂದುಸ್ಥಾನದಲ್ಲಿ ೨೦ ಕ್ಕಿಂತಲೂ ಹೆಚ್ಚು ರಾಷ್ಟ್ರಗಳ ರಾಯಭಾರಿಗಳೂ ಪ್ರತಿನಿಧಿಗಳೂ ಇರುವದರಿಂದ ಈ ದೇಶದಲ್ಲಿ ವಿದೇಶಗಳು ತೋರುವ ಆಸ್ಥೆಯನ್ನು ಊಹಿಸಬಹುದು. ೨೫ ರಾಷ್ಟ್ರಗಳಲ್ಲಿ ರಾಯಭಾರಿ, ಪ್ರತಿನಿಧಿ, ಕಮೀಶನರುಗಳನ್ನು ಇಡಲಾಗಿದೆ. ಇಷ್ಟು ವಿಸ್ತಾರವಾದ ವಿದೇಶ ಸಂಬಂಧಕ್ಕೆ ಸರಿ ಹೋಗುವಂತೆ ನಮ್ಮ ವಿದೇಶ ಸಂಬಂಧ ಖಾತೆಯನ್ನು ಪುನರ್ಘಟಿಸಲಾಗಿದೆಯಲ್ಲದೆ ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಈ ಬಗ್ಗೆ ನೌಕರರನ್ನು ಭರ್ತಿಮಾಡಿಕೊಳ್ಳುವ ಏರ್ಪಾಟೂ ನಡೆದಿದೆ.

ಕಾಶ್ಮೀರದ ಪ್ರಶ್ನೆ

ದೇಶವನ್ನು ಹಿಂದುಸ್ಥಾನ—ಪಾಕಿಸ್ಥಾನವೆಂದು ಎರಡು ಭಾಗ ಮಾಡಿದ್ದರಿಂದ ಉದ್ಭವಿಸಿದ ಅನೇಕ ಸೈನಿಕ ಆರ್ಥಿಕ ಸಮಸ್ಯೆಗಳನ್ನು ವಿಚಾರವಿನಿಮಯದಿಂದ ಬಗೆಹರಿಸಿಕೊಳ್ಳಲು "ಅಂತರ್ವಸಾಹತು ಪರಿಷತ್ತು"ಗಳನ್ನು ಆಗಾಗ್ಗೆ ನಡೆಸಲಾಗುತ್ತಿತ್ತು. ಆದರೆ ಈ ಎರಡು ರಾಷ್ಟ್ರಗಳಲ್ಲಿ ಇಂದು ಇನ್ನೂ ಬಗೆಹರಿಯದೆ ಉಳಿದಿರುವ ಸಮಸ್ಯೆಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ವಿಷಯವೇ ಎಲ್ಲಕ್ಕೂ ದೊಡ್ಡದು. ಪಾಯವ್ಯ ಗಡಿನಾಡಿನ ಗುಡ್ಡಗಾಡು ಜನರು ಪಾಕಿಸ್ಥಾನದ ಪ್ರದೇಶದ ದಾರಿಗಳಿಂದ ಪಾಕಿಸ್ಥಾನದ ಸಕ್ರಿಯ ಸಹಾಯದಿಂದ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಮೇಲೆ ದಾಳಿ ಮಾಡಿದರು. ಈ ದಾಳಿಯಲ್ಲಿ ಪಾಕಿಸ್ಥಾನದ ಅಂಗವಿರುವ ಸಂಗತಿ ಈಚೆಗೆ ಸ್ಪಷ್ಟವಾಗಿ ಬೆಳಕಿಗೆ ಬಂತಿದೆ. ಆ ಸಂಸ್ಥಾನ ಭಾರತದಲ್ಲಿ ಸೇರ್ಪಡೆ ಹೊಂದಿದ್ದರಿಂದ ನಮ್ಮ ಸೈನಿಕರು ಅಲ್ಲಿ ಪ್ರವೇಶಿಸಿ ದಾಳಿಗಾರರನ್ನು ಹೊರದೂಡಬೇಕಾಯಿತು.

ದಾಳಿಗಾರರಿಗೆ ಸಹಾಯ ಕೊಡಬಾರದೆಂದು ಪಾಕಿಸ್ಥಾನಕ್ಕೆ ಮತ್ತೆ ಮತ್ತೆ ಬಿನ್ನವಿಸಿಕೊಂಡರೂ ಅದು ಲಕ್ಷಿಸದಿದ್ದುದರಿಂದ ಈ ಪ್ರಶ್ನೆಯನ್ನು ಯುಕ್ತರಾಷ್ಟ್ರ ಸಂಸ್ಥೆಯ ಭದ್ರತಾ ಮಂಡಲದ ಕಡೆಗೆ ಒಯ್ದು, ಕಾಶ್ಮೀರದ ದಾಳಿಗಾರರಿಗೆ ಸಹಾಯ ನೀಡದಂತೆ ಪಾಕಿಸ್ಥಾನಕ್ಕೆ ಆಜ್ಞಾಪಿಸಬೇಕೆಂದು ಕೇಳಿಕೊಳ್ಳಲಾಯಿತು (ಜನವರಿ ೧). ಆದರೆ ಈ ಬಗ್ಗೆ ಉಭಯ ಪಕ್ಷಗಳ ಮತ್ತು ಭದ್ರತಾ ಮಂಡಲದ ಸಮಿತಿಯ ನಡುವೆ ಆದ ಮಾತುಕತೆಗಳ ಅಂತ್ಯದಲ್ಲಿ ಭದ್ರತಾ ಮಂಡಲ ಸ್ವೀಕರಿಸಿದ ಗೊತ್ತುವಳಿ (ಎಪ್ರಿಲ ೨೧) ಮುಖ್ಯ ಮುದ್ದೆಯನ್ನು ಬದಿಗಿರಿಸಿ ಈ ಬಗ್ಗೆ ಉಭಯ ರಾಷ್ಟ್ರಗಳಲ್ಲಿ ಒಡಂಬಡಿಕೆ ಮಾಡಿಸಲು ಒಂದು ಗೊತ್ತುವಳಿಯನ್ನು ಸ್ವೀಕರಿಸಿತು. ಈ ಗೊತ್ತುವಳಿಯಲ್ಲಿ ಹೇಳಲ್ಪಟ್ಟ ಕ್ರಮಗಳು ಭಾರತಕ್ಕೆ ಸರ್ವಥಾ ಒಪ್ಪಿಗೆಯಿಲ್ಲವೆಂದು ಭಾರತ ಸರಕಾರ ಸ್ಪಷ್ಟಗೊಳಿಸಿತು.

ಈಗ ಈ ಬಗ್ಗೆ ಸಂಧಾನ ನಡೆಸಲು ಯುಕ್ತ ರಾಷ್ಟ್ರ ಸಮಿತಿ ಭಾರತಕ್ಕೆ ಬಂದಿದೆ. ಭಾರತದ ಮೂಲ ಭೂತ ಆಕ್ಷೇಪಗಳನ್ನು ಸಮಾಧಾನಗೊಳಿಸದಿದ್ದರೆ ಭದ್ರತಾ ಮಂಡಲದ ಗೊತ್ತುವಳಿಯಂತೆ ನಡೆಯಲು ನಾವು ಬದ್ಧರಿಲ್ಲವೆಂಬುದನ್ನು ಸ್ಪಷ್ಟಗೊಳಿಸಿ ಈ ಸಮಿತಿಯೊಡನೆ ಭಾರತ ಸರಕಾರ ವಿಚಾರ ವಿನಿಮಯ ನಡೆಸಿದೆ.

ದಕ್ಷಿಣ ಆಫ್ರಿಕೆ

ಬ್ರಿಟಿಶ ಕಾಮನ್‌ವೆಲ್ತ ದೇಶಗಳಲ್ಲಿ ನಮ್ಮ ಸಂಬಂಧ ಸರಿಯಾಗಿಲ್ಲದಿರುವ ಇನ್ನೊಂದು ರಾಜ್ಯವೆಂದರೆ ದಕ್ಷಿಣ ಆಫ್ರಿಕೆ. ದಕ್ಷಿಣ ಆಫ್ರಿಕೆಯಲ್ಲಿ ಹಿಂದೀ ಅಲ್ಪಸಂಖ್ಯಾಕರನ್ನು ನಡೆಸಿಕೊಳ್ಳುತ್ತಿರುವ ರೀತಿಯನ್ನು ಕುರಿತು ಹಿಂದುಸ್ಥಾನ ಸರಕಾರ ಯುಕ್ತ ರಾಷ್ಟ್ರ ಸಂಸ್ಥೆಗೆ ಒಯ್ದ ದೂರಿನ ಫಲವಾಗಿ ಡಿಸೆಂಬರ ೧೯೪೬ರಲ್ಲಿ ಅದು ಒಂದು ಗೊತ್ತುವಳಿ ಮಾಡಿತು. ಆದರೆ ದ. ಆಫ್ರಿಕೆಯ ಸರಕಾರ ಈ ಗೊತ್ತುವಳಿಯ ವಿಚಾರದಲ್ಲಿ ಯಾವ ಕ್ರಮವನ್ನೂ ಕೈಕೊಳ್ಳಲಿಲ್ಲವಷ್ಟೇ ಅಲ್ಲ. ಗೊತ್ತುವಳಿಯನ್ನು ತಳಹದಿಯಾಗಿಟ್ಟುಕೊಂಡು ಭಾರತ ಸರಕಾರದೊಡನೆ ಮಾತುಕತೆ ಕೂಡ ನಡೆಸಲು ಒಪ್ಪಲಿಲ್ಲ. ಆದುದರಿಂದ ಈ ವಿಚಾರವನ್ನು ತಿರುಗಿ ಯುಕ್ತರಾಷ್ಟ್ರ ಸಂಸ್ಥೆಗೆ ಅಗಸ್ಟ ೨೧, ೧೯೪೭ ನೇ ದಿನ ಭಾರತ ಸರಕಾರ ವರದಿ ಮಾಡಿತು. ಈ ವಿಷಯದಲ್ಲಿ ಉಭಯ ಪಕ್ಷಗಳು ತಮ್ಮ ತಮ್ಮೊಳಗೆ ಮಾತುಕತೆ ನಡೆಸಿ ಮತಭೇದವನ್ನು ಬಗೆಹರಿಸಬೇಕೆಂಬ ಕೆಲವರ ಅಪೇಕ್ಷೆಯಂತೆ ಭಾರತ ಪ್ರತಿನಿಧಿ ಮಂಡಲದ ನಾಯಕರಾದ ಶ್ರೀಮತಿ ವಿಜಯಲಕ್ಷ್ಮಿಯವರು ದಕ್ಷಿಣ ಆಫ್ರಿಕೆಯ ಪ್ರತಿನಿಧಿ ಲಾರೆನ್ಸರೊಡನೆ ನಡೆಸಿದ ವಿಚಾರ ವಿನಿಮಯ ವ್ಯರ್ಥವಾಯಿತು. ೧೯೪೬ ರ ಗೊತ್ತುವಳಿಯನ್ನೆ ತೊಡೆದು ಹಾಕಬೇಕೆಂದು ಆ ಪ್ರತಿನಿಧಿ ಹಟ ಹಿಡಿದನು. ಹಿಂದೀಯರ ವಿರುದ್ಧ ಮಾಡುತ್ತಿರುವ ಪಕ್ಷಪಾತವನ್ನು ತ್ಯಜಿಸಲು ದ. ಆಫ್ರಿಕೆಯ ಸರಕಾರ ಸಿದ್ಧವಿದ್ದಿಲ್ಲ. ಆದರಿಂದ ದಕ್ಷಿಣ ಆಫ್ರಿಕೆಯ ಚರ್ಯೆಯ ಬಗ್ಗೆ ವಿಷಾದ ವ್ಯಕ್ತ ಮಾಡಿ ಅದು ಹಿಂದುಸ್ಥಾನದ ಸಂಗಡ ೧೯೪೬ ಡಿಸೆಂಬರ ಗೊತ್ತುವಳಿಯನ್ವಯ ಮಾತುಕತೆ ನಡೆಸಬೇಕೆಂಬಾಶಯದ ಗೊತ್ತುವಳಿಯನ್ನು ಸಂಘದ ಮಹಾಸಭೆಯಲ್ಲಿ ಭಾರತ ಪ್ರತಿನಿಧಿಗಳು ಮಂಡಿಸಿದರು. ಆದರೆ ೨/೩ ಅಂಶ ಬಹು ಮತ ದೊರೆಯದೆ ಇದು ಬರಿ ೩೧ ವಿರುದ್ಧ ೧೯ ಮತಗಳಿಂದ ಪಾಸಾದುದರಿಂದ ಗೊತ್ತುವಳಿ ಬಂಧಕವಲ್ಲೆಂದು ತಿಳಿಯಲಾಯಿತು. ಆದರೆ ಈ ಪ್ರಶ್ನೆಯನ್ನು ಮುಂಬರುವ ಅಧಿವೇಶನದಲ್ಲಿ ತಿರುಗಿ ಎತ್ತುವ ವ್ಯವಸ್ಥೆಯನ್ನು ಸರಕಾರ ಮಾಡುತಿದೆ.

ವಿದೇಶಗಳಲ್ಲಿರುವ ಭಾರತೀಯರು

ದಕ್ಷಿಣ ಆಫ್ರಿಕೆಯಲ್ಲಲ್ಲದೆ ಇನ್ನೂ ಅನೇಕ ದೇಶಗಳಲ್ಲಿ ಭಾರತೀಯರು ನೆಲಸಿದ್ದು ಅವರ ಯೋಗಕ್ಷೇಮವನ್ನು ಭಾರತ ಸರಕಾರ ನೋಡಿಕೊಳ್ಳಬೇಕಾಗಿದೆ. ಆದರೆ ಪಂ. ಜವಾಹರರು ೧೯೪೮ ಮಾರ್ಚ್ ತಿಂಗಳಲ್ಲಿ ಭಾರತ ಪಾರ್ಲಮೆಂಟಿನಲ್ಲಿ ಹೇಳಿದಂತೆ, ಈ "ಪ್ರವಾಸಿ" ಭಾರತೀಯರು ಭಾರತದ ನಾಗರಿಕರಾಗಿಯೇ ಉಳಿಯುವರೋ ಅಥವಾ ಆಯಾ ದೇಶದ ನಾಗರಿಕತ್ವವನ್ನೆ ಅಂಗೀಕರಿಸುವರೋ, ಎಂಬುದರ ಮೇಲೆಯೆ ಈ ವಿಷಯ ಹೊಂದಿಕೊಂಡಿದೆ. ಅವರು ಆಯಾ ದೇಶದ ನಾಗರಿಕರಾದರೆ ನಮಗೆ ಅವರಲ್ಲಿ ಸಾಂಸ್ಕೃತಿಕ ಸಂಬಂಧಕ್ಕಿಂತ ಹೆಚ್ಚಿನ ಆಸ್ಥೆ ಉಳಿಯಲಾರದು. ಬದಲಿಗೆ ಭಾರತದ ನಾಗರಿಕರಾಗಿಯೆ ಉಳಿಯಲು ಅವರು ಬಯಸಿದರೆ, ಆಗ ಆಯಾ ದೇಶಗಳಲ್ಲಿ ಅವರು ಪರಕೀಯರಾಗಿ ಬಾಳಬೇಕಾಗುವದು. ನಾವು ಅವರಿಗೆ ಸಾಧ್ಯವಾದಷ್ಟು ಸೌಕರ್ಯಗಳನ್ನು ದೊರಕಿಸಿಕೊಡಲು ಪ್ರಯತ್ನಿಸಬಹುದು, ಅಷ್ಟೆ.

ಸಿಂಹಳದಲ್ಲಿರುವ ಹಿಂದೀಯರ ಪ್ರಶ್ನೆಯಲ್ಲಿ ಇದೇ ಸಮಸ್ಯೆ ಅಡಕವಾಗಿದೆ. ಅವರ ನಾಗರಿಕತ್ವದ ವಿಷಯದಲ್ಲಿ ನಮ್ಮ ಮುಖ್ಯ ಮಂತ್ರಿಗಳಿಗೂ ಸಿಂಹಳ ಮುಖ್ಯ ಮಂತ್ರಿಗಳಿಗೂ ದಿಲ್ಲಿಯಲ್ಲಿ ಮಾತುಕತೆಗಳು ಕಳೆದ ಡಿಸೆಂಬರದಲ್ಲಿ ನಡೆದವು. ಈಗ ಸಿಂಹಳದಲ್ಲಿ ವಸತಿ ಮಾಡಿ


(೮ ನೇಯ ಪುಟಕ್ಕೆ)

ಅಂತರ್-ರಾಷ್ಟ್ರೀಯ

● ಚೀನದಲ್ಲಿ ಅಧ್ಯಕ್ಷ ಚಿಯಾಂಗ್ ಕೈಶೇಕರ ಕೌಮಿಂಟಾಂಗ್ ಪಕ್ಷದಲ್ಲಿ ಅವರ ವಿರೋಧಿಗಳಾಗಿದ್ದವರು ಒಂದಾಗಿ ಕಮ್ಯುನಿಸ್ಟರ ಸಂಗಡ ಸಂಧಾನ ನಡೆಸುವ ಯತ್ನದಲ್ಲಿದ್ದಾರೆ. ಈಚೆಗೆ ಪಕ್ಷದಿಂದ ಹೊರದೂಡಲ್ಪಟ್ಟ ಒಬ್ಬರ ನೇತೃತ್ವದಲ್ಲಿ ಕಮ್ಯುನಿಸ್ಟರಿಂದೊಡಗೂಡಿದ ಸಂಮಿಶ್ರ ಮಂತ್ರಿ ಮಂಡಲವನ್ನೇರ್ಪಡಿಸಿ ಚಿಯಾಂಗರನ್ನು ಅಧಿಕಾರದಿಂದ ತಳ್ಳಿ ಹಾಕಬೇಕೆಂದು ಅವರ ಹವಣು. ಈ ಬಗ್ಗೆ ಬ್ರಿಟಿಶರ ಅಧೀನದಲ್ಲಿರುವ ಹಾಂಗ್‌ಕಾಂಗಿನಲ್ಲಿ ಕಮ್ಯುನಿಸ್ಟ ಮತ್ತು ಇತರ ಚೀನಿ ಪಕ್ಷಗಳ ಸಭೆ ಸೇರಲಿತ್ತು. ಆದರೆ ಅದಕ್ಕೆ ಅನುಮತಿ ದೊರೆಯಲಿಲ್ಲ. ಈ ಪ್ರಯತ್ನವನ್ನು ನೋಡಿದರೆ ಚೀನದ ಅಂತರಿಕ ರಾಜಕಾರಣದಲ್ಲಿ ಬಿಕ್ಕಟ್ಟುಂಟಾಗಿದೆಯೆಂದು ತೋರುತ್ತದೆ.

● ದೂರಪೂರ್ವದ ಬ್ರಿಟಿಶ ವಸಾಹತುಗಳಲ್ಲಿ ಕಮ್ಯುನಿಸ್ಟ ಉಪಟಳವನ್ನು ತಡೆಯುವ ಉದ್ದೇಶದಿಂದ ಮಲಯದ ಜೋಹೋರದಲ್ಲಿ ಬ್ರಿಟಿಶ ಗವರ್ನರರುಗಳ ಸಮ್ಮೇಲನ ಸೇರಿತ್ತು. ಹಾಂಗ್‌ಕಾಂಗ್, ಸಿಂಗಾಪುರ, ಮಲಯ, ಬೋರ್ನಿಯೊ, ಸಾರವಾಕಗಳ ಗವರ್ನರರು ಭಾಗವಹಿಸಿದ್ದರು. ಸಿಂಗಾಪುರದ ಸಂರಕ್ಷಣೆಯನ್ನು ಬಲಪಡಿಸುವ ವಿಚಾರ ಚರ್ಚಿಸಲ್ಪಟ್ಟಿತು.

● ಮಾಸ್ಕೋದಲ್ಲಿ ತ್ರಿರಾಷ್ಟ್ರ ರಾಯಭಾರಿಗಳು ಸ್ಟಾಲಿನ್ ಮತ್ತು ಮೊಲಟೋವರೊಡನೆ ನಡೆಸಿದ ಮಾತುಕತೆಗಳು ಆಶಾದಾಯಕ ಘಟ್ಟವನ್ನು ಮುಟ್ಟಿವೆಯೆಂದು ಬರ್ಲಿನ್ನಿನಲ್ಲಿ ರಶಿಯನ್ ಅಧಿಕಾರಿಯೊಬ್ಬ ಹೇಳಿದನು. ಎಲ್ಲ ಪ್ರದೇಶಗಳಲ್ಲಿಯೂ ಪೂರ್ವ ಜರ್ಮನಿಯಲ್ಲಿ ರಶಿಯನ್ನರು ಹೊರಡಿಸಿದ ಚಲನವೇ ಚಲಾವಣೆಯಲ್ಲಿ ಬರಬೇಕೆಂದು ತ್ರಿರಾಷ್ಟ್ರಗಳು ಒಪ್ಪಿದರೆ ಬರ್ಲಿನ್ನಿನ ಮೇಲೆ ಹಾಕಿದ ದಿಗ್ಬಂಧನವನ್ನು ತೆಗೆದೊಗೆಯಲು ರಶಿಯನ್ನರು ಒಪ್ಪಿದ್ದಾರಂತೆ. ಈ ಸಂಬಂಧದಲ್ಲಿ ಬೇಗನೆ ವಿದೇಶ ಮಂತ್ರಿ ಪರಿಷತ್ತು ಸೇರುವ ಸಂಭವವುಂಟು.



ಪಾಲಿಸ್ತಾನದ ಟೆಲ ಅವೀವದಲ್ಲಿ ಯಹೂದ್ಯ ಸರಕಾರದ ಸೈನ್ಯ, ನೌಕಾ ಪಡೆ ಮತ್ತು ಆಕಾಶ ಪಡೆಯ ೨೦೦೦ ಸ್ತ್ರೀ ಪುರುಷರು ೩೧-೭-೪೮ ಕ್ಕೆ "ರಾಷ್ಟ್ರದಿನಾಚರಣೆ"ಯ ಸಂದರ್ಭದಲ್ಲಿ ಕವಾಯತು ನಡೆಸಿದಾಗಿನ ಚಿತ್ರ.

● ಪಾಲಿಸ್ತಾನದಲ್ಲಿ ಯಹೂದ್ಯರು ಅರಬರೊಡನೆ ಸಂಧಾನ ನಡೆಸುವ ಸಿದ್ಧತೆಯನ್ನು ವ್ಯಕ್ತಗೊಳಿಸಿದ್ದಾರೆ. ಆದರೆ ಪಾಲಿಸ್ತಾನದ ಯಹೂದ್ಯ ಪ್ರದೇಶಗಳಿಂದ ಪಲಾಯನ ಮಾಡಿದ ಅರಬ ನಿವಾಸಿಗಳನ್ನು ತಿರುಗಿ ಕರೆಸಿಕೊಳ್ಳಲೊಪ್ಪದ ಹೊರತು ಸಂಧಾನವನ್ನು ಒಲ್ಲೆವೆಂದು ಅರಬ ರಾಷ್ಟ್ರಗಳ ನಾಯಕನಾದ ಟ್ರಾನ್ಸಜಾರ್ಡನ್ ಅರಸ ಅಬ್ದುಲ್ಲಾ ಸಾರಿದ್ದಾನೆ.

● ಸಿಂಹಳದಲ್ಲಿ ಈಗ ವಸತಿಮಾಡಿರುವ ಎಲ್ಲ ಹಿಂದೀಯರಿಗೆ ಅಲ್ಲಿನ ನಾಗರಿಕತ್ವವನ್ನು ಕೊಡುವ ಮತ್ತು ಮುಂದಿನ ವಲಸೆಯ ಮೇಲೆ ನಿರ್ಬಂಧ ಹೇರುವ ಮಸೂದೆಯೊಂದು ಸಿಂಹಳ ಶಾಸನ ಸಭೆಯಲ್ಲಿ ಬಂದಿದೆ. ಇದರಲ್ಲಿ ಕೆಲ ಆಕ್ಷೇಪಾರ್ಹ ಅಂಶಗಳಿರುವದರಿಂದ ಅದನ್ನು ಮುಂದೊತ್ತಲು ಅವಸರ ಮಾಡಬಾರದೆಂದು ಸಿಂಹಳ ಹಿಂದೀ ಕಾಂಗ್ರೆಸ್ಸಿನವರೂ ಹಿಂದೀ ಸರಕಾರವೂ ಕೇಳಿಕೊಂಡಿದ್ದಾರೆ.

● ದಕ್ಷಿಣ ಆಫ್ರಿಕೆಯಲ್ಲಿರುವ ಹಿಂದಿಯರನ್ನು ತಿರುಗಿ ಹಿಂದುಸ್ಥಾನಕ್ಕೆ ಅಟ್ಟುವೆವೆಂಬ ಚುನಾವಣೆ ಘೋಷಣೆಯನ್ನು ಕಾರ್ಯಕಾರಿ ಮಾಡಲು ಡಾ. ಮಾಲಾನರ ಸರಕಾರ ಸಿದ್ಧತೆ ನಡೆಸಿದೆ. ಹಿಂದುಸ್ಥಾನದೊಡನೆ ಸಂಧಾನ ನಡೆಸಬೇಕಾದರೆ ಅವರನ್ನು ತಿರುಗಿ ಕರೆಯಿಸಿಕೊಳ್ಳುವ ತತ್ವವನ್ನು ಹಿಂದುಸ್ಥಾನ ಸರಕಾರ ಮೊದಲು ಒಪ್ಪಬೇಕೆಂದು ಅದು ವಾದಿಸುತ್ತಿದೆಯಂತೆ!

ಅತ್ಯಂತ ಆಕರ್ಷಕ ಪತ್ನಿ

ಹೊಸ ಪರಿಚಯಸ್ಥ— ಸ್ವಾಮಿ, ಇವರೇ ಏನು ಎಲ್ಲರಿಗಿಂತ ಹೆಚ್ಚು ಆಕರ್ಷಕರೆನಿಸಿದ ತಮ್ಮ ಧರ್ಮ ಪತ್ನಿಯರು?

ಗೃಹಸ್ಥ— ಹೌದು ಸ್ವಾಮಿ; ಇವಳೇ. ಇವಳು ನನಗೆ ಇರುವ ಏಕ ಮಾತ್ರ ಪತ್ನಿ; ಇವಳು ಆಕರ್ಷಕಳಾಗಿ ನನಗೆ ತೋರುವುದು ಆ ಕಾರಣದಿಂದಲೇ! ತಿಳಿಯಿತೆ?

ನಗೆಯ ನೂರೆ

ಧರ್ಮಕಾರ್ಯ

ಪೋಲೀಸರವ.. ಯಾಕೋ ಮಗನೇ, ರಾಯರ ಮನೆಯ ಪೂಜಾರಿಯ ಮಗನಾಗಿ ಅವರ ಫೌಂಟನ್‌ಪೆನ್ ಕಳುವುದೆ?

ಪೂಜಾರಿಯ ಮಗ.. ಅಲ್ಲಪ್ಪಾ ಅಪ್ಪ ಹೇಳಿದ್ದ, 'ಸಂಧ್ಯಾವಂದನೆಯ ಮಂತ್ರ ಮರೆತುಹೋದೀತು, ಬರೆದಿಟ್ಟುಕೋ' ಅಂತ; ಅದಕ್ಕೇ ಫೌಂಟನ್‌ಪೆನ್ ತೆಗೆದುಕೊಂಡು ಹೋಗಬೇಕಾಯಿತು.

ಪೋಲೀಸರವ.. ಸಾಕು, ಸಾಕು; ಬಹಳ ಚೆನ್ನಾಗಿ ವೇದೋದ್ಧಾರಮಾಡಿದೆ ಪೂಜಾರಿಯ ಮಗನಾಗಿ!

ದೂರಿಲ್ಲ

ಉದ್ಯೋಗ ಮಂತ್ರಿ— ಕಾರ್ಯದರ್ಶಿ, ಉದ್ಯೋಗ ಕೇಂದ್ರಗಳಲ್ಲಿ ಮತ್ತು ಕಾರಖಾನೆಗಳಲ್ಲಿ ಎಲ್ಲಿ ಹೆಚ್ಚು ಶಾಂತಿ ನೆಲಸಿದೆ ಹೇಳಬಲ್ಲೆಯಾ?

ಕಾರ್ಯದರ್ಶಿ— ಓಹೋ, ಹೇಳಬಲ್ಲೆ: ಹೆಂಡ ಭಟ್ಟಿ ಇಳಿಸುವ ಕಾರಖಾನೆಗಳಲ್ಲಿ ಅತಿ ಕುಡಿದ, ಕೂತ ಕುಡಿದ ಎಂಬ ದೂರು ಇಲ್ಲವೇ ಇಲ್ಲ; ಎಲ್ಲ ಸಮಾಧಾನ, ಶಾಂತಿ ಅಲ್ಲಿ!

ವಿಚಾರ ಪರತೆ

ಸಿನೆಮ ಪ್ರೇಕ್ಷಕನೊಬ್ಬ.. ಅಲ್ರೀ, ಇದೇನು, ಏನು ಮಾಡುತ್ತೀರಿ ಸ್ವಾಮಿ? ಹೀಗೇಕೆ ಬಟ್ಟೆ ಬಿಚ್ಚಲು ಸುರುಮಾಡಿದಿರಿ? ಇದೇನು ನಿಮ್ಮ ಮನೆ ಅಂತ ತಿಳಕೊಂಡಿರೋ?

ಪ್ರೊಫೆಸರ.. ಹಾ, ಹೌದು? ಇದು ಸಿನೆಮ ಥಿಯೇಟರೇನು? ನಾನೇನೋ ರಾತ್ರಿಯಾಯಿತು, ಇದು ನನ್ನ ಮಲಗುವ ಖೋಲಿ ಅಂತ ತಿಳಕೊಂಡು ಬಟ್ಟೆ ತೆಗೆದುಹಾಕಲಿಕ್ಕೆ ಸುರುಮಾಡಿದೆನಪ್ಪಾ.

ಪ್ರೇಕ್ಷಕ.. ಒಳ್ಳೇ ಆಸಾಮಿ! ತಲಿ ಎತ್ಲಾಗೋ, ಕಾಲೆತ್ಲಾಗೋ, ಕಣ್ಣೆತ್ಲಾಗೋ! ದೇವರೇಗತಿ ಇಂಥವರಿಗೆ! ಕಾಲೇಜು ಮಾಸ್ತರರಿಗೆ ತಲಿ ಹೆಗಲಮ್ಯಾಲೆ ಇದ್ದದ್ದೇ ಅರುವಿರಾಕಿಲ್ಲ ಅಂತಕಾಣಸ್ತೈತಿ.

ಅರ್ಧ ಸತ್ತಿದ್ದೇನೆ !

ಜುಲೈ ತಾ ೨೬ ಕ್ಕೆ ಇಂಗ್ಲೆಂಡಿನ ಜಗತ್ಪ್ರಸಿದ್ಧ ಬರಹಗಾರ ಬರ್ನಾರ್ಡ್ ಶಾನಿಗೆ ೯೨ ವರ್ಷ ವಯಸ್ಸಾಗುತ್ತದೆ. "ದಿ ವೆಸ್ಟ್ ಆಫ್ರಿಕನ್ ಪೈಲಟ್" ಎಂಬ ಪತ್ರಿಕೆಯಲ್ಲಿ ಶಾನ ಸತ್ತ ಬಗ್ಗೆ ದುಃಖ ವ್ಯಕ್ತಮಾಡುವ ಲೇಖನವನ್ನು ಅವನು ಕಂಡನು. ಶಾ ಕೂಡಲೇ ಅದರ ಸಂಪಾದಕನಿಗೆ ಬಂದು ಟೀರ್‌ತಂತಿ ಕಳಿಸಿದ- "ನಿನ್ನ ಬರಹ ಅಪಕ್ವವಾದುದು, ಮುಂಗಡವಾದುದು. ನಾನಿನ್ನೂ ಅರ್ಧಸತ್ತಿದ್ದೇನಷ್ಟೇ, ಪೂರಸತ್ತಿಲ್ಲ ಅದುದರಿಂದ ದಯೆಯಿಟ್ಟು ನಿನ್ನ ಬರಹ ತಪ್ಪೆಂದು ಬರೆ."

ಒಂದು ವರ್ಷದ ಸ್ವಾತಂತ್ರ್ಯ

(ಒಂದು ಸಿಂಹಾವಲೋಕನ)



ಮುಖ್ಯ ಮಂತ್ರಿ
ಪಂ. ಜವಾಹರ

೧೯೪೭ ಅಗಸ್ಟ ೧೫ ನೇ ದಿನ ಹಿಂದುಸ್ತಾನ, ೨೦೦ ವರ್ಷಗಳ ಪಾರತಂತ್ರ್ಯದ ನೊಗವನ್ನು ಕಿತ್ತೊಗೆದು ಸ್ವತಂತ್ರವಾಯಿತು. ನಮ್ಮ ಅರ್ವಾಚೀನ ಇತಿಹಾಸದ ಅತಿ ಮಹತ್ವದ ಘಟನೆಯಿದು. ನಮ್ಮ ಮನೆ ನಮ್ಮ ವಶಕ್ಕೆ ಬಂದು ಇದೀಗ ಒಂದು ವರ್ಷ ಸಂಪೂರ್ಣವಾಗಿದೆ. ಹಿಂದೀಯರು ತಮ್ಮನ್ನು ತಾವು ಆಳಿಕೊಳಲಾರರು, ಎಂಬ ನಂಬಿಕೆ ವಿದೇಶಗಳಲ್ಲಿ ಮಾತ್ರವಲ್ಲ, ಈ ದೇಶದಲ್ಲಿ ಕೂಡ ಹಲವರ ಮನಸಿನಲ್ಲಿ ಬೇರೂರಿತ್ತು. ನಮ್ಮ ಈ ಒಂದು ವರ್ಷದ "ಸ್ವ"ರಾಜ್ಯವನ್ನು ನಾವು ಈ ದೃಷ್ಟಿಯಿಂದ ಸಿಂಹಾವಲೋಕನ ಮಾಡಿದರೆ ನಮ್ಮ ರಾಜ್ಯಶಕ್ತಿಯ ಸ್ಥೂಲ ಅನುಮಾನವನ್ನು ಖಂಡಿತವಾಗಿ ಮಾಡಿಕೊಳ್ಳಬಹುದು. ಆ ಸಿಂಹಾವಲೋಕನದಲ್ಲಿ ನಮಗೆ ಎಂಥ ದೃಶ್ಯ ಕಣ್ಣಿಗೆ ಬೀಳುವದು? ನಮ್ಮ ಸಾಮರ್ಥ್ಯವನ್ನು ಕುರಿತು ನಮಗೆ ಅಭಿಮಾನವೆನಿಸುವಂತಿದೆಯೆ? ಅಥವಾ ನಿರಾಶಾಮಯ ದೃಶ್ಯವೇ ಗೋಚರಿಸುತ್ತದೆಯೆ?



ಉಪ ಪ್ರಧಾನ ಮಂತ್ರಿ
ಸರದಾರ ಪಟೇಲ

★

ಈ ಪ್ರಶ್ನೆಗಳಿಗೆ ನಾವು ನಿಶ್ಶಂಕವಾಗಿ ಒಂದೇ ಉತ್ತರ ಕೊಡಬಲ್ಲೆವು. ಒಂದು ವರ್ಷದ ಸ್ವಾತಂತ್ರ್ಯದಲ್ಲಿ ನಾವು ಸಾಧಿಸಿದ ಕಾರ್ಯಗಳು ಅರ್ಧ ಶತಮಾನದ ನಮ್ಮ ಸ್ವಾತಂತ್ರ್ಯ ಹೋರಾಟದ ಸಾರ್ಥಕತೆಯನ್ನು ಎತ್ತಿ ತೋರಿಸುವಂತಿವೆ. ನಾವು ಸ್ವಾತಂತ್ರ್ಯದ ಸಂಗಡ ಬಂದ ಅಗಾಧ ಸಮಸ್ಯೆಗಳನ್ನು ಯಶಸ್ವಿಯಾಗಿ ಗೆದ್ದು ಒಂದು ಚಮತ್ಕಾರವನ್ನೆ ಮಾಡಿ ತೋರಿಸಿದ್ದೇವೆಂಬ ಮಾತನ್ನು ಹೇಳಿಕೊಳ್ಳುವವರು ನಾವೇ ಅಲ್ಲ; ವಿದೇಶಗಳ ನಿರೀಕ್ಷಕರು ಕೂಡ ಈ ಮಾತನ್ನು ಮುಕ್ತಕಂಠದಿಂದ ಒಪ್ಪಿಕೊಂಡಿದ್ದಾರೆ.

ಸಮಸ್ಯೆಗಳ ರಾಶಿ

ಬ್ರಿಟಿಶರು ನಮ್ಮ ದೇಶವನ್ನು ಬಿಟ್ಟು ಹೋದಾಗ ನಮ್ಮ ನಾಯಕರ ಕೈಯಲ್ಲಿ ಚಿನ್ನ ಬೆಳ್ಳಿಗಳ ಗಂಟನ್ನು ಒಪ್ಪಿಸಿ ಹೋಗದಿದ್ದರೂ ಸಮಸ್ಯೆಗಳ ಒಂದು ಭಾರೀ ಗಂಟನ್ನಂತೂ ಕೊಟ್ಟು ಹೋದರು. ಇಲ್ಲಿ ಅವರ ಆಳಿಕೆಯಲ್ಲಿ ಅವರು ಸಾಧಿಸಿದ ದೊಡ್ಡ ಕೆಲಸವೆಂದು ಬೆನ್ನು ಚಪ್ಪರಿಸಿಕೊಳ್ಳುತಿದ್ದ ಈ ದೇಶದ ರಾಜಕೀಯ ಏಕೀಕರಣವನ್ನು ನುಚ್ಚು ನುರಿ ಮಾಡಿಯೆ ಅವರು ಹೊರಟರು. ಅವರೇ ಬಿತ್ತಿ ನೀರೆರೆದು ಬೆಳೆಸಿದ ಮುಸ್ಲಿಂ ಪ್ರತ್ಯೇಕತೆಯ ಅಗ್ನಿಕುಂಡದಲ್ಲಿ ಈ ದೇಶದ ಪೂರ್ವ ಪಶ್ಚಿಮ ಭಾಗಗಳಲ್ಲಿ ಎರಡು ಪಕ್ಕಗಳನ್ನೇ ಕತ್ತರಿಸಿ ಆಹುತಿ ಕೊಟ್ಟರು ಇದರ ಪರಿಣಾಮವಾಗಿ ಇಡಿ ಆಡಳಿತದ ಯಂತ್ರವೇ ಅತಂತ್ರವಾಯಿತು. ನಮ್ಮ ಸೈನ್ಯ ಎಂದಿನಿಂದಲೂ ಜಾತೀಯ ತಳಹದಿಯಲ್ಲಿಯೇ ಕಟ್ಟಲ್ಪಟ್ಟದ್ದು—ಈಗ ಜಾತೀಯ ದೃಷ್ಟಿಯಿಂದಲೇ ಇಬ್ಭಾಗವಾಗಿ ಮಾಡಲ್ಪಟ್ಟಿತು. ಕೇಂದ್ರ ಸರಕಾರದ ಎಲ್ಲ ನೌಕರ ವರ್ಗಗಳೂ ಇದೇ ಬಗೆಯಾಗಿ ಒಡೆದು ಮುಸ್ಲಿಮರು ಪಾಕಿಸ್ತಾನಕ್ಕೂ ಮುಸ್ಲಿಮೇತರರು ನಮ್ಮ ಪಾಲಿಗೂ ಉಳಿದರು. ಒಂದು ಮನೆಯಲ್ಲಿ ಅಣ್ಣ ತಮ್ಮಂದಿರೊಳಗೆ ಪಾಲಾದರೆ, ದನ ಅಣ್ಣನ ಪಾಲಿಗೆ, ಅದರ ಏಳಿಗರು ತಮ್ಮನ ಪಾಲಿಗೆ ಹೋದರೆ ಹೇಗೆ ಆಗಬಹುದೋ ಹಾಗೆ ನಮ್ಮ ಆಡಳಿತದ ಸ್ಥಿತಿಯಾಯಿತು. ಇದಲ್ಲದೆ, ಮಧ್ಯಯುಗದ ಅವಶೇಷಗಳಾಗಿ ದೇಶದ ತುದಿಯಿಂದ ತುದಿಗೆ ಅಲ್ಲಲ್ಲಿ ತೇಪೆತೇಪೆಯಾಗಿ ಹಬ್ಬಿದ ಆರುನೂರು ಮೇಲ್ಪಟ್ಟ ಚಿಕ್ಕ ದೊಡ್ಡ ದೇಶೀ ಸಂಸ್ಥಾನಗಳಿಗೆ ಬ್ರಿಟಿಶರು "ಸ್ವಾತಂತ್ರ್ಯ" ಕೊಟ್ಟು ಹೋಗಿಬಿಟ್ಟರು; ಮಾತ್ರವಲ್ಲ ಈ "ಮಹಾರಾಜರು"ಗಳು, "ನವಾಬ"ರು ತಮ್ಮ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಳ್ಳುವ ಬೆದರಿಕೆಯನ್ನೂ ಹಾಕಿ ದೇಶವನ್ನು ಹರಿಹಂಚು ಮಾಡಿಯೇಬಿಡುವಂತೆ ಕೋರಿದರು. ಇವೆಲ್ಲ ವಕ್ಕೆ ಕಳಸವಿಡುವಂತೆ, ಪಂಜಾಬದ ಎರಡೂ ಭಾಗಗಳಲ್ಲಿ ಜಾತೀಯ ಗಲಭೆಗಳೆದ್ದು ಇತಿಹಾಸದಲ್ಲೆ ಅಭೂತಪೂರ್ವವಾದ ಕೊಲೆ ಸುಲಿಗೆಗಳಿಂದ ಲಕ್ಷಗಟ್ಟಲೆ ಹಿಂದೂ-ಮುಸ್ಲಿಮರು ಪ್ರಾಣಗಳನ್ನು ಕಳೆದುಕೊಂಡರು. ಉಳಿದವರು ಹಿಂದುಸ್ತಾನದಿಂದ ಪಾಕಿಸ್ತಾನಕ್ಕೂ ಅಲ್ಲಿಂದ ಇಲ್ಲಿಗೂ ಬರಿಗೈಯಲ್ಲಿ ಗುಳೆ ಬಂದರು. ಈ ಲಕ್ಷಾಂತರ ನಿರಾಶ್ರಿತರ ಯೋಗಕ್ಷೇಮದ ಅಕಲ್ಪಿತ ಹೊಣೆಯೂ ನಮ್ಮ ಸರಕಾರದ ಮೇಲೆ ಬಿತ್ತು.

ಕಾಯಿದೆ, ಸುವ್ಯವಸ್ಥೆ

ಆದರೆ ಹೊಸದಿಲ್ಲಿಯಲ್ಲಿ ಸರಕಾರದ ಲಗಾಮುಗಳನ್ನು ಕೈಯಲ್ಲಿ ತೆಗೆದುಕೊಂಡಿದ್ದ ಆ ಇಬ್ಬರು ಕ್ರಾಂತಿಕಾರರೂ ಅವರ ಸಹಯೋಗಿಗಳೂ ಈ ಘೋರ ತುಮುಲದಿಂದ ಗಾಬರಿಯಾಗಿ ಕೈಕಾಲು ಬಿಡಲೊಪ್ಪಲಿಲ್ಲ. ಅವರಿಗೆ ಸರಕಾರ ನಡೆಸುವ ಕಲೆಯ ಅನುಭವ ಅಷ್ಟೇನೂ ಇರಲಿಲ್ಲ. ಆದರೆ ಅವರು ಕ್ರಾಂತಿಕಾರರು. ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರಾಣಗಳನ್ನೆ ಪಣಕ್ಕೆ ಹಚ್ಚಿದವರು. ಅವರ ಕರ್ಣಧಾರತ್ವದಲ್ಲಿ ನಮ್ಮ ಸ್ವಾತಂತ್ರ್ಯ ಈ ಭಯಾನಕ ಬಿರುಗಾಳಿಯಿಂದ ಪಾರಾಗಿ ವರ್ಷದ ಹುಟ್ಟುಹಬ್ಬವನ್ನು ಕಂಡಿದೆಯೆಂಬುದು ಆ ನಾಯಕರಿಗೂ ಅವರಲ್ಲಿ ದೃಢವಾದ ವಿಶ್ವಾಸವಿಟ್ಟು ಬೆಂಬಲ ನಿಂತ ಜನತೆಗೂ ಹೆಮ್ಮೆಯ ಮಾತೇ ಸರಿ. ಬ್ರಿಟಿಶರ ಕಾಲಕ್ಕೂ ಇಂದಿನ ದಿನಗಳಿಗೂ ಬಹಳ ಅಂತರ ಕಾಣುವದಿಲ್ಲ; ಸ್ವಾತಂತ್ರ್ಯ ಸೌಖ್ಯದ ಅಚ್ಚು ದೇಶದ ಮುಖದಲ್ಲಿ ತೋರುವದಿಲ್ಲ; ಹೀಗೆಂದು ಗೊಣಗುಟ್ಟಲು ಅವಕಾಶವಿದ್ದೇ ಇದೆ. ಆದರೆ ಇಂಥ ಪರಿಸ್ಥಿತಿಯಲ್ಲಿ ಸ್ವಯಂ ಬ್ರಹ್ಮನೇ ಬಂದಿದ್ದರೂ ಇದಕ್ಕಿಂತ ಹೆಚ್ಚಿನದೇನನ್ನಾದರೂ ಸಾಧಿಸುತಿದ್ದನೇ ಎಂಬದು ಸಂಶಯ.

ಯಾವದೊಂದು ರಾಜ್ಯದ ಸುಖಶಾಂತಿ ಪ್ರಗತಿ—ಏಕೆ ರಾಜ್ಯತ್ವೇನ ಅಸ್ತಿತ್ವವೇ—ಕಾಯಿದೆ ಸುವ್ಯವಸ್ಥೆಗಳ ಸ್ಥೈರ್ಯದಲ್ಲಿ ಅಡಕವಾಗಿರುತ್ತದೆ. ಆದರೆ ಕತ್ತರಿಸಿದ ಹಿಂದುಸ್ತಾನದ ಕತ್ತರಿಸಿದ ಸೈನ್ಯ ಮತ್ತು ಪೋಲೀಸ ಪಡೆಗಳ ಸತ್ವಪರೀಕ್ಷೆಗಾಗಿ ಪ್ರಚಂಡ ಗಲಭೆಗಳು ಸ್ವಾತಂತ್ರ್ಯದ ಬೆನ್ನಿಗೇ ಬಂದವು. ನೇರವಾಗಿ ಸಂಬಂಧಿಸಿದ ಪೂರ್ವ-ಪಂಜಾಬದಲ್ಲಿ ಮಾತ್ರವಲ್ಲ, ರಾಜಧಾನಿಯಾದ ದಿಲ್ಲಿ ನಗರದಲ್ಲಿ ಕೂಡ ಘೋರ ಅತ್ಯಾಚಾರಗಳು ನಡೆದವು. ಪಾಕಿಸ್ತಾನಿ ಪಂಜಾಬದಿಂದ ಮನೆಮಾರು ಕಳೆದುಕೊಂಡು ಇಲ್ಲಿಗೆ ಬಂದ ಲಕ್ಷೋಪಲಕ್ಷ ಹಿಂದೂ ಸೀಖರು, ಇಲ್ಲಿಂದ ಅಲ್ಲಿಗೆ ಹೋಗುವ ಮುಸ್ಲಿಮ ನಿರಾಶ್ರಿತರು ನಿರ್ಮಾಣಮಾಡಿದ ಗೊಂದಲವನ್ನು ತಡೆಯುವದೇನೋ ಶಕ್ಯವಾಗಲಿಲ್ಲ. ಆದರೆ ಅದನ್ನು ದೇಶದ ಇತರ ಭಾಗಗಳಿಗೆ ಹಬ್ಬದಂತೆ ತಡೆದು ಹಬ್ಬಿದ ಭಾಗಗಳಲ್ಲಿ ಅವನ್ನು ಬೇಗನೆ ಹಿಡಿತಕ್ಕೆ ತಂದುದು ಸರಕಾರದ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಪೋಲೀಸು ಮತ್ತು ನಾಗರಿಕ ಆಡಳಿತಾಧಿಕಾರಗಳಲ್ಲಿದ್ದ ಮುಸ್ಲಿಮರು ಪಾಕಿಸ್ತಾನದ ದಾರಿ ಹಿಡಿದಿದ್ದುದರಿಂದ ಆಡಳಿತಯಂತ್ರ ಹವಗೆಟ್ಟಿತ್ತು. ಎಷ್ಟೋ ವರ್ಷಗಳಿಂದ ಯುದ್ಧನಿಮಿತ್ತ ಪೋಲೀಸ ಮತ್ತು ನಾಗರಿಕ ಆಡಳಿತ ವರ್ಗಕ್ಕೆ ನೌಕರರನ್ನು ಭರ್ತಿಮಾಡಿಯೆ ಇದ್ದಿಲ್ಲ. ೬೦೦ ಕ್ಕೆ ಮೇಲ್ಪಟ್ಟು ಬ್ರಿಟಿಶ ಅಧಿಕಾರಿಗಳು ಹೊತ್ತುನೋಡಿ ಹಿಂದೀ ಸರಕಾರದ ಸೇವೆಯನ್ನು ಬಿಟ್ಟುಕೊಟ್ಟಿದ್ದರು. ಇಂಥ ಪ್ರಸಂಗದಲ್ಲಿಯೂ ಕೇಂದ್ರ ಸರಕಾರದ ಆಡಳಿತ ಭಾಗಗಳಲ್ಲಿ ಮಾತ್ರವಲ್ಲದೆ ಪ್ರಾಂತಿಕ ಸರಕಾರಗಳ ಕ್ಷೇತ್ರಗಳಲ್ಲಿ ಕೂಡ ಶಾಂತಿ ಸುವ್ಯವಸ್ಥೆಗಳನ್ನು ಪುನಃ ಪ್ರಸ್ಥಾಪಿಸಲು ಹಾಗು ಕಾಯಲು ಸರದಾರ ಪಟೇಲರ ಗೃಹಖಾತೆಗೆ ಸಾಧ್ಯವಾಯಿತು. ಇಂದು ಭಾರತದಲ್ಲಿ ಜಾತಿ ಮತಗಳೆನ್ನದೆ ಎಲ್ಲರ ವಿತ್ತ ಜೀವಿತಗಳು ಭದ್ರವಾಗಿವೆಯೆಂದು ಸಿದ್ಧಪಡಿಸಲು ಪಾಕಿಸ್ತಾನಕ್ಕೆ ಹೋದ ಸಾವಿರಾರು ಮುಸ್ಲಿಮರು ತಿರುಗಿ ಬರುತಿರುವದೊಂದೇ ಸಾಕು.

ಆದರೆ ಇದು ಸಾಧ್ಯವಾಗಬೇಕಾದರೆ ಸರಕಾರ ಅನೇಕ ವಿಶೇಷಾಧಿಕಾರಗಳನ್ನು ಉಪಯೋಗಿಸಬೇಕಾಯಿತು. ಕೇಂದ್ರದ ಆಡಳಿತಕ್ಕೆ ಸೇರಿದ ಭಾಗಗಳಲ್ಲಿ ಮಾತ್ರವಲ್ಲ, ಹೆಚ್ಚು ಕಡಿಮೆ ಎಲ್ಲ ಪ್ರಾಂತಗಳಲ್ಲಿಯೂ ವಿಶೇಷ ಅಧಿಕಾರಗಳನ್ನು ಪ್ರಯೋಗಿಸಿ ವ್ಯಕ್ತಿಯ ಮತ್ತು ಪತ್ರಿಕೆಗಳ ಸ್ವಾತಂತ್ರ್ಯವನ್ನು ಬಹಳ ಮಟ್ಟಿಗೆ ಕಸಿದುಕೊಳ್ಳಲಾಯಿತು. ಸಾವಿರಾರು ಜನರನ್ನು ವಿಚಾರಣೆಯಿಲ್ಲದೆ ಬಂಧಿಸಿಡಲಾಯಿತು. ಆದರೆ ಕಮ್ಯುನಿಸ್ಟ ಅರಾಜಕತೆಯನ್ನೂ ಜಾತೀಯ ಅತಿಗಾಮಿಗಳ ವಿಷಪೂರಿತ ಪ್ರಚಾರ, ಒಳಸಂಚುಗಳನ್ನೂ ಗೊತ್ತಿಗೆ ಹಚ್ಚಲು ಅನ್ಯ ಉಪಾಯಗಳೇ ಇರಲಿಲ್ಲ.

ಈಗ ಆಡಳಿತ ಯಂತ್ರವನ್ನು ಸುಕ್ಷಮವಾಗಿ ಮಾಡಲು ಅವಶ್ಯವಾದ ಭರ್ತಿಗಳು ನಡೆದಿವೆ. ಹಿಂದಿನ ಜಾತಿ ಪಕ್ಷಪಾತಿ ಪದ್ಧತಿಯನ್ನು ತ್ಯಜಿಸಿ ಎಲ್ಲ ಗುಂಪುಗಳಿಗೆ ನ್ಯಾಯವಾದ ಪ್ರಾತಿನಿಧ್ಯ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಜಾತೀಯತೆಗೆ ಪೂರ್ತಿ ಅರ್ಧಚಂದ್ರ ವಾಗಲಿಲ್ಲವಾದರೂ ಕೆಲ ಜಾತಿಗಳಿಗಾದ ಅನ್ಯಾಯದ ಪರಿಮಾರ್ಜನೆಯಾದರೂ ಆಯಿತೆಂದು ಒಪ್ಪಬೇಕು.

ಆಹಾರ ಸಮಸ್ಯೆ

ಸ್ವಾತಂತ್ರ್ಯ ಬಂದಾಗ ನಮ್ಮ ಆಹಾರ ಸಮಸ್ಯೆಯೂ ತೀರ ವಿಷಮವಾಗಿತ್ತು. ಯುದ್ಧದ ವರ್ಷಗಳಲ್ಲಿ ನಮ್ಮ ಆಹಾರ ಸಂಗ್ರಹ ಕಳಕಂಡಿತ್ತು 'ಮತ್ತು ಹೊರಗಿಂದ ಬರುವ ಪೂರೈಕೆಗಳು ನಿಂತುಹೋಗಿದ್ದವು. ೧೯೪೩ರಿಂದಲೇ ಪ್ರಾರಂಭವಾಗಿದ್ದ ನಿಯಂತ್ರಣಗಳೂ ಸೀದಾ ಪದ್ಧತಿಯೂ ಬೆಳೆದು ಬೆಳೆದು ೧೫ ಕೋಟಿ ಜನರ ಹೊಟ್ಟೆಯ ಹೊಣೆ ಸರಕಾರದ ಮೇಲಿದ್ದಾಗ ಸ್ವಾತಂತ್ರ್ಯ ಕೈಗೆ ಬಂತು. ಕೊರತೆಯ ಪರಿಣಾಮ ಎಷ್ಟಿತ್ತೆಂದರೆ ೧೯೪೬-೪೭ ರಲ್ಲಿ ೧೨೦ ಕೋಟಿ ಬೆಲೆಯ ಆಹಾರ ಧಾನ್ಯಗಳನ್ನು ಹೊರಗಿಂದ ತರಿಸಿದರೂ ನಮ್ಮ ಅವಶ್ಯಕತೆ ತುಂಬದೆ ಕೆಲವೆಡೆಗಳಲ್ಲಿ ತಲಾ ಸೀದಾ ಪ್ರಮಾಣ ೪ ಔಂಸ ವರೆಗೂ ಇಳಿದು ಹೋಗಿತ್ತು. ಈ ನಡುವೆ ಗಲಭೆಗಳ ಪರಿಣಾಮವಾಗಿ ಲಕ್ಷಾಂತರ ನಿರಾಶ್ರಿತರು ಸರಕಾರದ ಹೊಣೆಯನ್ನು ಹೆಚ್ಚಿಸಿದ್ದರು. ಒಂದು ಬಿಟ್ಟಿನಲ್ಲಿ ಕೇಂದ್ರ ಸರಕಾರವೊಂದೇ ೪ ಲಕ್ಷ ನಿರಾಶ್ರಿತರ ಹೊಟ್ಟೆಗೆ ಹಾಕುತಿತ್ತು. ಈ ನಡುವೆ ಮದ್ರಾಸ್ ಪ್ರಾಂತದಲ್ಲಿ ಬರ ಬಿದ್ದು ೧೪ ಲಕ್ಷ ಟನ್ ಆಹಾರ ಕೊರತೆ ಆದೊಂದೇ ಪ್ರಾಂತದಲ್ಲಿ ಆಗಬಹುದೆಂದು ಅಂದಾಜು ಮಾಡಲ್ಪಟ್ಟಿತು. ಸೆಪ್ಟಂಬರ ೧೦ ಕ್ಕೆ ರಾಜಧಾನಿಯಾದ ದಿಲ್ಲಿಯಲ್ಲಿ ಬರಿ ಎರಡು ದಿವಸ ಆಹಾರ ಸಂಗ್ರಹ ಉಳಿದಿತ್ತು. ಬಹಳ ಪ್ರಯತ್ನದಿಂದ ಸಂಗ್ರಹ ಸಕಾಲದಲ್ಲಿ ಬಂದು ಮುಟ್ಟಿತು, ನೆಟ್ಟಗಾಯಿತು. ಇಲ್ಲದಿದ್ದರೆ ಎಂಥ ಗಂಡಾಂತರವಿತ್ತು!

ಇಂಥ ಸ್ಥಿತಿಯಲ್ಲಿ ಇಷ್ಟು ಕೋಟಿ ಜನರ ಹೊಟ್ಟೆಯ ಹೊಣೆಯನ್ನು ಹೊತ್ತುಕೊಳ್ಳುವ ಧೈರ್ಯ ಸರಕಾರಕ್ಕಿರಲಿಲ್ಲ. ಆದುದರಿಂದ ಈ ವರ್ಷದ ಆರಂಭದಿಂದ ಸಾವಕಾಶವಾಗಿ ಆಹಾರ ಧಾನ್ಯಗಳ ವಿನಿಯಂತ್ರಣದ

— ೬ ನೆಯ ಪುಟಕ್ಕೆ




ಮುಂಬಯಿ ಮುಖ್ಯ ಮಂತ್ರಿ
ಶ್ರೀ ಖೇರ



ಸಂಯುಕ್ತಪ್ರಾಂತ ಮುಖ್ಯ ಮಂತ್ರಿ
ಪಂ. ಗೋವಿಂದ ವಲ್ಲಭ ಪಂತ



ಮದ್ರಾಸ ಮುಖ್ಯ ಮಂತ್ರಿ
ಶ್ರೀ ರಾಮಸ್ವಾಮಿ ರೆಡ್ಡಿ



ಮಧ್ಯಪ್ರಾಂತ ಮುಖ್ಯ ಮಂತ್ರಿ
ಪಂ. ರವಿಶಂಕರ ಶುಕ್ಲ

ಒಂದು ವರ್ಷದ ಸ್ವಾತಂತ್ರ್ಯ

(೫ ನೇ ಪುಟದಿಂದ ಮುಂದುವರಿದುದು)

ಬೇಕಾಗುವುದನ್ನು ಸರಕಾರ ಕೈಕೊಂಡಿತು. ಇದರ ಪರಿಣಾಮ ಅಪೇಕ್ಷಿಸಿದಷ್ಟು ಒಳ್ಳೆಯದಾಗ ಲಿಲ್ಲವೆಂಬುದು ನಿಜ. ಅನೇಕ ಕೊರತೆ ಪ್ರದೇಶಗಳಲ್ಲಿ ಬೆಲೆಗಳು ನಿಯಂತ್ರಿತ ಬೆಲೆಗಳಿಗಿಂತ ಇಮ್ಮಡಿ ಮುಮ್ಮಡಿಯಾಗಿವೆ. ಆದರೆ ಅಗ್ಗದರದ ಅಂಗಡಿಗಳೇ ಮೊದಲಾದವುಗಳ ಮೂಲಕ, ದೊಡ್ಡ ಪ್ರಮಾಣದ ಜನಕ್ಕೆ ಕಾಳುಗಳು ಪಡಿತರವಾಗಿ ಹಂಚಲಾಗಿದೆ. ವಿದೇಶಗಳಿಂದ ಧಾನ್ಯವನ್ನು ತರಿಸುವುದರಲ್ಲೂ ಬಂದುದನ್ನು ಕೊರತೆಯ ಪ್ರದೇಶಗಳಿಗೆ ಸಾಗಿಸುವುದರಲ್ಲೂ ಸರಕಾರಕ್ಕೆ ಸಾಕಷ್ಟು ಯಶಸ್ಸು ದೊರೆತಿದೆ. ಸರಕಾರದ ಪ್ರಯತ್ನಗಳ ಫಲವಾಗಿ ಈ ವರ್ಷ (೧೯೪೭-೪೮) ರ ಆಹಾರ ಉತ್ಪನ್ನವು ೧೦ ಲಕ್ಷ ಟನ್ನು ಹೆಚ್ಚಾಗಿದೆ. ಶಾಂತಿ ಸುವ್ಯವಸ್ಥೆಗಳ ಗೊಂದಲದ ವಿಪತ್ತಿನ ಮಧ್ಯದಲ್ಲಿಯೂ ಆಹಾರದ ಸಂಪಾದನೆ ಮತ್ತು ಸಾಗಣೆಯ ವಿಷಯದಲ್ಲಿ ಸರಕಾರ ಎಷ್ಟು ಬಿಗಿ ಅಸ್ಥೆ ವಹಿಸಿತ್ತೆಂಬುದೇ ಅಸಾಧಾರಣ ತಪ್ಪಿತು. ಈಗ ಎಲ್ಲ ಕೊರತೆ ಪ್ರಾಂತಗಳಲ್ಲೂ ಸಾಕಷ್ಟು ಸಂಗ್ರಹ ವಿರುವದಲ್ಲದೆ ಕೇಂದ್ರವೂ ಮೊಟ್ಟಮೊದಲನೆ ಬಾರಿ ಸಣ್ಣ ಸಂಗ್ರಹವೊಂದನ್ನು ನಿರ್ಮಿಸಲು ಸಮರ್ಥವಾಗಿದೆಯೆಂದು ತಿಳಿಯುತ್ತದೆ.

ಆರ್ಥಿಕ ಪರಿಸ್ಥಿತಿ


ದೇಶದ ಆರ್ಥಿಕ ಸ್ಥಿತಿಯಲ್ಲಿ ಮಾತ್ರ ಹೇಳಿಕೊಳ್ಳುವಂಥ ಸುಧಾರಣೆಯಾಗಿಲ್ಲ. ಬೆಲೆಗಳು ಎಂದಿನಂತೆ, ಏಕೆ, ಎಂದಿಗಿಂತಲೂ ಹೆಚ್ಚಾಗಿ, ಏರಿಕೆಯಲ್ಲೇ ಇವೆ. ಪರಿಣಾಮವಾಗಿ, ಸಂಬಳಗಳಲ್ಲೂ ಕೂಲಿ ದರಗಳಲ್ಲೂ ಹೆಚ್ಚಳವಾಗ

ಉದ್ಯೋಗಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ೧೮ ತಿಂಗಳ ಒಂದು ತ್ವರಿತದ ಯೋಜನೆಯೂ ೩೬ ತಿಂಗಳ ಅಲ್ಪಾವಧಿ ಯೋಜನೆಯೂ (ವೆಚ್ಚ ೨೦೦ ಕೋಟಿ) ಸಿದ್ಧವಾಗಿದ್ದು ಅವು ಪೂರ್ತಿಯಾದಾಗ ಉತ್ಪಾದನೆ ಎಷ್ಟೋ ಪಾಲು ಹೆಚ್ಚುವದೆಂದು ನಿರೀಕ್ಷೆಯಿದೆ. ಈ ಯೋಜನೆಗಳು ಈಗಾಗಲೆ ಪ್ರಯೋಗಕ್ಕಿಳಿದಿವೆ. ಇವಲ್ಲದೆ ಆಹಾರ ಹಾಗು ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚಿಸಲು ನದಿಗಳ ಉಪಯೋಗವಾಗುವಂತೆ ದಾಮೋದರ, ಕೋಸಿ, ಹಿರಾಕೂಡ ಮೊದಲಾದ ಯೋಜನೆಗಳು ಈಗಾಗಲೆ ಕಾರ್ಯರೂಪಕ್ಕೆ ಬರಲಿವೆ. ಸ್ಟರ್ಲಿಂಗ್ ಕ್ಷೇತ್ರದ ಹೊರಗಿನ ನಾಣ್ಯಗಳ ಸಂಗ್ರಹಕ್ಕಾಗಿ ಜಪಾನ, ಯುರೋಪ, ಅಮೇರಿಕಾ ಮೊದಲಾದ ದೇಶಗಳೊಡನೆ ವ್ಯಾಪಾರ ವ್ಯವಹಾರವನ್ನು ಬೆಳಸಲು ಅವಶ್ಯಕ ಕ್ರಮಗಳನ್ನೂ ಕೈಕೊಳ್ಳಲಾಗಿದೆ. ಇವೆಲ್ಲವೂ ಫಲಕಾರಿಯಾದಾಗ ದೇಶದ ಜನಸಾಮಾನ್ಯದ ಜೀವನದ ಮಟ್ಟ ಏರುವದರಲ್ಲಿ ಸಂಶಯವಿಲ್ಲ.

ಸಂರಕ್ಷಣೆ

ಪಾಲಾಗಿ ವಿಸಂಘಟಿತವಾದ ಭೂಜಲಾಕಾಶ ಪಡೆಗಳನ್ನು ನಾವು ಪಡೆದೆವು. ಸೈನ್ಯದ ಹಿಂದೀಕರಣಕ್ಕೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಬ್ರಿಟಿಶ ಅಧಿಕಾರಿಗಳನ್ನು ಅಧಿಕಾರಸ್ಥಾನಗಳಿಂದ ನಿವೃತ್ತಿಗೊಳಿಸಿ ಇಂದು ಪೂರ್ಣ ಹಿಂದೀಕೃತ ಸೈನ್ಯವನ್ನು ಕೊಟ್ಟಿದ್ದೇವೆ. ಈಗ ಕೇವಲ

ಆಧುನಿಕ ಯುದ್ಧಕಲೆಯ ಸರ್ವ ಅಂಶಗಳಲ್ಲಿಯೂ ನಮ್ಮ ಸೈನ್ಯಕ್ಕೆ ತರಬೇತಿ ಕೊಡುವ ಅವಶ್ಯಕತೆ ಇನ್ನೂ ಇದೆಯೆಂಬಲ್ಲಿ ಸಂಶಯವಿಲ್ಲ. ಸಂರಕ್ಷಣೆಗೆ ಅನ್ಯವಾದ ಮಾರ್ಗ ಮತ್ತು ಇತರ ಸಂಪರ್ಕ ಸಾಧನಗಳೂ ಅಪಾರವಾಗಿ ಸುಧಾರಿಸಬೇಕು. ಇದಕ್ಕಾಗಿ ಬ್ರಿಟಿಶರಲ್ಲದೆ ಬೇರೆ ತಜ್ಞರನ್ನೂ ನೇಮಿಸಿಕೊಳ್ಳಬೇಕಾಗಬಹುದು. ಸಂಪರ್ಕ ಸಾಧನಗಳ ಸುಧಾರಣೆಯ ಯೋಜನೆ ಸಜ್ಜಾಗಿ ಬೆಂಗಳೂರಲ್ಲಿ



ಬಿಹಾರ ಮುಖ್ಯಮಂತ್ರಿ
ಶ್ರೀ ಕೃಷ್ಣಸಿಂಹ

ಸ್ಥಾಪಿತವಾಗಲಿರುವ ಟೆಲಿಫೋನ ಕಾರಖಾನೆಯೊಡನೆ ಪ್ರಾರಂಭವಾಗಿದೆಯೆನ್ನಬಹುದು. ನೌಕಾಪಡೆಯನ್ನು ಬಲಪಡಿಸುವ ಕ್ರಮಗಳೂ ಕೈಕೊಳ್ಳಲ್ಪಟ್ಟಿವೆ.

ರಾಜಕೀಯ

ಸ್ವಾತಂತ್ರ್ಯ ನಂತರ ಭಾರತದಲ್ಲಾದ ರಾಜಕೀಯ ಸ್ಥಿತ್ಯಂತರವಂತೂ ಚಿನ್ನದ ಅಕ್ಷರಗಳಲ್ಲಿ ಬರೆದಿಡಬೇಕಾದ ಸಂಗತಿ. ವಿಭಕ್ತ ಹಿಂದುಸ್ಥಾನದ ೧೨.೩೦ ಲಕ್ಷ ಚದರ ಮೈಲು ವಿಸ್ತೀರ್ಣದಲ್ಲಿ ೫.೮೮ ಲಕ್ಷ ಚದರ ಮೈಲು ಹಿಂದೀ ಸಂಸ್ಥಾನಗಳಿಂದ ಆವರಿಸಲ್ಪ

ಯುವ ಲಕ್ಷಣವಿಲ್ಲ. ಆ ಉಪಾಯದ ಸನ್ನಾಹ ಈಗಾಗಲೆ ಆಗಿದೆ.

ಒಕ್ಕೂಟ ಭಾರತದ ರಾಜಕಾರಣ ಆಸ್ವಸ್ಥ ಸ್ಥಿತಿಯಲ್ಲಿದೆ. ಕಾಂಗ್ರೆಸ್ ಪಕ್ಷವೇ ಇಂದು ಅದ್ವಿತೀಯ ಸ್ಥಾನ ಮಾನಗಳನ್ನನುಭವಿಸುತಿದೆಯೆಂಬಲ್ಲಿ ಯಾವ ಸಂದೇಹಕ್ಕೂ ಎಡೆಯಿಲ್ಲ. ಆದರೆ ಆರ್ಥಿಕ ಮತ್ತು ನಾಗರಿಕ ಹಿತ ಸಂಬಂಧಗಳ ಆಧಾರದ ಮೇಲೆ ಪಕ್ಷಗಳು ಆಗಹತ್ತಿವೆ. ಸಮಾಜವಾದಿಗಳು ಕಾಂಗ್ರೆಸ್ಸಿನಿಂದ ಸಿಡಿದು ಹೋದರೂ ಮಾತ್ರ ಸಂಸ್ಥೆಗೆ ಪ್ರಬಲ ಎದುರಾಳಿಯೆನಿಸುವಷ್ಟು ಬಲಗೊಂಡಿಲ್ಲ. ಹಿಂದೂ ಮಹಾಸಭೆ, ಮುಸ್ಲಿಂ ಲೀಗ್, ಅಕಾಲಿ ಪಕ್ಷ ಮೊದಲಾದ ಜಾತೀಯ ಸಂಸ್ಥೆಗಳ ರಾಜಕಾರಣ ತೀರ ಅಳಿದು ಹೋಯಿತೆನ್ನುವಂತಿಲ್ಲವಾದರೂ ಅವು ಹಿಂದೇಟನ್ನಂತೂ ತಿಂದಿವೆ. ಮಹಾರಾಷ್ಟ್ರದಲ್ಲಿಯೂ ಬಂಗಾಲದಲ್ಲಿಯೂ ಚಿಲ್ಲರೆ ಪಕ್ಷಗಳು ಹುಟ್ಟಿವೆ. ಇವೆಲ್ಲವುಗಳ ತುಲನಾತ್ಮಕ ಶಕ್ತಿ ಮುಂಬರುವ ಚುನಾವಣೆಗಳಲ್ಲೇ ಸಿದ್ಧವಾಗಬೇಕಷ್ಟೆ.

ಘಟನಾ ಸಮಿತಿಯ ಉಪಸಮಿತಿ ಹೊಸ ಘಟನೆಯ ಕರಡನ್ನು ಸಿದ್ಧಗೊಳಿಸಿದೆ. ಅದರಲ್ಲಿ ಅಲ್ಪಸ್ವಲ್ಪ ದೋಷಗಳಿದ್ದರೂ ಅದು ಪ್ರಜಾತಂತ್ರಾತ್ಮಕವಾಗಿದೆಯೆಂಬಲ್ಲಿ ಸಂಶಯವಿಲ್ಲ.

ವಿದೇಶ ನೀತಿ

ವಿದೇಶ ನೀತಿಯಲ್ಲಿ ನಾವಿನ್ನೂ "ಕತ್ತಲಲ್ಲಿ ಕೈಯಾಡಿಸು"ತ್ತಿದ್ದೇವೆಂದು ಒಪ್ಪಲೇಬೇಕು. ಮಾಸ್ಕೋ, ವಾಶಿಂಗಟನ್, ತುರ್ಕಿ, ಕಾಯರೋ, ಪ್ಯಾರೀಸ್ ಮೊದಲಾದೆಡೆಗಳಲ್ಲಿ




ಪ. ಬಂಗಾಲ ಮುಖ್ಯಮಂತ್ರಿ
ಡಾ. ಬಿಧನಚಂದ್ರರಾಯ



ಒರಿಸಾ ಮುಖ್ಯಮಂತ್ರಿ
ಶ್ರೀ ಹರೇ ಕೃಷ್ಣ ಮೆಹತಾಬ



ಆಸಾಮ ಮುಖ್ಯಮಂತ್ರಿ
ಶ್ರೀ ಗೋಪಿನಾಥ ಬಾರ್ದೋಲಾಯಿ



ಪೂರ್ವ ಪಂಜಾಬ ಮುಖ್ಯಮಂತ್ರಿ
ಡಾ. ಗೋಪೀಚಂದ ಭಾರ್ಗವ

ಬೇಕೆಂಬ ಕೂಗು ಎದ್ದಿದೆ. ಇದೊಂದು ಕೊನೆಯಿಲ್ಲದ ಪ್ರತಿಕ್ರಿಯೆ. ಬೆಲೆಗಳ ಫಲವಾಗಿ ಸಂಬಳಗಳೂ ಸಂಬಳ ಏರಿದ್ದರ ಮೂಲಕ ತಿರುಗಿ ಬೆಲೆಗಳೂ ಏರುತ್ತ ಹೋಗುವವು. ಜೀವನಾವಶ್ಯಕ ವಸ್ತುಗಳ ಕೊರತೆ ನೀಗದುದೆ ಇದಕ್ಕೆ ಕಾರಣ. ಉತ್ಪಾದನೆ ಹೆಚ್ಚುವದೊಂದೆ ಇದಕ್ಕೆ ಪರಿಹಾರೋಪಾಯ. ಉತ್ಪಾದನೆಯನ್ನು ಹೆಚ್ಚಿಸಲು ಉತ್ತೇಜನ ದೊರೆಯಬೇಕೆಂದೇ ಅನ್ನವಸ್ತ್ರಗಳ ವಿನಿಯಂತ್ರಣಕ್ಕೆ ಸರಕಾರ ಸಮ್ಮತಿಸಿತು. ಅದಕ್ಕಾಗಿಯೇ ಹತ್ತುವರ್ಷಗಳ ವರೆಗೆ ಈಗಿರುವ ಉದ್ದಿಮೆಗಳ ರಾಷ್ಟ್ರೀಕರಣ ಮಾಡುವ ಗೊಡವೆಗೆ ಹೋಗುವದಿಲ್ಲೆಂದೂ ಆಶ್ವಾಸನಕೊಟ್ಟಿತು. ಅದರೂ ಜವಳಿ ಮತ್ತು ಆಹಾರದ ಉದ್ದಿಮೆಗಳಲ್ಲಿ ಹೊರತು ಉತ್ಪಾದನೆ ಹೆಚ್ಚಿದ್ದು ಅಷ್ಟೇನೂ ಕಾಣುವದಿಲ್ಲ. ಬಂಡವಲಗಾರರು ಹಣವನ್ನು ತೊಡಗಿಸಲು "ನಾಳೆ"ಗಾಗಿ ಕಾಲಕ್ಕೆ ಲಾಭದ ಪ್ರಮಾಣವನ್ನು ಏರಿಕೆ ಯಲ್ಲಿಡುವ ಸಲುವಾಗಿ ಉತ್ಪಾದನೆಯನ್ನು ನಿಃಸಗೊಳಿಸುವ ದುಷ್ಪ್ರವೃತ್ತಿಯೂ ಕಂಡು ಬರುತ್ತಿದೆ. ಉದ್ದಿಮೆಗಳ ವಿಸ್ತರಣಕ್ಕೆ ಇನ್ನೊಂದು ತೊಂದರೆಯೆಂದರೆ ವಿದೇಶಗಳಿಂದ ಯಂತ್ರ ಸಾಮಗ್ರಿಗಳನ್ನು ತರಿಸುವ ಅಡಚಣೆಗಳು. ನಮಗೆ ಬ್ರಿಟನ್ನಿನಿಂದ ಬರಬೇಕಾದ ೧೨೦೦ ಕೋಟಿ ರೂಪಾಯಿಗಳಲ್ಲಿ ನಮ್ಮಕ್ಕೆ ಬೇಕಿರುವ ಅಂಥ ಕೂಡ ಸಾಮಗ್ರಿಗಳ ಕೊರತೆಯಿರುವ ಸ್ಟರ್ಲಿಂಗ್ ಪ್ರದೇಶದಲ್ಲಿ ಮಾತ್ರ ಉಪಯೋಗಕ್ಕೆ ಬರುವಂತಿದ್ದು ಅಲ್ಲಿ ಬೆಲೆ ಹೆಚ್ಚು, ವಸ್ತುಗಳು ದುರ್ಲಭ ಎನಿಸಿವೆ. ವಿದೇಶಿ ಬಂಡವಲಿಗರೊಡನೆ ಬಗೆಹರಿಯದ ಆರ್ಥಿಕ ಪಾಶ್ಯಕ್ಕೆ ಅಂಜಿ ಸರಕಾರ ಅದನ್ನು ಆದರಿಸುವ ಸ್ವಾಗತಿಸಲು ಸಹಜವಾಗಿಯೆ ಹಿಂಜರಿಯುತ್ತಿದೆ. ಅದರೂ ಜವಳಿ, ಉಕ್ಕು, ರಾಸಾಯನಿಕ ಗೊಬ್ಬರ ಮೊದಲಾದ ೬

೨೦೦ಕ್ಕಿಂತ ಸ್ವಲ್ಪ ಹೆಚ್ಚು ಬ್ರಿಟಿಶ ಅಧಿಕಾರಿಗಳು, ಅದೂ ಬರಿ ಸಲಹೆ ತರಬೇತಿಗಳನ್ನು ಕೊಡುವ ತಜ್ಞರಾಗಿ, ನಮ್ಮ ಸೈನ್ಯದಲ್ಲಿ ಉಳಿದಿದ್ದಾರೆ. ಸ್ವಾತಂತ್ರ್ಯ ದೊರೆತು ನಾಲ್ಕೇ ತಿಂಗಳುಗಳಲ್ಲಿ ನಮ್ಮ ನೆಲ ಮತ್ತು ಆಕಾಶ ಪಡೆಗಳು ಕಾಶ್ಮೀರದ ಸಂರಕ್ಷಣೆಗೆ ಸಿದ್ಧವಾಗಬೇಕಾಯಿತು. ಕಾಶ್ಮೀರದಲ್ಲಿ ನಮ್ಮ ಸೈನ್ಯ ಮಿಂಚಿನ ವೇಗದಿಂದ ಏನನ್ನೂ ಸಾಧಿಸಲಿಲ್ಲವಾದರೂ ವೈರಿಗಳು ಪಾಕಿಸ್ತಾನದಲ್ಲಿ ಠಾಣೆ ಊರಿ ಕಾಶ್ಮೀರದ ಮೇಲೆ ಮಾಡುತ್ತಿದ್ದ ದಾಳಿಯನ್ನು ಪಾಕಿಸ್ತಾನದ ಮೇಲೆ ದಾಳಿ ಮಾಡದೆ ನಮ್ಮ ಸೈನ್ಯ ಎದುರಿಸಬೇಕಾಯಿತೆಂಬುದನ್ನು ಮರೆಯತಕ್ಕದ್ದಲ್ಲ. ಮೇಲಾಗಿ ರಸ್ತೆ ಸಾರಿಗೆಗೆ ತುಂಬ ಅನಾನುಕೂಲತೆ; ಹವೆ ಮತ್ತು ಪ್ರಾಕೃತಿಕ ಲಕ್ಷಣಗಳ ಅಡಚಣೆ; ಇಷ್ಟೆಲ್ಲ ಇದ್ದರೂ ನಮ್ಮ ಸೈನಿಕರು ಶೌರ್ಯದಿಂದಲೂ ಕೌಶಲದಿಂದಲೂ ಹೋರಾಡಿ ಶತ್ರುವನ್ನು ಹಣಿದರು. ಇಂದು ಪಾಕಿಸ್ತಾನದ ಗಡಿಯಬಳಿ ಸ್ವಲ್ಪ ಭಾಗ ಹೊರತು ಉಳಿದೆಲ್ಲ ಕಾಶ್ಮೀರ ಶತ್ರುಮುಕ್ತವಾಗಿದೆ. ಈ ಇಡೀ ಸಂರಕ್ಷಣೆಯ ಯೋಜನೆ ಬ್ರಿಟಿಶ ಸಲಹೆಗಾರರ ಸಹಾಯವಿಲ್ಲದೆ ನಮ್ಮ ಸೇನಾಧಿಕಾರಿಗಳಿಂದಲೇ ರಚಿಸಿ ಕೃತಿಯಲ್ಲಿಳಿಸಲ್ಪಟ್ಟಿತೆಂಬುದು ಗಮನಾರ್ಹ. ಮಿಲಿಟರಿ ಮತ್ತು ಸಿವ್ಹಿಲ್ ಎಂಜನೀಯರರು ಕೂಡಿ ನಾಲ್ಕೇ ತಿಂಗಳಲ್ಲಿ ರಚಿಸಿದ ಪಠಾಣಕೋಟ ಜಮ್ಮು ರಸ್ತೆ ಒಂದು ದೊಡ್ಡ ಕೈಚಳಕವೇ ಸರಿ. ಈ ದಾಳಿಯಲ್ಲಿ ನಮ್ಮ ಏಳಿಯ ವಿಮಾನಪಡೆ ತೋರಿಸಿದ ಸಾಹಸ ಪ್ರಶಂಸಾರ್ಹವಾದದ್ದು. ಈಗ ತಿರುಗಿ ಹೈದರಾಬಾದದ ಮೇಲೆ ಸೈನ್ಯಕ್ರಮಗಳನ್ನು ಕೈಕೊಳ್ಳುವ ಕಾಲ ಬಂದಿದೆ. ಅಲ್ಲಿಯೂ ನಮ್ಮ ಪಡೆಗಳು ಉಚ್ಚತರವಾದ ಶಿಸ್ತು ಸಂಘಟನೆಗಳನ್ನು ತೋರುವವೆಂದು ಖಂಡಿತವಾಗಿ ನಂಬಬಹುದು.

ಟ್ಟಿತ್ತು. ಇವು ೬೦೦ ಕ್ಕೂ ಮಿಕ್ಕಿದ ಸಣ್ಣದೊಡ್ಡ ಸಂಸ್ಥಾನಗಳಲ್ಲಿ ಹರಿಹಂಚಾಗಿ ಹೋಗಿ ಎಲ್ಲವೂ ತಾವು ಸ್ವತಂತ್ರವೆಂದು ಕೂತಿದ್ದವು. ಈ ಸಮಸ್ಯೆಯನ್ನು ಸಾಮೋಪಾಯಗಳಿಂದಲೇ ತೀರಿಸಿದ ಶ್ರೇಯಸ್ಸು ಸರದಾರ ಪಟೇಲರದು. ಈ ಸಂಸ್ಥಾನಗಳಲ್ಲಿ ೪೩,೦೦೦ ಚೌರಸ ಮೈಲಿನಷ್ಟು ಪ್ರದೇಶ ಒಕ್ಕೂಟ ಭಾರತದಲ್ಲಿ ಲೀನವಾಯಿತು. ಉಳಿದ ಸಂಸ್ಥಾನಗಳಲ್ಲಿ ಒಂದಕ್ಕೊಂದು ಹತ್ತಿದ್ದ ಸಂಸ್ಥಾನಗಳು ತಮ್ಮ ತಮ್ಮೊಳಗೆ ಒಕ್ಕೂಟ ರಚಿಸಿಕೊಂಡವು. ಇಂಥ ೬ ಒಕ್ಕೂಟಗಳು ಇರದು ಅಸ್ತಿತ್ವದಲ್ಲಿವೆಯಲ್ಲದೆ ಹಿಮಾಚಲ ಪ್ರದೇಶವೆಂಬೊಂದು ಹೊಸ ಪ್ರಾಂತವೂ ರಚಿಸಲ್ಪಟ್ಟಿದೆ. ಹೀಗೆ ಇಂದು ಸಂಸ್ಥಾನಗಳು ಪ್ರಾಂತಗಳು ಮತ್ತು ಒಕ್ಕೂಟಗಳು ಸೇರಿ ಬರಿ ೩೦ ಘಟಕಗಳು ಉಳಿದಿವೆ. ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಾಯ್ದುಕೊಂಡ ಸಂಸ್ಥಾನಗಳೂ ಒಕ್ಕೂಟ ರಚಿಸಿದವುಗಳೂ ಪ್ರಜೆಗಳ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಘಟನಾಸಮಿತಿಗಳನ್ನು ರಚಿಸಿವೆಯಲ್ಲದೆ ಕೇಂದ್ರಕ್ಕೆ ಅವಶ್ಯಕ ಅಧಿಕಾರಗಳನ್ನೂ ಬಿಟ್ಟುಕೊಟ್ಟಿವೆ. ಇದನ್ನು "ರಕ್ತ ರಹಿತ ಕ್ರಾಂತಿ" ಯೆಂದು ಸರದಾರ ಪಟೇಲರು ಕರೆದುದು ಉಚಿತವೇ ಆಗಿದೆ. ಈ ಸಂಸ್ಥಾನಗಳಲ್ಲಿನ ಪ್ರಜೆಗಳೂ ಸುತ್ತುಮುತ್ತಲಿನ ಪ್ರದೇಶಗಳ ಜನರಂತೆ ಪ್ರಜಾಸತ್ತಾತ್ಮಕ ಪ್ರಗತಿಯ ಮಾರ್ಗದಲ್ಲಿ ಮುಂದುವರಿಯಲು ಯಾವ ಆತಂಕವೂ ಉಳಿದಿಲ್ಲ.

ಇನ್ನು ಉಳಿದಿರುವುದೆಂದರೆ ಕಾಶ್ಮೀರದ ಪ್ರಶ್ನೆ. ಅದು ಅಂತರ್ರಾಷ್ಟ್ರೀಯ ಮಟ್ಟವನ್ನು ಮುಟ್ಟಿದೆ. ಅದರ ನಿರ್ಣಯವೆಂತಾಗುವದೋ ನೋಡಬೇಕು. ಕೊನೆಯದಾಗಿ ಹೈದರಾಬಾದವೊಂದು ದಂಗೋಪಾಯವಿಲ್ಲದೆ ಮಣಿ

ರಾಯಭಾರಿಗಳನ್ನೂ ಇಂಗ್ಲಂಡ ಮತ್ತು ಇತರ ಬ್ರಿಟಿಶ ಸಾಮ್ರಾಜ್ಯ ರಾಷ್ಟ್ರಗಳಲ್ಲಿ ಹೈಕಮೀಶನರ ಹಾಗು ಪ್ರತಿನಿಧಿಗಳನ್ನೂ ನೇಮಿಸಲಾಗಿದೆ. ಆದರೆ ನಾವು ಸಮುದ್ದೇಶದಿಂದಲೇ ಯಾವ ಪಕ್ಷಕ್ಕೂ ಸೇರದೆ ತಟಸ್ಥರಾಗಿರಬೇಕೆಂದಿದ್ದರೂ ಪ್ರಬಲ ರಾಷ್ಟ್ರಗಳು ನಮ್ಮನ್ನು ಸಂಶಯದಿಂದಲೇ ನೋಡುತ್ತಿವೆ. ಕಾಶ್ಮೀರ ಪ್ರಶ್ನೆಯಲ್ಲಿ ನಮಗೊದಗಿದ ಅಪಯಶ ನಮ್ಮ ರಾಯಭಾರನೈಪುಣ್ಯದ ದ್ಯೋತಕವಲ್ಲ. ಆದರೆ ಅಸತ್ಯ, ಅಧಿಕಾರಲಾಲಸೆಗಳ ಮೇಲೆ ನಿಂತಿರುವ ಇಂದಿನ ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ಸತ್ಯವೂ ಗೆಲವೂ ಎರಡೂ ದೊರಕುವದು ದುರ್ಲಭ. ಮೇಲಾಗಿ ವಿದೇಶ ನೀತಿ ಒಂದು ದಿನದಲ್ಲಿ ಸಿದ್ಧಗೊಳಿಸಬಹುದಾದ ಸಂಗತಿಯಲ್ಲ. ಕಾಲಾಂತರದಲ್ಲಿ ಅದು ತಾನಾಗಿಯೆ ಸರಿಹೋಗಬೇಕು.

ಬ್ರಿಟಿಶ ಸಾಮ್ರಾಜ್ಯದೊಡನೆ ನಮ್ಮ ಸಂಬಂಧವೆಂತಿರಬೇಕೆಂಬ ಬಗ್ಗೆ ನಾವಿನ್ನೂ ನಿರ್ಧಾರಕ್ಕೆ ಬಂದಿಲ್ಲ. ಇಂಗ್ಲಂಡಿನ ಪ್ರಮುಖ ಪಕ್ಷವೊಂದು ನಾಚಿಕೆಯಿಲ್ಲದೆ ಭಾರತ ವಿರೋಧಿ ಧೋರಣವನ್ನು ಬಹಿರಂಗವಾಗಿ ಅನುಸರಿಸುತಿರುವಾಗ ನಾವು ಸಾಮ್ರಾಜ್ಯದೊಳಗೆ ಉಳಿಯುವದು ಕಠಿನ. ಅದರ ಉಳಿಯುವದರಿಂದ ಹಿತವಾಗುವ ಲಕ್ಷಣ ಕಂಡುಬಂದರೆ ಒಣ ಜಂಭಕ್ಕೆ ಬಿದ್ದು ನಾವು ಹೊರಹೋಗುವ ಸಂಭವವಿಲ್ಲ.

ಭರತವಾಕ್ಯ

ಮೇಲೆ ಒಂದು ವರ್ಷದ ಸ್ವಾತಂತ್ರ್ಯದ ಸ್ಥೂಲ ಸಿಂಹಾವಲೋಕನವನ್ನು ಮಾಡಲಾಗಿದೆ. ಅನೇಕ ವಿಷಯಗಳಲ್ಲಿ ನಾವು ನಿಶ್ಚಿತವಾಗಿಯೂ ಮುಂದಡಿಯಿಟ್ಟು ಸ್ಥಿರತರವಾದ

—೧೩ನೆಯ ಪುಟಕ್ಕೆ

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೧೩

ಅರಳೆಯ ಮೇಲೆ ನಿಯಂತ್ರಣ ಬರ ಬಹುದು, ಕಾಶ್ಮೀರದಲ್ಲಿ ಪಾಕಿಸ್ತಾನಿ ಪಡೆಗಳು ಯುದ್ಧ ಮಾಡುತಿರುವದರಿಂದ ಪರಿಸ್ಥಿತಿ ಕೆಡ ಬಹುದು, ಬಟ್ಟೆ ನಿಯಂತ್ರಣ ಇವೇ ಮೊದ ಲಾದ ಸಂಗತಿಗಳಿಂದ ಪೇಟೆಯಲ್ಲಿ ಬೆಲೆಗಳು ಹೊಯ್ದಾಡುತಿವೆ. ಒಟ್ಟಿನ ಮೇಲೆ ಪಾಲುಗಳ ಬೆಲೆ ಇಳಿಮುಖವಾಗಿದೆ. ಇಂದಿನ ಬೆಲೆಗಳು ಹೀಗಿದ್ದವು.

ಜವಳಿ

ಅಹಮದಾಬಾದ ಅಡ್ವಾನ್ಸ	೩೭೫-೦-೦
ಬಾಂಬೆ ಡಾಯಿಂಗ್	೧೦೪೭-೮-೦
ಸೆಂಟ್ರಲ ಇಂಡಿಯಾ	೩೮೩-೮-೦
ಸೊಚುರಿ	೫೪೪-೧೩-೦
ಕೋಹಿನೂರು	೪೦೭-೦-೦
ಫಿನಿಕ್ಸ	೪೪೬-೪-೦
ಸ್ವದೇಶಿ	೪೨೯-೮-೦

ಇತರ

ಬೇಲಾಪುರ ಸಕ್ಕರೆ	೨೭೭-೦-೦
ಬಾಂಬೇ ಬರ್ಮಾ	೪೩೨-೮-೦
ಸಿಂಧ್ಯಾ ಸ್ಟೀಮ	೩೬-೮-೦
ಟಾ. ಟಾ ಸ್ಟೀಲ ಡೆಫರ್ಡ	೧೬೧೮-೧೩-೦
ಅಸೊ. ಸಿಮೆಂಟ್ಸ	೧೭೫-೧೩-೦
ಸೆಂಟ್ರಲ ಬ್ಯಾಂಕ	೮೮-೮-೦
ಇಂಪೀರಿಯಲ್ ಬ್ಯಾಂಕ ಪೂರ್ಣ	೩೦೪೮-೧೩-೦
ಇಂಡಿಯನ್ ಬ್ಯಾಂಕ	೩೦೫-೮-೦
ರಿಝರ್ವ ,,	೧೧೪-೦-೦

ಚಿನ್ನ--ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿ ಚಿನ್ನ ಧಾರಾಳವಾಗಿ ಬರುತಿದ್ದರೂ ತೇಜಿ ಕೂಟಗಳು ಬೆಲೆಗಳನ್ನು ಕೆಳಗಿಳಿಯಲು ಬಿಡುವದಿಲ್ಲ. ಮೇಲಾಗಿ ಹೈದ ರಾಬಾದ, ಪಾಕಿಸ್ತಾನಗಳೊಡನೆ ಯುದ್ಧದ ಮಾತುಗಳು ಕೇಳಿ ಬರುತಿರುವದರಿಂದ ಚಿನ್ನಕ್ಕೆ ಪ್ರಾಶಸ್ತ್ಯವಿದೆ. ಇಂದಿನ ಬೆಲೆಗಳು ಹೀಗಿದ್ದವು.

ತಯಾರಿ ಚಿನ್ನ	೧೧೪-೪-೦
ವಾಯದಾ ಚಿನ್ನ (ಹಳೆ)	೧೧೩-೬-೦
ಸಾವರೀನ	೭೫-೦-೦
ತಯಾರಿ ಬೆಳ್ಳಿ	೧೭೬-೪-೦
ವಾಯದಾ	೧೭೫-೧೩-೦
ಜೇಂಬರ	೧೭೬-೪-೦

ಅರಳೆ

ಅರಳೆಯ ಪರಮಾವಧಿ ಮತ್ತು ಕನಿಷ್ಠ ಬೆಲೆಗಳನ್ನು ನಿಯಂತ್ರಣಕ್ಕೊಳಪಡಿಸುವ ದೀಗ ಖಂಡಿತವಾದಂತೆಯೆ ಇರುವದರಿಂದ ಪೇಟೆ ಕುಸಿದಿದೆ. ಇಂದು ಈ ವಾರದಲ್ಲೆಲ್ಲ ಅತಿ ಕೆಳಮಟ್ಟದಲ್ಲಿ ಜ್ಯಂಬರ ವಾಯಿದೆ ೫೬೪-೮-೦ ರಲ್ಲಿಕೊನೆಗೊಂಡಿತು.

ಎಣ್ಣೆ ಕಾಳು

ಶೇಂಗಾ	೧೬೩-೮-೦
ಅಗಸಿ	೩೭-೪-೦
,, (ಹೊಸ)	೩೭-೧೩-೦
,, ಎಣ್ಣೆ	೧೬-೮-೦

ಶಿವಮೊಗ್ಗ ಅಡಿಕೆ

ತಾ. ೧೦

ದೇಶಾವರ ನಂ. ೧ ಮಣ ೧ ಕ್ಕೆ	೪೪-೪೫
,, ,, ೨	೪೦-೪೪
ಕೊರೆಸಾಲು	೩೪-೪೦
ರಾಜಾ ಅಲವು	೩೬-೪೩
ಬೆಟ್ಟೆ ವಂತಿ	೧೯-೨೦
ಬೆಟ್ಟೆ	೧೬॥-೧೯

ಪೇಟೆ ಮಂದಿ ಸ್ಥಿತಿಯಲ್ಲಿದೆ.

ಸಾಂಗಲಿ

ತಾ. ೧೦

ಅರಿಸಿನ (ಹೊಸ) ಹೇರು	ರೂ	೧೪೫
ಶೇಂಗಾ ಖಂಡಿ		೧೪೪
ಮೆಣಸಿನಕಾಯಿ ಹೇರು		೨೦೦
ಬೆಲ್ಲ ಹೇರು		೪೫-೬೫

ಹುಬ್ಬಳ್ಳಿ

ಜಯವಂತ ಹತ್ತಿ	೧	೪೫೦-೪೯೦
ಅಪಲಂಡ ಹತ್ತಿ	೧	೪೬೦-೪೮೧
ಜಿನ		೨೬೫-೨೮೫
ಅ. ಡಬಲರೋಲ		೨೫೫-೨೭೦
ಸಾಜಿನ		೨೫೦
ಜ. ಹತ್ತಿ ಕಾಳು		೮ ಪೌಂ.
ಅ. ಹತ್ತೀಕಾಳು		೮ ,,

ಸರಕಾರದವರು ಅರಳೆಯ ಧಾರಣೆಯ 'ನೆಲ ಮತ್ತು ಮೇಲಿನ' ಧಾರಣೆಯನ್ನು ಗೊತ್ತುಪಡಿಸುವರಿರುವದರಿಂದ ಮುಂಬೈ ಪೇಟೆಯ ಧಾರಣೆಗಳು ಕೆಳಮುಖವಾಗಿರುವ ದರಿಂದ ಇಲ್ಲಿ ಈ ಅವಧಿಯಲ್ಲಿ ಏನೂ ವ್ಯವಹಾರವಾಗಿರುವದಿಲ್ಲ.

ನಾಲ್ಕು ಮಾತು — ರಂಗನಾಥ ದಿವಾಕರ

೧ ವಿಧಾಯಕಕಾರ್ಯ

ಈಗಿನ್ನ ಸ್ವರೂಪದಲ್ಲಿ ವಿಧಾಯಕ ಕಾರ್ಯದ ಪುರಸ್ಕರ್ತರು ಮಹಾತ್ಮಾಗಾಂಧೀಯವರು. ಅವರು ಮಾಡಿದ ಪ್ರಥಮ ಯಾದಿಯಲ್ಲಿ ಹದಿನಾಲ್ಕು ಕಾರ್ಯಗಳು ಮಾತ್ರ ಇದ್ದವು. ಈಗ ಇಪ್ಪತ್ತೆರಡು ಇರುವವು. ನಿಜವಾಗಿ ನೋಡಿದರೆ ವಿಧಾಯಕಕಾರ್ಯಗಳ ಯಾದಿಯು ಬೇಕಾದಷ್ಟು ಬೆಳೆಯುತ್ತ ಹೋಗಬಲ್ಲದು. ಯಾಕಂದರೆ ಜೀವನವನ್ನು ಶಾಂತಿಮಯ, ಸುಖಮಯ, ಸುಂದರ ಮಾಡುವ ಪ್ರತಿಯೊಂದು ಕಾರ್ಯವೂ ವಿಧಾಯಕ ಕಾರ್ಯವೇ.

× × ×

ವಿಧಾಯಕ ಕಾರ್ಯಗಳು ಬೇಕಾದಷ್ಟು ಇದ್ದರೂ ಎಲ್ಲರೂ ಎಲ್ಲವುಗಳನ್ನು ಸದಾ ಕಾಲವೂ ಮಾಡಲಾರರು. ಅದೇರೀತಿ ಹಲವು ಕಾರ್ಯಗಳು ಪ್ರಸಂಗವಶಾತ್ ಹೆಚ್ಚು ಮಹತ್ವವುಳ್ಳವುಗಳು ಅಗಬಲ್ಲವು. ಬರಗಾಲದಲ್ಲಿ ಅನ್ನಾರ್ಥಿಗಳ ಪೋಷಣೆಯೆ ಎಲ್ಲಕ್ಕೂ ಹೆಚ್ಚು ಮಹತ್ವದ ವಿಧಾಯಕ ಕಾರ್ಯವಾಗಬಲ್ಲದು. ಗಾಂಧೀಜಿಯವರು ರಾಟಿಯ ಉದ್ಯೋಗಕ್ಕೆ ಇದೇ ದೃಷ್ಟಿಯಿಂದಲೆ ಎಲ್ಲಕ್ಕೂ ಹೆಚ್ಚು ಮಹತ್ವಕೊಟ್ಟಿದ್ದರು. ಅನುದ್ಯೋಗಿಗಳಿಗೆ ಉದ್ಯೋಗ, ಬಡವರಿಗೆ ಭಾಗ್ಯ, ಬತ್ತಲೆ ಇದ್ದವರಿಗೆ ಬಟ್ಟೆ. ಇತ್ಯಾದಿಗಳನ್ನು ಪೂರೈಸುವ ಸಾಮರ್ಥ್ಯ ರಾಟಿಯಲ್ಲಿದ್ದುದರಿಂದಲೆ ಅವರು ಅದಕ್ಕೆ ಅಷ್ಟೊಂದು ಮಹತ್ವವನ್ನು ಕೊಡುತಿದ್ದರು.

× × ×

ಮೊನ್ನೆ ೩೦-೭-೪೮ ನೇ ದಿನ ಕರ್ನಾಟಕ ವಿಧಾಯಕಕಾರ್ಯಕರ್ತರ ೨ ನೇ ಸಮ್ಮೇಲನದ ಪರಿಣಾಮವಾಗಿ ನೇಮಿಸಲಾದ ಸ್ಥಾಯೀ ಸಮಿಯತಿಸಭೆಗಾಗಿ ಬಂದ ಕಾರವಾರ ಜಿಲ್ಹೆಯ ಶ್ರೀ ಹೊದಕೆಯವರು ಈ ವಿಷಯದಲ್ಲಿ ನನ್ನೊಡನೆ ಒಂದು ಮಹತ್ವದ ಪ್ರಶ್ನೆ ಹಚ್ಚಿದರು, ಅದೇನಂದರೆ ಕಾಲಕಾಲಕ್ಕೆ ಯಾವ ವಿಶಿಷ್ಟ ವಿಧಾಯಕ ಕಾರ್ಯಕ್ಕೆ ನಾವು ಹೆಚ್ಚು ಮಹತ್ವ ಕೊಡತಕ್ಕದ್ದೆಂಬುದು ವಿಚಾರಣೀಯ ಸಂಗತಿಯು. ಕೆಲಸಗಾರರ (ಮಜದೂರ) ಸಮಸ್ಯೆ ಹಾಗೂ ರೈತರ ಸಮಸ್ಯೆ ಹಾಗೂ ಸಂಘಟನೆ ಇವೂ ವಿಧಾಯಕ ಕಾರ್ಯಗಳಿರುವವು. ಅವುಗಳನ್ನು ನಾವು ಕೂಡ ಲೆಕ್ಕಿಕೊಳ್ಳದೆ ಇತರ ವಿಧಾಯಕ ಕಾರ್ಯಗಳಲ್ಲಿಯೆ ತೊಡಗಿ ಇವುಗಳತ್ತ ದುರ್ಲಕ್ಷ ಮಾಡಿದರೆ ನಾವು ತಪ್ಪು ಮಾಡಿದಂತಾಗುವದು, ಎಂಬುದೆ ಅವರ ಅಂಬೋಣವು. ಈ ಮಾತಿನತ್ತ ಎಲ್ಲ ಕಾಂಗ್ರೆಸ್ ಕಾರ್ಯಕರ್ತರೂ ವಿಧಾಯಕ ಕಾರ್ಯಕರ್ತರೂ ಲಕ್ಷಗೊಡುವದು ಅತ್ಯವಶ್ಯಕವಿರುವದು. ಯಾಕಂದರೆ ಈ ಹೊತ್ತು ಈ ಎರಡು ಸಮಸ್ಯೆಗಳು ಅತ್ಯಂತ ಮಹತ್ವದವಿರುವವು. ಕಾರಣಾಂತರಗಳಿಂದ ರೈತರಲ್ಲಿ ಹಾಗೂ ಕೆಲಸಗಾರರಲ್ಲಿ ಈಗ ಎಲ್ಲೆಲ್ಲಿಯೂ ಜಾಗ್ರತಿಯುಂಟಾಗಿದೆ. ಅವರನ್ನು ತಿಳಿದು ತಿಳಿಯದೆ ಹಿಂಸಾಚಾರದತ್ತ ಅಥವಾ ರಕ್ತಮಯ ಕ್ರಾಂತಿಯತ್ತ ಎಳೆದೊಯ್ಯುವವರು ಅನೇಕರಿದ್ದಾರೆ. ಇಂಥ ಪ್ರಸಂಗದಲ್ಲಿ ಒಂದು ಶಾಂತಿಮಯ ಮಾರ್ಗದಿಂದ ಅವರನ್ನು ಒಯ್ದು ಎಲ್ಲರಿಗೂ ಇಷ್ಟವಾದ ಶೋಷಣರಹಿತ ಸಮತಾಯುಕ್ತ ಸಮಾಜ ರಚನೆಯನ್ನು ಮಾಡಲು ಹೆಣಗುವದು ವಿಧಾಯಕ ಕಾರ್ಯಕರ್ತರ ಮುಖ್ಯ ಕರ್ತವ್ಯವಾಗಿದೆ. ಈ ಬಗೆಯ ಸಮಾಜರಚನೆಗೆ ಗಾಂಧೀಜಿಯವರು ರಾಮರಾಜ್ಯ, ಕಿಸಾನ ಮಜದೂರ ರಾಜ್ಯ, ಜಾತಿ-ವರ್ಗ-ವಿಹೀನ ಸಮಾಜ ಎಂದು ಹೇಳುತ್ತಿದ್ದರು.

೨ ಶ್ರಮಜೀವಿ ಯಾರು ?

ಕೂಲಿಕಾರ ಎಂಬ ಶಬ್ದವನ್ನು ಉಪಯೋಗಿಸದೆ ಶ್ರಮಜೀವಿ, ಕಾಮಗಾರ, ಕೆಲಸಗಾರ ಎಂಬ ಮುಂತಾದ ಶಬ್ದಗಳನ್ನು ಉಪಯೋಗಿಸುವದು ಯೋಗ್ಯವಾಗಬಲ್ಲದು ಎಂದು ಹೋದ ಸಾರೆ ಬರೆದೆನು, ಅದು ಯೋಗ್ಯವೇ ಸೈ. ಆದರೆ ಶ್ರಮಜೀವಿ ಯಾರು ಎಂಬುವದು ಬಹಳ ಮಹತ್ವದ ಪ್ರಶ್ನೆ. ಕೈಮೈಯಿಂದ ಕೆಲಸ ಮಾಡುವವರಷ್ಟೇ ಶ್ರಮಜೀವಿಗಳೋ ? ಅದಿನ ಹಾ. ಜೋಶೀಯವರು ತಾವೂ ಶ್ರಮಜೀವಿಗಳು ಎಂದು ಹೇಳಿದರು. ೯-೮-೪೮ ನೆ ದಿನ ಚಕ್ರವರ್ತಿ ರಾಜಗೋಪಾಲಾಚಾರ್ಯರು ತಾವೂ ಶ್ರಮಜೀವಿಗಳು (ಲೇಬರರ) ಎಂದು ಹೇಳಿದರು. ! ಅದ್ಭುತ್ ಬುದ್ಧಿಜೀವಿಗಳು ಕೂಡ ಶ್ರಮಜೀವಿಗಳೆನಿಸುವರು ಎಂಬುದೆ ಅವರು ಮಾತಿನ ಅರ್ಥ. ಶ್ರಮಜೀವಿ ಎಂದರೆ ಶ್ರಮದಿಂದ ಜೀವಿಸುವವ ಆ ಶ್ರಮ ಕೈಯಿಂದ ಇರಲಿ, ಮೈಯಿಂದ ಇರಲಿ, ಬುದ್ಧಿಯಿಂದ ಇರಲಿ.

× × ×

ಇದೇನೋ ಸರಿ. ಆದರೆ ಈ ಶ್ರಮವು ಯಾವ ಬಗೆಯದ್ದಿರಬೇಕು, ಅದರಿಂದ ಯಾವ ಪರಿಣಾಮವಾಗುತಿರಬೇಕು, ಅದರ ಪ್ರತಿಫಲ ಎಷ್ಟು ಇರಬೇಕು ಇವೇ ಎಲ್ಲಕ್ಕೂ ಹೆಚ್ಚು ಮಹತ್ವದ ಪ್ರಶ್ನೆಗಳಿರುವವು. ಮೊದಲನೆಯ ಮಾತೆಂದರೆ ಈ ಶ್ರಮವು ಸಾಕಷ್ಟು ಅಂದರೆ ಸದ್ಯದ ಪರಿಸ್ಥಿತಿಯಲ್ಲಿ ಸಿಕ್ಕವೂ ಸುಮಾರು ಎಂಟು ತಾಸಿನದಿರಬೇಕು. ಅದು ಉತ್ಪಾದಕ (ಪ್ರೊಡಕ್ಟಿವ್ಹ) ಅಂದರೆ ಸಮಾಜದ ರಕ್ಷಣ ಪಾಲನ ಪೋಷಣ ಇವುಗಳಿಗೆ ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಅವಶ್ಯಕವಾದುದು ಇರಬೇಕು. ಅದು ಶೋಷಣರಹಿತವಿರಬೇಕು, ಅಂದರೆ ಅನ್ಯರ ಅಜ್ಞಾನ, ದೌರ್ಬಲ್ಯ ಇವುಗಳ ದುರ್ಲಾಭ ಪಡೆಯದೆ ನಡೆದಿರಬೇಕು. ಇಂಥ ಶ್ರಮ ಮಾಡುತವನೆ—ಕೈ ಮೈ ಬುದ್ಧಿಗಳಲ್ಲಿ ಯಾವದೇ ಒಂದರಿಂದ ಅಥವಾ ಹೆಚ್ಚು ಸಾಧನಗಳಿಂದ—ಶ್ರಮಜೀವಿ ಎನಿಸುವನು.

× × ×

ಇನ್ನು ಪ್ರತಿಫಲದ ಪ್ರಶ್ನೆಯು ಎಲ್ಲಕ್ಕೂ ಮಹತ್ವದ್ದು. ಶ್ರಮ ಮಾಡಿದವನಿಗೆ ಪ್ರತಿಫಲ ದೊರೆಯಲೇ ಬೇಕು. ಇಲ್ಲದೆ ಹೋದರೆ ಅವನು ಜೀವಿಸುವದೆ ಸಾಧ್ಯವಿಲ್ಲ. ಜೀವನಕ್ಕೆ ಸಾಕಷ್ಟಂತೂ ಪ್ರತಿಫಲವು ದೊರೆತೇ ತೀರಬೇಕು. ಇಲ್ಲದಿದ್ದರೆ ಶ್ರಮಜೀವಿ ಜೀವಿಸುವದೆಂತು ? ಅಷ್ಟು ದೊರೆಯದೆ ಹೋದರೆ ಅವನು 'ಶ್ರಮಶಾಲಿ' ಎನಿಸಬಲ್ಲನು, ಶ್ರಮಜೀವಿಯಲ್ಲ ! ಹಾಗೆ ದೊರೆಯದೆ ಹೋದರೆ ಸಮಾಜರಚನೆಯಲ್ಲಿ ಏನಾದರೂ ದೊಡ್ಡ ತಪ್ಪು ಇದೆ ಎಂದು ತಿಳಿಯಲು ಅಡ್ಡಿ ಇಲ್ಲ. ಪ್ರತಿಫಲದಲ್ಲಿಯ ವಿಷಮತೆಯೆ ಹೆಚ್ಚು ಅಸಂತೋಷಕ್ಕೆ ಕೊನೆಗೆ ಕ್ರಾಂತಿಗೆ ಕಾರಣವಾಗುವದು. ಜಾತಿ ಮತ್ತು ವರ್ಗ ಇವುಗಳ ಅಸ್ತಿತ್ವಕ್ಕಿಂತ ಅನುಕ್ರಮವಾಗಿ ಅವುಗಳಲ್ಲಿಯ ಉಚ್ಚ ನೀಚ ಭಾವ ಹಾಗೂ ವಿಷಮತೆ ಇವೇ ಕ್ರಾಂತಿಯ ಬೀಜಗಳು. ಅವುಗಳನ್ನು ಇಲ್ಲದಂತೆ ಮಾಡುವದರಿಂದ ಈ ವಿಷಯವು ಎಷ್ಟೋ ಸುಲಭದಾಗಬಲ್ಲದು. ಈ ವಿಷಮತೆಯನ್ನೂ ಕಡಿಮೆ ಮಾಡುವದು ಸಾಧ್ಯವು. ಭೂಮಿತಿಗೆ ಇಲ್ಲವೆ ಗಣಿತಕ್ಕೆ ಸಲ್ಲಬಹುದಾದ ಸಮಾನತೆಯನ್ನೂ ಸಮಾಜದಲ್ಲಿ ಸ್ಥಾಪಿಸುವದು ಶಕ್ಯವೋ ಇಲ್ಲವೋ ಎಂಬ ಪ್ರಶ್ನೆಯನ್ನು ಇಲ್ಲಿ ನಾನು ಕೈಕೊಳ್ಳುವದಿಲ್ಲ. ಆದರೆ ಸಮತೆ ಸಮಾನತೆಗಳತ್ತ ಸಾಗುವದು ಮಾತ್ರ ನನ್ನ ಕರ್ತವ್ಯವೆಂದು ಹೇಳದಿರಲಾರೆ. ಹಠಾತ್ತಾಗಿ, ಹಿಂಸಾಚಾರದಿಂದ, ರಕ್ತಮಯ ಕ್ರಾಂತಿಯಿಂದ ಪೂರ್ಣ ಸಮಾನತೆಯನ್ನು ಸ್ಥಾಪಿಸುವ ಪ್ರಯತ್ನಗಳು ಫ್ರಾನ್ಸದಲ್ಲಿ ರಶಿಯಾದಲ್ಲಿ ಆಗಿ ಹೋದವು. ಆದರೆ ಅವು ಯಶಸ್ವಿಯಾಗಲಿಲ್ಲ. ಹೀಗಿದ್ದರೂ ಸಮಾನತೆಯತ್ತ ಸಾಗುವದು, ಆ ದೃಷ್ಟಿಯಿಂದ ಪ್ರತಿಫಲದ ಪ್ರಶ್ನೆಯತ್ತ ನೋಡುವದು ಅವಶ್ಯಕ. ಪ್ರಕೃತಿ, ಸಾಮಾಜಿಕ ನಿಲವು, ಆಯಾ ಮನುಷ್ಯನ ಮೇಲಿದ್ದ ಹೊಣೆ, ಅವನದನು ಮಾಡುತಿರುವ ಕೆಲಸ, ಆ ಕೆಲಸಕ್ಕಾಗಿಯೇ ಅವಶ್ಯಕವಿದ್ದ ಅನುಕೂಲತೆಗಳು ಹೀಗೆ ಅನೇಕ ಮಾತುಗಳನ್ನು ವಿಚಾರಿಸಿ ಪ್ರತಿಫಲವನ್ನು ನಿಶ್ಚಯಿಸಬೇಕಾಗುವದು. ಅದನ್ನೆಲ್ಲ ಇಲ್ಲಿ ವಿವರವಾಗಿ ವಿಚಾರಿಸುವದು ಸಾಧ್ಯವಿಲ್ಲ. ಆದರೆ ಸಾಮಾನ್ಯತಃ ಈಗಿನ್ನ ವಿಷಮತೆ ಇಲ್ಲದಂತಾಗಬೇಕೆಂಬಲ್ಲಿ ಯಾವ ಸಂಶಯವೂ ಇಲ್ಲ.

೩ ಕರ್ತವ್ಯ ಕರ್ತವೇ ಸಂಗೀತ

೯—೮—೪೮ ನೆ ದಿನ ದಿಲ್ಲಿಯಲ್ಲಿ ಮ. ಆಯ್. ಸಿ. ಸಿ. ಕಚೇರಿಯಲ್ಲಿ ಬೆಳಗ್ಗೆ ಪ್ರಾರ್ಥನೆ ನಡೆಯಿತು. ನಂತರ [illegible] ಸಂಗೀತವು ಜರುಗಿತು. ಒಂದು ಬಂಗಾಲಿ, ಒಂದು ಹಿಂದೀ (ಕಬೀರನ ಪದ್ಯ), ಒಂದು ಕನ್ನಡ (ಪುರಂದರ ದಾಸರದು) ಹೀಗೆ ಪದ್ಯಗಳನ್ನು ಅತ್ಯಂತ ಮನೋಹರವಾಗಿ ಹೆಣ್ಣುಮಕ್ಕಳು ಹಾಡಿದರು ಹಿಂದೀ ಮತ್ತು ಕನ್ನಡ ಹಾಡಿದವರು ಊರಿನ ಪ್ರಸಿದ್ಧ ಕಾರ್ಯಕರ್ತರಾದ ದಿವಂಗತ ಬಾಳಿಗಾ ವೆಂಕಟರಾಯರ ಮಗಳು. ಆಚಾರ್ಯ ಕೃಪಾಲಾನಿ, ದೇವ ಶಂಕರರಾವ, ಡಾ. ಪಟ್ಟಾಭಿ ಕರ, ಕೃಷ್ಣಮೂರ್ತಿರಾವ ಮೊದಲಾದವರೆಲ್ಲ ಇದ್ದರು.

× × ×

ಸಂಗೀತವೆ ಬಹಳ ಹೊತ್ತು ನಡೆಯಲಾಗಿ ದೇವ ಶಂಕರರಾಯರು ಇನ್ನು ಕೆಲಸಕ್ಕೆ ಪ್ರಾರಂಭ ಮಾಡುವಾ ಎಂದರು. ಅದು ಸ್ವಾಭಾವಿಕ. ಯಾರಾದರೂ ಹಿರಿಯರು ಹಾಗನ್ನಲಿಕ್ಕೆ ಬೇಕು. ಇಲ್ಲದಿದ್ದರೆ ಅತ್ತ ಲಕ್ಷ ಕೊಡುವವರಾರು? ಆ ಮಾತಿಗೆ ನಾನು ಅಂದದ್ದು ಕೆಲಸದ ಕೊನೆಯಾದರೂ (ಧ್ಯೇಯ) ಏನು? ಜೀವನ ಸಂಗೀತವೆ ಅಲ್ಲವೇ ? ಕೂಡಲೆ ಶಂಕರರಾಯರು ಒಂದು ಮಾತನ್ನು ಜೋಡಿಸಿದರು. ಕೆಲಸ ಕಾರ್ಯಗಳೇ ನಮ್ಮ ಸಂಗೀತವಾಗಬೇಕು. ಎರಡೂ ಮಾತುಗಳಲ್ಲಿ ದೊಡ್ಡ ಸತ್ಯವಿದೆ.

× × ×

ಕರ್ಮವು ಹೆಚ್ಚೊ ಜ್ಞಾನವು ಹೆಚ್ಚೊ ಎಂಬ ವಾದವು ಬಹಳ ಹಳೆಯದು. ಕರ್ಮಯೋಗವನ್ನೇ ಮುಖ್ಯವಾಗಿಟ್ಟುಕೊಂಡ ಭಗವದ್ಗೀತೆಯು ಕೂಡ 'ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ' ಎಂದು ಉಸುರಿದೆ. ಅದೇ ರೀತಿ 'ನಹಿ ಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ' ಎಂದು ಹೇಳಿದೆ. ಜೀವನದಲ್ಲಿ ಸಂಗೀತ ಸಮ್ಮೇಳ, ಇವುಗಳಿಗೆ ಬಹಳ ದೊಡ್ಡ ಸ್ಥಾನವಿದೆ. ತನ್ಮಯತೆ, ತಲ್ಲೀನತೆ, ಸ್ವರಸಮಾಧಿ, ಗಾನಮುಗ್ಧತೆ ಇವುಗಳ ಅನುಭವವು ಸಂಗೀತದಲ್ಲಿಯೆ ದೊರೆಯಬಲ್ಲದು. ಅದರಿಂದ ದೊರೆಯಬಲ್ಲ, ಸ್ಫುರಣ, ಸಮಶಕ್ತಿ, ಸಮಾಧಾನ ಇವು ಅನಿರ್ವಚನೀಯವಾದವುಗಳು. ಮೇಲಾಗಿ ಭಾವನಾಶಕ್ತಿಯ (ಇಮೋಶನ್ಸ) ಕೃಷಿಗೆ ಸಂಗೀತವು ಅತ್ಯಂತ ಶ್ರೇಷ್ಠ ಸಾಧನವು. ಅದೇ ಕಾಲಕ್ಕೆ ಕೆಲಸವೇ ಸಂಗೀತವಾಗಬೇಕು, ಎಂಬ ಮಾತಿನಲ್ಲಿಯೂ ಅತ್ಯಂತ ಮಹತ್ವವಿದೆ.

× × ×

ಜೀವನವು ಕರ್ತವ್ಯದಲ್ಲಿ (ಡ್ಯೂಟಿ) ಅಡಗಿದೆ, ಸೌಂದರ್ಯದಲ್ಲಿ (ಬ್ಯೂಟಿ) ಅಲ್ಲ, ಎಂದು ವ್ಯಾಖ್ಯಾನ ಮಾಡುವುದು ಸಾರ್ಥವೆನಿಸುವದು ಆದರೆ ಇವೆರಡರ ಸಮನ್ವಯದಿ ಜೀವನದ ಸಮಸ್ಯೆಯನ್ನು ನಿಜವಾಗಿ ಬಿಡಿಸಬಲ್ಲದು. ಕೇವಲ ಕರ್ತವ್ಯ ಕರ್ತವ್ಯ, ಎಂದು ಕಾಲಿಯಾ ತಿಕ್ಕಕರ್ತೃ ಕೈಯಲ್ಲಿ ಚಿಕ್ಕದನ್ನು ಹಿಡಿದುಕೊಂಡು ಮುಕ್ಕಳವನ್ನು ಹತ್ತಿದರೂ ಜೀವನವು ಸಾರ್ಥಕವಾಗದು. ಅದೊಂದು ಕೇವಲ ಯಾಂತ್ರಿಕ ಮಿಶ್ರ ಜೀವನವಾಗಬಲ್ಲದು. ಅದೇ ರೀತಿ ಸಂಗೀತವೊಂದು ಕರ್ತವ್ಯ ಬಿಟ್ಟು ಮಾಡಿದರೆ ಅದರ ಬೆನ್ನು ಹತ್ತಿದರೆ ಅದರಿಂದ [illegible] ಜೀವನಸಾರ್ಥಕ್ಯವು [illegible]. [illegible] ಸಂಗೀತವೆನಿಸಬೇಕಾದರೆ [illegible] 'ಬ್ರಹ್ಮ ಕರ್ಮ ಸಮಾಧಿ'ಯ [illegible] [illegible] ಗುವದು. [illegible] 'ಬ್ರಹ್ಮ ಕರ್ಮ [illegible]' [illegible] ಬ್ರಹ್ಮ ಕರ್ಮ [illegible] [illegible] [illegible] ಅಡಗಿರಬಲ್ಲದು.

ರಾಷ್ಟ್ರಗೀತ

[illegible] "ವಂದೇಮಾತರಂ" ಮತ್ತು "ಜನಗಣಮನ" [illegible] ಪ್ರತಿಕ್ರಿಯೆಗಳು [illegible]. [illegible] ಮಾಡಿದ್ದಾರೆ.

ನನ್ನ ಹೇಳಬೇಕಾದದ್ದು ಇಂಥ ವಿಷಯಗಳಲ್ಲಿ ಮೊದಲು ಅಭಿಪ್ರಾಯಗಳನ್ನು ಮಾಡಿಕೊಂಡೇ ಮುಕ್ತ ಕಾರಣಗಳನ್ನು ಹುಡುಕಲಾಗುವದು. ಅಭಿಪ್ರಾಯಗಳನ್ನು ಕಾರಣಗಳ ಆಧಾರದಿಂದ ಮಾಡಿಕೊಳ್ಳದ ನಮ್ಮ ಶಿಬಿಗಳ ಅಂತರಂಗಕ್ಕೂ ಅದೆಷ್ಟು ಮೆಚ್ಚುವದೋ ಅದನ್ನನುಸರಿಸಿ ಮಾಡಿಕೊಳ್ಳುತ್ತೇವೆ. ಅದರಿಂದ ನಾನು ಕಾರಣಗಳನ್ನು ಕೆದಕುವ ಗೋಜಿಗೆ ಹೋಗುವದಿಲ್ಲ.

"ವಂದೇಮಾತರಂ" ನನಗೆ ಪ್ರಿಯವಾಗಿದ್ದರೂ "ಜನಗಣ-ಮನ"ವು ಪ್ರಿಯಕರವಾಗಿದೆ. ಆದರೂ ನಾನು ಈ ವಿಷಯದಲ್ಲಿ ಕೇಂದ್ರ ಸರಕಾರ ಮಾಡಬಹುದಾದ ನಿರ್ಣಯಕ್ಕೆ-ಅದು ಏನೇ ಇರಲಿ. ತಲೆವಾಗಲು ಸಿದ್ಧನಿದ್ದೇನೆ.

ಹೊಸದಿಲ್ಲಿ ೪-೮-೪೮ ರಂ. ದಿ. ಮ.

ಕರ್ಮವೀರ

ಶ್ರೀಮದ್ಬ್ಯಾಲಕ್ಯ ವಿಕ್ರಮ ವರ್ಷ ೨೦೦೫
ಶ್ರಾವಣ ಶು|| ೨ ಸೋಮವಾರ

ಪ್ರಥಮ ವರ್ಧಂತಿ

ಇನ್ನೂರು ವರುಷಗಳಷ್ಟು ದೀರ್ಘಾವಧಿಯ ಪರದಾಸ್ಯವನ್ನು ಹರಿದೊಗೆದು ಭಾರತವು ಸ್ವತಂತ್ರವಾಗಿ ತನ್ನ ಸ್ವಾತಂತ್ರ್ಯದ ಪ್ರಥಮ ವರ್ಧಂತಿಯನ್ನು ನಿನ್ನೆ ಅಗಷ್ಟ ೧೫ ಕ್ಕೆ ಅತ್ಯಂತ ವಿಜೃಂಭಣೆಯಿಂದ ಆಚರಿಸಿತು. ಈ ಮೊದಲ ವರುಷದಲ್ಲಿ ಭಾರತವು ಸಾಧಿಸಿದ್ದೇನು, ಸಾಧಿಸತಕ್ಕದ್ದು ಎಷ್ಟು ಉಳಿದಿದೆ ಮುಂತಾದ್ದರ ಸಿಂಹಾವಲೋಕನವನ್ನು ಬೇರೆಡೆ ಮಾಡಿದೆ. ಸ್ವಾತಂತ್ರ್ಯ ವರ್ಧಂತಿಯ ಈ ಶುಭ ಪ್ರಸಂಗದಲ್ಲಿ ಭಾರತೀಯರೆಲ್ಲ ಆತ್ಮನಿರೀಕ್ಷಣೆ ಮಾಡಿಕೊಂಡು ಹಿಂದೆ ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ಧ್ಯೇಯಸಾಧನೆಗಾಗಿ ಮುಂದಡಿಯಿಡುವದು ಕರ್ತವ್ಯವಾಗಿದೆ.

ಭಾರತದಲ್ಲಿ ಸ್ವಾತಂತ್ರ್ಯದ ಜೊತೆಗೇ ಅನೇಕ ಸಮಸ್ಯೆಗಳು ಉಂಟಾದವು. ದೇಶವು ಇಬ್ಭಾಗವಾಯಿತು, ಸಂಸ್ಥಾನಗಳಿಗೆಲ್ಲ ಬ್ರಿಟಿಶರು ಸಾರ್ವಭೌಮಾಧಿಕಾರವನ್ನು ಕೊಟ್ಟರು. ಸ್ವಾತಂತ್ರ್ಯದ ಸವಿ ಪಾಠಗಳನ್ನೆಲ್ಲ ಮರೆತುಬಿಟ್ಟ ಭಾರತೀಯರೂ ಅನೇಕ ತಪ್ಪು ತಡೆಗಳನ್ನು ಮಾಡಿದರು. ಜಾತೀಯ ದ್ವೇಷ, ಸ್ವಾರ್ಥ, ಅಧಿಕಾರಲಾಲಸೆ ಮೊದಲಾದವುಗಳು ಹೆಚ್ಚಿದವು. ಅಧಿಕಾರಿಗಳಲ್ಲಿಯೂ ಲಂಚಗುಳಿತನ ಹೆಚ್ಚಾಯಿತು. ಕಾರ್ಯಕ್ಷಮ ಆಡಳಿತಕ್ಕೂ ಕೆಲಮಟ್ಟಿಗೆ ಬಾಧೆ ತಟ್ಟಿತು. ಕೊಲೆ, ಕೊಳ್ಳಿ ಮೊದಲಾದವುಗಳೂ ಹಲವೆಡೆ ನಡೆದವು. ಇವೆಲ್ಲವುಗಳಿಗೂ ಕಳಸವಿಟ್ಟಂತೆ ಮಹಾತ್ಮಾ ಗಾಂಧಿಯವರ ಕೊಲೆಯೂ ಆಯಿತು. ಈ ರೀತಿ ಭಾರತದ ಸ್ವಾತಂತ್ರ್ಯ ಸೂರ್ಯನಿಗೆ ಕಾರ್ಮೋಡಗಳು ಕವಿದವು. ಇಷ್ಟೊಂದು ಸ್ವಾರ್ಥತ್ಯಾಗ ಕಷ್ಟನಷ್ಟಗಳಿಂದ ಸಂಪಾದಿಸಿದ ಸ್ವಾತಂತ್ರ್ಯ ಮತ್ತೆಲ್ಲಿ ಮಾಯವಾಗುವದೋ ಎಂಬ ಅಂಜಿಕೆಯೂ ಉಂಟಾಯಿತು. ಆದರೆ ಭಾರತದ ನಾಯಕರು ಇವೆಲ್ಲ ಸಮಸ್ಯೆಗಳನ್ನು ದೃಢ ನಿರ್ಧಾರದಿಂದ ಎದುರಿಸಿ ಭಾರತದ ಧವಲ ಕೀರ್ತಿಯನ್ನು ಮೊಳಗಿಸುವಲ್ಲಿ ನಿರತರಾಗಿದ್ದಾರೆ.

ಭಾರತವು ಸಾಧಿಸತಕ್ಕ ಧ್ಯೇಯದಲ್ಲಿ ಪ್ರತಿಯೊಬ್ಬ ನಾಗರಿಕನು ನೆರವನ್ನು ನೀಡುವದು ಕರ್ತವ್ಯವಾಗಿದೆ. ಈ ಶುಭ ಪ್ರಸಂಗದಲ್ಲಿ ನಮ್ಮ ನಾಯಕರು ಮನನೀಯ ಸಂದೇಶ ಕೊಟ್ಟು ಕರ್ತವ್ಯವನ್ನು ತಿಳಿಸಿ ಕೊಟ್ಟಿದ್ದಾರೆ. 'ದ್ವೇಷದ ಅಹಂಕಾರವನ್ನು ಬಿಟ್ಟುಗೊಟ್ಟು ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ, ವಿಧಾಯಕ ಕಾರ್ಯದಲ್ಲಿ ಉದ್ಯೋಗಶೀಲತೆ, ಪರಮಾವಧಿ ನಾಗರಿಕ ಭಾವನೆ ಮತ್ತು ಸಹಕಾರದಿಂದ ಮುನ್ನಡೆಯುವಾ' ಎಂದು ನಮ್ಮ ಪ್ರಥಮ ಗವರ್ನರ ಜನರಲ್‌ರಾದ ಮಾನ್ಯ ರಾಜಾಜಿಯವರು ಆದೇಶಿಸಿದ್ದಾರೆ. 'ಮನಸ್ಸು ಸಂಕುಚಿತವಾಗಿ ದ್ವೇಷಾಸೂಯೆಗಳಿಂದ ತುಂಬಿದ್ದರೆ ನಮ್ಮ ಸ್ವಾತಂತ್ರ್ಯವು ಮಾಯವಾಗುವುದು. ಆದುದರಿಂದ ಆತ್ಮನಿರೀಕ್ಷಣೆ ಮಾಡಿಕೊಂಡು ಸಾಮಾನ್ಯ ಜನತೆಯ ಹಿತಕ್ಕಾಗಿ ಅದ್ಭುತವಾದ ಹಿಂದುಸ್ಥಾನದ ಗುಪ್ತ ಸುಪ್ತ ಸಂಪತ್ಸಾಧನಗಳನ್ನು ಬಳಸಿ, ಅದರ ಸ್ವರೂಪವನ್ನೇ ಪಲ್ಲಟಿಸಿ, ಅದನ್ನು ದೊಡ್ಡ ಹಾಗು ಅಭಿವೃದ್ಧ ರಾಷ್ಟ್ರವನ್ನಾಗಿ ಮಾಡುವದಕ್ಕಾಗಿ ದೀಕ್ಷಾಬದ್ಧರಾಗೋಣ' ಎಂದು ನಮ್ಮ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಉಪದೇಶಿಸಿದ್ದಾರೆ. ಸರದಾರ ವಲ್ಲಭಭಾಯಿಯವರು ಆದೇಶಿಸಿದಂತೆ ನಾವೆಲ್ಲ ಸೈನಿಕ ಶಿಸ್ತು ಮತ್ತು ಹೊಣೆಯ ಅರಿವಿನಿಂದ ವರ್ತಿಸಿ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸಮರ್ಥರಾಗುವಾ.

ಮಹಾತ್ಮಾ ಗಾಂಧಿಯವರು ನಶ್ವರದೇಹವನ್ನು ಬಿಟ್ಟುಗೊಟ್ಟಿದ್ದರೂ ಅವರ ಆತ್ಮವು ಸದಾ ತಮ್ಮಲ್ಲಿ ನಿಂತುಕೊಂಡು ತಮ್ಮ ಕಾರ್ಯಕಲಾಪಗಳನ್ನು ನಿರೀಕ್ಷಿಸುತಿದೆ ಎಂಬದನ್ನು ನೆನೆದುಕೊಂಡು ಅವರು ಹೇಳಿಕೊಟ್ಟ ರೀತಿಯಲ್ಲಿಯೇ ನಡೆಯುವದು ಭಾರತೀಯರ ಕರ್ತವ್ಯವಾಗಿದೆ. ಮಾನವನ ಸರ್ವೋದಯಕ್ಕೆ ಅವರ ಮಾರ್ಗವೇ ಸಾಧುವೆಂಬುದನ್ನು ಜಗತ್ತಿನ ಮುತ್ಸದ್ದಿಗಳು ಒಪ್ಪಹತ್ತಿರುವರು. ಮಾನ್ಯ ರಾಜಾಜಿಯವರು ಹೇಳಿದಂತೆ ನಮ್ಮ ಪ್ರತಿಯೊಂದು ವ್ಯವಹಾರದಲ್ಲಿ, ಕಷ್ಟದ ಪ್ರಸಂಗದಲ್ಲಿ ಗಾಂಧೀಜಿ ಹೇಗೆ ಆಲೋಚಿಸುತ್ತಿದ್ದರು, ವರ್ತಿಸುತಿದ್ದರು ಎಂಬುದನ್ನು ನೆನೆದು ಅದರಂತೆಯೆ ನಡೆಯುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಅಂದರೇನೇ ಭಾರತವು ಇಡೀ ಜಗತ್ತಿನಲ್ಲಿ ಆದರ್ಶ ರಾಷ್ಟ್ರವಾಗಿ ಪರಿಣಮಿಸುವದು; ಕಾಂಗ್ರೆಸ್ಸು ಹಾಗು ಮಹಾತ್ಮಾ ಗಾಂಧಿಯವರು ಇಟ್ಟುಕೊಂಡ ಧ್ಯೇಯ ಸಾಧ್ಯವಾಗುವದು. ಆ ಬಗೆಯ ಸದ್ಬುದ್ಧಿಯನ್ನು ಮತ್ತು ಶಕ್ತಿ ಸಾಮರ್ಥ್ಯಗಳನ್ನು ಪರಮಾತ್ಮನು ದಯಪಾಲಿಸಿ ಭಾರತವು ತನ್ನ ಹಿಂದಿನ ಹಿರಿಮೆಯನ್ನು ಪ್ರಸ್ಥಾಪಿಸಿಕೊಳ್ಳುವಂತೆ ಅನುಗ್ರಹಿಸಲೆಂದು ಈ ಶುಭ ಪ್ರಸಂಗದಲ್ಲಿ ನಾವವನನ್ನು ಅನನ್ಯ ಭಾವದಿಂದ ಪ್ರಾರ್ಥಿಸುತ್ತೇವೆ.

ಹೈದರಾಬಾದ ಗಡಿಯಲ್ಲಿ ಮುಖ್ಯಮಂತ್ರಿ ಶ್ರೀ ಖೇರರು



ಮುಂಬಯಿ ಮುಖ್ಯಮಂತ್ರಿಗಳು ಕಳೆದವಾರ ಕರ್ನಾಟಕ ಹೈದ್ರಾಬಾದ ಗಡಿಭಾಗಗಳಲ್ಲಿ ಸಂಚರಿಸಿ ಸಂರಕ್ಷಣ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಗೋಲಗೇರಿಯಲ್ಲಿ ಗೃಹರಕ್ಷಕರ ಚಟುವಟಿಕೆಯನ್ನು ಪರಿಶೀಲಿಸುತಿರುವಾಗಿನ ಚಿತ್ರ..

ಚಿತ್ರ: ಶ್ರೀ. ನಾರಾಯಣರಾವ ಕುಲಕರ್ಣಿ, ವಿಜಾಪುರ

ವಾರದ ಸಿಂಹಾವಲೋಕನ

ಹೈದರಾಬಾದ ಶ್ವೇತಪತ್ರ

'ಹೈದರಾಬಾದದ ಸಂಬಂಧದಲ್ಲಿ ಉಗ್ರಕ್ರಮವನ್ನು ಕೈಕೊಳ್ಳುವದು ನಿಶ್ಚಿತವಾಗಿದೆ. ಆದರೆ ಅದರ ವಿವರಣೆಗಳನ್ನು ಬಹಿರಂಗಪಡಿಸುವದು ಸಾರ್ವಜನಿಕ ಹಿತದ ದೃಷ್ಟಿಯಿಂದ ಸರಿಯಲ್ಲ. ಮಾನ್ಯ ಸದಸ್ಯರು ನಮ್ಮಲ್ಲಿ ಪೂರ್ಣ ನಂಬಿಗೆ ಇಡಬೇಕು; ಅದಕ್ಕೆ ತಕ್ಕಂತೆ ನಡೆದುಕೊಳ್ಳುವೆವೆಂದು ಆಶ್ವಾಸಿಸುವೆವು' ಎಂಬುದಾಗಿ ಹಿಂದುಸ್ಥಾನ ಸರಕಾರದ ಸಂಸ್ಥಾನ ಖಾತೆಯ ಮಂತ್ರಿಗಳಾದ ವಲ್ಲಭಭಾಯಿಯವರು ಹಿರಿಯೋಲಗದಲ್ಲಿ ಹೈದರಾಬಾದ ಸಂಬಂಧದಲ್ಲಿ ಭಾಷಣ ಮಾಡುವಾಗ ಹೇಳಿದರು. ಹೈದರಾಬಾದ ಸಮಸ್ಯೆ ಇತ್ತೀಚಿಗೆ ಬಹಳ ಗಂಭೀರವಾಗಿದ್ದುದರಿಂದ ಹಿಂದುಸ್ಥಾನದ ಲಕ್ಷ್ಯವಿಷ್ಟೇ ಅಲ್ಲ; ಇಡೀ ಜಗತ್ತಿನ ಲಕ್ಷ್ಯವೇ ಅತ್ತ ಸೆಳೆಯಲ್ಪಟ್ಟಿದೆಂಬಲ್ಲಿ ಸಂದೇಹವಿಲ್ಲ. ಹಿಂದುಸ್ಥಾನ ಸರಕಾರದವರು ಹೈದರಾಬಾದ ಶ್ವೇತಪತ್ರವೊಂದನ್ನು ಹೊರಡಿಸಿ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತಿಳಿಸಿರುವರಲ್ಲದೆ ಮುಂದೆ ಕೈಕೊಳ್ಳಬಹುದಾದ ಮಾರ್ಗದ ರೂಪರೇಷೆಯನ್ನೂ ಬಹಿರಂಗಪಡಿಸಿದ್ದಾರೆ. ಹೈದರಾಬಾದ ನಿಜಾಮರು ಯಥಾಸ್ಥಿತಿ ಒಪ್ಪಂದ ಮಾಡಿಕೊಂಡುದು ಕೇವಲ ಸಮರಸಿದ್ಧತೆಗಾಗಿ ಎಂಬುದು ಶ್ವೇತಪತ್ರದಲ್ಲಿಯ ವಿವರಣೆಗಳನ್ನು ನೋಡಿದರೆ ಗೊತ್ತಾಗದಿರದು. ಸಿಕಂದರಾಬಾದದಲ್ಲಿಯ ಭಾರತೀಯ ಸೈನ್ಯ ಕಾಲ್ತೆಗೆಯುವಂತೆ ಮಾಡಿದ್ದು, ಶಸ್ತ್ರಾಸ್ತ್ರಗಳನ್ನು ಹೆಚ್ಚಾಗಿ ಪೂರೈಸಲು ಮತ್ತು ಪರಿಸಿಕೊಳ್ಳಲು ಅಪ್ಪಣೆ ಕೊಡಬೇಕೆಂದು ಭಾರತ ಸರಕಾರಕ್ಕೆ ಕೇಳಿಕೊಂಡದ್ದು, ಸಂಧಾನಪ್ರಯತ್ನಗಳೆಲ್ಲ ಅಯಶಸ್ವಿಯಾಗುವಂತೆ ಯೋಜಿಸಿದ್ದು ಮೊದಲಾದವುಗಳೆಲ್ಲ ಮೇಲಿನ ಅಭಿಪ್ರಾಯಕ್ಕೆ ಪುಷ್ಟಿ ಕೊಡುತ್ತವೆ. ಆದರೆ ಈ ಬಗೆಯ ಮೋಸ ಬಹಳ ದಿನಗಳವರೆಗೆ ನಡೆಯಲಾರದು. ಈಗಾಗಲೆ ಅದೆಲ್ಲ ಬಹಿರಂಗವಾಗಿದ್ದು ಆದರ ದುಷ್ಪರಿಣಾಮಗಳನ್ನು ಅನುಭವಿಸದೆ ಗತ್ಯಂತರವಿಲ್ಲದ ಪರಿಸ್ಥಿತಿಯುಂಟಾಗಿದೆ. ನಿಜವಾಗಿಯೂ ಪ್ರಜೆಗಳ ಹಿತವನ್ನು ನಿಜಾಮರು ಬಯಸುತಿದ್ದರೆ ಹಿಂದುಸ್ಥಾನ ಸರಕಾರ ಸೂಚಿಸಿದ ಒಡಂಬಡಿಕೆಗೆ ಸೈಯೆಂದು ತಮ್ಮ ಹಾಗು ತಮ್ಮ ಪ್ರಜೆಗಳ ಶಾಂತಿ ಸುಖಸಮೃದ್ಧಿಗಳನ್ನು ಕಾಯ್ದುಕೊಳ್ಳಬೇಕಾದುದು ಕರ್ತವ್ಯವಾಗಿದೆ.

ಗಡಿಗಳ ರಕ್ಷಣೆ

ಹೈದ್ರಾಬಾದ ಸಮಸ್ಯೆಯಿಂತು ಗಂಭೀರ ಪರಿಸ್ಥಿತಿಗಿಳಿದಿದ್ದರಿಂದ ಹಿಂದೆ ಹೈದ್ರಾಬಾದ ಗಡಿಗಳ ರಕ್ಷಣೆಯವಶ್ಯವಾಗಿದೆ. ಹೈದ್ರಾಬಾದ ಗಡಿ ಮುಂಬಯಿ ಮದ್ರಾಸ ಮತ್ತು ಮಧ್ಯಪ್ರಾಂತಗಳ ಗಡಿಗೆ ಹೊಂದಿದ್ದು ಆ ಭಾಗದಲ್ಲಿ ರಜಾಕಾರರ ಮತ್ತು ಪಠಾಣ ಸೈನಿಕರ ಹಾವಳಿ ವಿಂತಿಮೀರಿದೆ. ಯಾವ ಸ್ವಾಭಿಮಾನಿ ನಾಗರಿಕನಿಗೂ ಸಹಿಸಲಾರದಷ್ಟು ಅದು ಉಗ್ರ ಸ್ವರೂಪವನ್ನು ತಾಳಿದೆ. ಹಿಂದುಸ್ಥಾನ ಸರಕಾರವು ಸ್ವಯಂ ಮತ್ತು ಪ್ರಾಂತೀಯ ಸರಕಾರಗಳ ಮುಖಾಂತರ ಈ ಗಡಿ ಭಾಗದಲ್ಲಿ ಯೋಗ್ಯ ಸಂರಕ್ಷಣ ವ್ಯವಸ್ಥೆಯನ್ನಿಟ್ಟಿದೆ ಕಳೆದವಾರ ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಮಾನ್ಯ ಬಾಳಾಸಾಹೇಬ ಖೇರರು ವಿಜಾಪೂರ, ಧಾರವಾಡ ಗಡಿಭಾಗಗಳನ್ನು ಸಂದರ್ಶಿಸಿ ಜನತೆಯಲ್ಲಿ ನವ ಚೈತನ್ಯವನ್ನುಂಟು ಮಾಡಿ ಬಂದಿದ್ದಾರೆ. ಆಚೆಯ ವಾರ ಗೃಹಮಂತ್ರಿ ಶ್ರೀ ಮುರಾರಜಿಯವರು ಮತ್ತು ಘಟನಾಸಮಿತಿಯ ಸದಸ್ಯರಾದ ಶ್ರೀ ರಂಗನಾಥ ದಿವಾಕರರು ಗಡಿಭಾಗಗಳಲ್ಲಿ ಸಂಚರಿಸಿದರು. ಗಡಿಗಳಲ್ಲಿಯ ಜನರು ಆತ್ಮರಕ್ಷಣೆಗೆ ಎಲ್ಲಬಗೆಯಿಂದ ಸಿದ್ಧರಾದುದನ್ನು ನೋಡಿ ಹರ್ಷೋದ್ಗಾರಗಳನ್ನು ಸುರಿಸಿದರು. ಆದರೆ ನಿಃಶಸ್ತ್ರ ಜನರು ಸಶಸ್ತ್ರ ಪುಂಡರನ್ನೆದುರಿಸುವದು ಬಹಳ ಕಠಿಣವಾದುದರಿಂದ ಈ ಜನರಿಗೂ ಸರಕಾರೀ ಅಧಿಕಾರಿಗಳ ನೇತೃತ್ವದಲ್ಲಿ ಶಸ್ತ್ರಾಸ್ತ್ರಗಳನ್ನು ಪೂರೈಸುವದು ಅವಶ್ಯವಾಗಿದೆ. ಆ ಬಗೆಯ ಆಶ್ವಾಸನವೂ ಜನತೆಗೆ ಸಿಕ್ಕಿದ್ದು ಅಭಿನಂದನೀಯವಾಗಿದೆ. 'ಕೆಚ್ಚೆದೆಯವರಾಗಿರಿ ಭೀತಿ ಹಾಗು ಪೀಡನೆಗಳಿಂದ ಮುಕ್ತರಾಗುವ ಸಮಯವೀಗ ಬಂದಿದೆ. ಆತ್ಮರಕ್ಷಣೆ ಹಾಗೂ ಆತ್ಮವಿಶ್ವಾಸದ ತರಬೇತಿಯಿದಾಗಿದೆ. ನಿಮ್ಮ ಅಮೌಲ್ಯವಾದ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳಲು ಅಣಿಯಾಗಿರಿ' ಎಂದು ಮುಖ್ಯಮಂತ್ರಿಗಳು ಕೊಟ್ಟ ಸಂದೇಶದ ರಹಸ್ಯವನ್ನು ತಿಳಿದುಕೊಂಡು ಗಡಿಭಾಗದಲ್ಲಿಯ ಜನರು ಧೈರ್ಯ ಸ್ಥೈರ್ಯಗಳಿಂದ ಆತ್ಮರಕ್ಷಣೆ ಮಾಡಿಕೊಂಡು ಸ್ವ ಮತ್ತು ದೇಶ ಹಿತವನ್ನು ಸಾಧಿಸಬೇಕು.

ಪಾಕಿಸ್ತಾನವನ್ನು ಹೊರದೂಡಬೇಕು

ಹಿಂದುಸ್ಥಾನವು ಒಡೆದು ಇಬ್ಭಾಗವಾದ ನಂತರ ಹಿಂದುಸ್ಥಾನ ಪಾಕಿಸ್ತಾನಗಳೆರಡೂ ಬಂಧು ಭಾವದಿಂದ ವರ್ತಿಸಿ ಎರಡೂ ಭಾಗಗಳ ಸರ್ವೋದಯವಾಗಬಹುದೆಂದು ಎಣಿಸಲಾಗಿತ್ತು. ಆದರೆ ಪಾಕಿಸ್ತಾನ ಸರಕಾರವು ಬ್ರಿಟಿಶ ಪ್ರತಿಗಾಮಿಗಳ ಬೆಂಬಲದಿಂದಲೋ ಇಲ್ಲವೆ ಸ್ವಯಂ ಶಾಂತಿ ಸ್ಥಾಪನೆಗೆ ಅಡ್ಡಗಾಲು ಹೊಡೆಯುತಿರುವದು ದೇಶವಿಘಾತಕವು. ಸ್ವಯಂ ಹಿಂದುಸ್ಥಾನವನ್ನು ಸೇರಿದ ಕಾಶ್ಮೀರದಲ್ಲಿ ದಂಗು ಪ್ರವೇಶ ಮಾಡಬೇಕೆಂದು ಪಾಕಿಸ್ತಾನ ಕಾಶ್ಮೀರನ್ನು ಮುತ್ತಲು ದಾಳಿಗಾರರನ್ನು ಪ್ರೇರೇಪಿಸಿದ್ದಲ್ಲದೆ ತನ್ನ ಸೈನ್ಯವನ್ನೂ ಅವರ ಸಹಾಯಕ್ಕೆ ಕಳಿಸಿತು. ಮೊದಮೊದಲು ಪಾಕಿಸ್ತಾನವು ಇದನ್ನೊಪ್ಪಿಕ್ಕೊಂಡಿರಲಿಲ್ಲವಾದರೂ ಈಗ ಗುಟ್ಟೆಲ್ಲ ರಟ್ಟಾಗಿ ಹೋಗಿದೆ. ಪಾಕಿಸ್ತಾನವು ಹೀಗೆ ಕಾಶ್ಮೀರಯುದ್ಧದಲ್ಲಿ ಸೇರಿದ್ದು ಮಹಾಪರಾಧವೆಂದೂ ಹೀಗೆ ತಪ್ಪಿತಸ್ಥ ರಾಷ್ಟ್ರವನ್ನು ಕಾಮನ್‌ವೆಲ್ಥದಿಂದ ಹೊರಗೆ ಹಾಕುವದು ಬ್ರಿಟಿಶ ಸರಕಾರದ ಕರ್ತವ್ಯವೆಂದು ಬ್ರಿಟಿಶ ಸಮತಾವಾದಿ ಪತ್ರಿಕೆಯಾದ ನ್ಯೂಸ್ಟೇಟ್ಸಮನ್ ಆ್ಯಂಡ ನೇಶನ ಎಂಬ ಪತ್ರಿಕೆ ಅಭಿಪ್ರಾಯಪಟ್ಟಿದೆ. ಎರಡು ವಸಾಹತು ಭಾಗಗಳಲ್ಲಿ ಯುದ್ಧ ಸುರುವಾದರೆ ಇಂಗ್ಲಂಡವು ಸುಮ್ಮನೆ ಕೂಡ್ರಲಾರದೆಂದೂ ಎರಡೂ ಭಾಗಗಳಲ್ಲಿದ್ದ ತನ್ನ ಸೈನ್ಯಾಧಿಕಾರಿಗಳನ್ನು ಹಿಂದಕ್ಕೆ ಕರಿಸಿಕೊಳ್ಳಬೇಕೆಂದೂ ಅದು ಸೂಚಿಸಿದೆ. ಬ್ರಿಟಿಶ ಟೋರಿ ಪಕ್ಷದ ಬೆಂಬಲವನ್ನು ಪಡೆದು ತನ್ನ ಪ್ರಸ್ಥವನ್ನು ಜಗತ್ತಿನಲ್ಲೆಲ್ಲ ಬೆಳೆಸಬೇಕೆಂದು ಪಾಕಿಸ್ತಾನ ಎಷ್ಟೊಂದು ಹಂಬಲಿಸಿದರೂ ಅದು ಮಾಡುತಿರುವ ಅನ್ಯಾಯದ ಕೃತ್ಯಗಳು ಒಂದೊಂದಾಗಿ ಬಯಲಿಗೆ ಬಂದು ಅದರ ಸ್ಥಾನಮಾನಗಳು ಮತ್ತಷ್ಟು ಅಭದ್ರವಾಗುತಿವೆಂಬುದು ಇದರಿಂದಗೊತ್ತಾಗುವದು.

ಸ್ವರಾಜ್ಯದ ಅಡಿಗಲ್ಲು

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಸ್ವರಾಜ್ಯದ ಅಡಿಗಲ್ಲು ಎಂಬುದು ನಿರ್ವಿವಾದವಾಗಿದೆ. ಈ ಸಂಸ್ಥೆಗಳು ಕಾರ್ಯಕ್ಷಮತೆಯಿಂದ ನಾಗಿದರೆ ಹಳ್ಳಿ ಪಟ್ಟಣಗಳು ಸುಧಾರಣೆ ಹೊಂದಿ ಜನತೆ ಸುಖಸಮೃದ್ಧಿಯಲ್ಲಿರಬಲ್ಲದು. ಆದರೆ ಇಂದು ನಮ್ಮ ಈ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಎಷ್ಟು ಕನಿಕರಸ್ಥಿತಿಗಿಳಿದಿವೆ ಅವುಗಳ ಭವಿತವ್ಯವೇನು ಮುಂತಾದ್ದರ ಬಗ್ಗೆ ಹಿಂದುಸ್ಥಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಮನನೀಯ ವಿಚಾರಗಳನ್ನು ಸ್ಥಾನಿಕ ಸ್ವರಾಜ್ಯ ಮಂತ್ರಿಗಳ ಪರಿಷತ್ತಿನ ಕಾಲಕ್ಕೆ ವ್ಯಕ್ತಪಡಿಸಿರುವರು. ಪ್ರಜಾಪ್ರಭುತ್ವದ ಯಶಾಪಯಶಸ್ಸುಗಳ ನಿದರ್ಶನವಾಗಿರುವ ಈ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಕಾರ್ಯಕ್ಷಮವಾಗಬೇಕಾದರೆ ಮತದಾರರು ಸುಶಿಕ್ಷಿತರಾಗಬೇಕು. ಕೇವಲ ಸಾಕ್ಷರರಾದರೆ ಸಾಲದು. ಅವರಿಂದ ಆರಿಸಲ್ಪಟ್ಟ ಸದಸ್ಯರು ನಿರ್ದಾಕ್ಷಿಣ್ಯವಾದ ರೀತಿಯಲ್ಲಿ ಕರ್ತವ್ಯವನ್ನು ನೆರವೇರಿಸುತ್ತ ಹೋಗಬೇಕು. ಸ್ಥಾನಿಕ ಸಂಸ್ಥೆಗಳ ಸಾಂಪತ್ತಿಕ ಪರಿಸ್ಥಿತಿ ಅಷ್ಟೊಂದು ಅನುಕೂಲವಿಲ್ಲದಿದ್ದರೂ ಇದ್ದುದರಲ್ಲಿಯೇ ಪರಮಾವಧಿ ಹಿತವನ್ನು ಸಾಧಿಸುವ ಕೆಲಸದಲ್ಲಿ ಯಶಸ್ವಿಯಾಗಿಲ್ಲ ಎಂಬದಾಗಿ ಆರೋಗ್ಯ ಮಂತ್ರಿ ಶ್ರೀಮತಿ ಅಮೃತಕೌರರು ಹೇಳಿರುವರು. ಸ್ವರಾಜ್ಯದಲ್ಲಿ ಸ್ಥಾನಿಕ ಸಂಸ್ಥೆಗಳ ಅಶೋತ್ತರಗಳು ಭವ್ಯವಾಗಿರುವವನ್ನು ನೆನೆದು ಸಂಬಂಧಿಸಿದವರೆಲ್ಲ ಹೊಣೆಗಾರಿಕೆಯಿಂದ ಕಾರ್ಯ ಮಾಡುವದವಶ್ಯವಾಗಿದೆಂದು ಬೇರೆ ಹೇಳಬೇಕಿಲ್ಲ.

ಅಗಸ್ಟ ಹದಿನೈದು

ಹಿಂದ ಮತ್ತು ಪಾಕಿಸ್ತಾನ ಈ ಅವಳಿ-ಜವಳಿ ಇಂದು ಮೊದಲನೇ ವರ್ಷವನ್ನು ದಾಟುತ್ತವೆ. ಹಿಂದುಸ್ತಾನದಲ್ಲಿಯ ಮಕ್ಕಳ ಜೀವನ ಮತ್ತು ಆರೋಗ್ಯ ಪರಿಸ್ಥಿತಿಗನುಸಾರವಾಗಿ ಇವೆರಡೂ ಭಾಗಗಳ ಜೀವನ ಮತ್ತು ಆರೋಗ್ಯ ಈ ಮೊದಲ ವರ್ಷದಲ್ಲಿ ಚಿಂತಾಜನಕವಿದ್ದಿತು. ಎರಡೂ ವಿವಿಧ ಗಂಡಾಂತರಗಳಿಂದ ಪಾರಾಗಿವೆ ಮತ್ತು ಎರಡರಲ್ಲಿ ಯಾವುದೊಂದೂ ಈ ಗಂಡಾಂತರ ಪರಿಸ್ಥಿತಿಯಿಂದ ಪೂರ್ಣ ಪಾರಾದೆ ಎಂದು ಈಗಲೂ ಆತ್ಮವಿಶ್ವಾಸದಿಂದ ಹೇಳಲಾರದು. ಮುಂದಿನ ಹಲವು ವರುಷಗಳ ಭವಿತವ್ಯ ಹೀಗೆಯೇ ಇದೆಂಬುದು ಯಾರಿಗೂ ತಿಳಿಯದು. ದೇಶವು ಎದುರಿಸಿದ ಮತ್ತು ಇನ್ನು ಮುಂದೆಯೂ ಎದುರಿಸಬಹುದಾದ ಗಂಡಾಂತರಗಳು ಹೆಚ್ಚಾಗಿ ದೈವನಿರ್ಮಿತವಾಗಿರದೆ ಮಾನವನಿರ್ಮಿತವಾದುವು ಮತ್ತು ಊಹಿಸಬಹುದಾದ ಎಲ್ಲ ಬಗೆಯ ಅಮಾನುಷ ಕೃತಿಗಳಿಂದ ಸಂಭವಿಸಿದುವೆಂಬದನ್ನು ನೆನೆದರೆ ಮಾತ್ರ ಮತ್ತಷ್ಟು ವಿಷಾದವಾಗುವದು. ಸೃಷ್ಟಿ ದೇವತೆಯ ಕೃಪೆಯಿಂದ ಸಂಪತ್ಸಮೃದ್ಧವಾದ ನಮ್ಮೀ ಸುಂದರ ನಾಡಿನಲ್ಲಿ ಮನುಷ್ಯಜಾತಿಗೆ ಮತ್ತು ಅವನಲ್ಲಿರುವ ದೈವೀ ಮತ್ತು ಘನತರವಾದ ಸದ್ಗುಣಗಳಿಗೆ ಮನುಷ್ಯನೇ ವೈರಿಯೂ ಘಾತಕನೂ ಆಗಿರುವನು. ಮರ್ತ್ಯನಿಗೆ ಶಕ್ಯವಿದ್ದಮಟ್ಟಿಗೆ ತನ್ನ ಜೀವಮಾನದಲ್ಲಿಯೇ ದೇವತ್ವವನ್ನು ಮುಟ್ಟಬಲ್ಲ ಮನುಷ್ಯನನ್ನು ಪ್ರಕೃತಿದೇವಿಯು ಸಾವಿರಾರು ವರುಷಗಳಿಗೆ ಒಮ್ಮೆ ಸೃಷ್ಟಿಸುವಳು. ಕೃಪಾನಿಧಿಯಾದ ಪರಮಾತ್ಮನು ನಮ್ಮ ಕಾಲದಲ್ಲಿಯೇ ಇಂಥ ಒಬ್ಬ ಮನುಷ್ಯನನ್ನು ಸೃಷ್ಟಿಸಿದನು. ಆದರೆ ನಮ್ಮ ದುರದೃಷ್ಟದಿಂದ ಅವನ ದೇವತ್ವವು ನಮ್ಮ ಸಾಮಾಜಿಕ ಮತ್ತು ರಾಜಕೀಯ ಗೊತ್ತುಗುರಿಗಳಿಗೆ ಘಾತಕವಾಗಿವೆಂದು ನಾವು ಭಾವಿಸಿದೆವು ಮತ್ತು ಅವನು ಇನ್ನಷ್ಟು ಕಾಲ ಬದುಕಿದ್ದಾದರೆ ಅವನಲ್ಲಿಯ ದೇವತ್ವವು ಇನ್ನಷ್ಟು ವಿಕಾಸಹೊಂದಿ ನಮ್ಮ ರಾಷ್ಟ್ರಕ್ಕೇ ಒಂದು ಬಗೆಯ ಭಯಂಕರ ಗಂಡಾಂತರ ಬರಬಹುದೆಂದು ಎಣಿಸಿದೆವು. ಆದುದರಿಂದ ನಾವು ನಮ್ಮ ಕೈಗಳಿಂದಲೆ ಅವನನ್ನು ಕೊಂದೆವು. ಈ ಅವಳಿ ಜವಳಿಗಳು ಹುಟ್ಟಿದ ಮೊದಲನೇ ವರುಷದಲ್ಲಿಯೇ ಈ ಘಟನೆಯು ಸಂಭವಿಸಿತು.

ಹಿಂದುಸ್ತಾನ ಮತ್ತು ಪಾಕಿಸ್ತಾನ ಈ ಎರಡೂ ಮಕ್ಕಳು ಒಂದೇಸವನೆ ಕಾಹಿಲೆಯಿಂದ ಬಳಲಿ ದುಃಖಿ ಮತ್ತು ಕಿಡಿಗೇಡಿಯಾಗಿರುವವು. ಈಯೆಲ್ಲ ಹೃದಯದ್ರಾವಕ ಪರಿಸ್ಥಿತಿಯಿಂದ ನಮ್ಮಲ್ಲಿಯ ಅನೇಕರು ಉದಾಸೀನರಾಗಿ ನಿರಾಸೆಯ ನಿಟ್ಟುಸಿರು ಬಿಡುತ್ತಿರುವರು. ಈ ಮೊದಲ ವರುಷದ ವರ್ಧಂತಿಗಾಗಿ ನನ್ನೆಡೆಗೆ ಪತ್ರಗಳು ಬಂದಿವೆ. ಅವೆಲ್ಲವು ಹೆಚ್ಚಾಗಿ ದುಃಖಾಶ್ರುಗಳಿಂದ ತುಂಬಿರುವವಲ್ಲದೆ ಉತ್ಸಾಹ ಮತ್ತು ಆತ್ಮವಿಶ್ವಾಸವನ್ನು ವ್ಯಕ್ತಪಡಿಸುವಂಥವಾಗಿರುವದಿಲ್ಲ. ಈ ಬಗೆಯಾಗಿ ಪರಿತಪಿಸುವವರ ಬಗ್ಗೆ ನಾನು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದರೂ ಅದನ್ನು ಪ್ರೋತ್ಸಾಹಿಸಲು ನನ್ನ ಮನಸ್ಸಿಲ್ಲ. ಮಗುವು ಮೊದಲ ವರ್ಷದಲ್ಲಿ ತಂದೆಯನ್ನು ಕಳೆದುಕೊಂಡು ಇಡೀ ವರ್ಷ ರೋಗದಿಂದ ಬಳಲುತ್ತಿದ್ದರೂ ಗಂಡನನ್ನು ಕಳೆದುಕೊಂಡು ದುಃಖದಿಂದ ಸಂತಪ್ತಳಾದ ಯಾವ ತರುಣ ವಿಧವೆಯೂ ಆ ಮಗುವಿನ ಹುಟ್ಟಿಗಾಗಿ ಇಲ್ಲವೆ ಹುಟ್ಟುಹಬ್ಬದ ದಿನಕ್ಕಾಗಿ ದುಃಖಪಡಲಾರಳು. ಆರೋಗ್ಯ ಸರಿಯಾಗಿರಲಿಲ್ಲ ಮತ್ತು ಈಗಲೂ ಕಾಹಿಲೆಯಿಂದ ಬಳಲುತ್ತಿರುವೆನು; ಅಲ್ಲದೆ ಹಿಂದಿನ ವರ್ಷ ಬಹಳ ಹಾನಿಗೊಳಗಾದೆನು ಎಂಬ ಕಾರಣದಿಂದ ಯಾವ ಮನುಷ್ಯನೂ ತನ್ನ ಜಯಂತಿಯ ಕಾಲಕ್ಕೆ ಶೋಕಿಸಬಾರದು. ಮನುಷ್ಯನು ತನ್ನ ಜನ್ಮಕ್ಕೂ ಜನ್ಮದಿನಕ್ಕೂ ಒಂದು ಬಗೆಯ ಸಂಬಂಧ ಕಲ್ಪಿಸುವನು ಮತ್ತು ಹಿಂದಿನ ವರುಷ ಎಷ್ಟೇ ದುಃಖ ದುಮ್ಮಾನಗಳು ಉಂಟಾಗಿದ್ದರೂ ಭವಿಷ್ಯತ್ತಿನಲ್ಲಿಯಾದರೂ ಸುಖಮಯ ಜೀವನದ ಆಸೆಯನ್ನು ತಾಳುವನು. ಆದುದರಿಂದ ಜನ್ಮವೆಂಬುದು ಪ್ರಕೃತಿಯ ಅದ್ಭುತವೃತ್ತಿ.

ಜಯಂತಿಯ ಪ್ರಸಂಗದಲ್ಲಿ ಸಂತುಷ್ಟರಿರುವ ಪ್ರವೃತ್ತಿಯೇನು ನಿರರ್ಥಕವಾದುದಲ್ಲ. ಹುಟ್ಟೆಂಬುದೇ ಸಾಧನೆಯ ಹೊಸ ಆಶಾಕಿರಣವು. ಜಯಂತಿಯು ಈ ಆಶಾಕಿರಣವನ್ನು ಸ್ಥಿರಪಡಿಸುತ್ತದೆ. ಜೀವನ ಮತ್ತು ಆಸೆ ಒಂದನ್ನೊಂದು ಬಿಟ್ಟಿರಲಾರವು. ನೂರು ವರುಷಗಳನ್ನು ಮುಗಿಸಿದ ಮತ್ತು ಹಾಸಿಗೆಯಲ್ಲಿ ನಿಃಸಹಾಯಕ ಸ್ಥಿತಿಯಲ್ಲಿ ಬಿದ್ದುಕೊಂಡ ಮತ್ತು ಸಾಧಿಸದೆ ಇದ್ದ ಆಸೆ ಆಕಾಂಕ್ಷೆಗಳ ಅರಿವು ಕೂಡ ಇಲ್ಲದಿರುವ ಮನುಷ್ಯನು ಕೂಡ ತನ್ನ ಜಯಂತಿಯ ಕಾಲಕ್ಕೆ ಕೆಲಮಟ್ಟಿಗೆ ಉತ್ಸಾಹಿತನಾಗುವನು; ಬೇರೆ ಯಾವ ಕಾರಣಕ್ಕಾಗಿ ಅಲ್ಲದಿದ್ದರೂ ಇಷ್ಟೊಂದು ವೃದ್ಧ ಆಗುವವರೆಗೆ ಬಾಳಿದುದಕ್ಕೆ ಅವನು ಉತ್ಸಾಹಗೊಳ್ಳುವನು. ತನ್ನ ಜೀವನದಲ್ಲಿ ಅವನು ಸುಖಿಯಾಗಿರಬಹುದು ಇಲ್ಲವೆ ದುಃಖಿಯಾಗಿರಬಹುದು; ಅಲ್ಲದೆ ಈ ನಶ್ವರ ದೇಹವನ್ನು ಬಿಟ್ಟುಬಿಡಬೇಕೆಂದೂ ಬಯಸಿರಬಹುದು; ಆದರೂ ಇಷ್ಟೊಂದು ದೀರ್ಘಾವಧಿಯ ವರೆಗೆ ಬಾಳಿದ್ದಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸುವ ಒಳದನಿಯೊಂದು ಅವನ ಬಾಯಿಂದ ಹೊರಡುತ್ತದೆ ಮತ್ತು ಜಯಂತಿಯ ದಿನ ಇದು ತೀಕ್ಷ್ಣ ಇಲ್ಲವೆ ಸೌಮ್ಯ ರೀತಿಯಲ್ಲಿ ತಾನಾಗಿಯೇ ವ್ಯಕ್ತವಾಗುತ್ತದೆ. ಬದುಕೇ ಭಾಗ್ಯವೆಂಬ ನಿರ್ಹೇತುಕ ವಿಶ್ವಾಸವೂ ಅವನಲ್ಲಿ ಕದಾಚಿತ ಇರಬಹುದು. ಆದುದರಿಂದ ನಮ್ಮ ರಾಷ್ಟ್ರೀಯ ಜೀವನದ ಈ ಮಹತ್ವ. ದಿನದಲ್ಲಿ ನಾವೆಲ್ಲರೂ ಉತ್ಸಾಹಿತರಾಗುವ. ಕಾರ್ಮೋಡಗಳಿಂದ ಕವಿದ ದುಃಖಮಯದೃಷ್ಟಿಯಿಂದಲೆ ನಾವು ಜಗತ್ತನ್ನು ನೋಡಲೊಣಬೇಡ; ಆದರೆ ಅವೆಲ್ಲ ಮಾಯವಾಗುವ ದಿಕ್ಕಿನಿಂದ ಜಗತ್ತನ್ನು ಈಕ್ಷಿಸುವಾ.

ಸಾಧಾರಣ ಒಂದೇ ದಿನ ಹುಟ್ಟಿದ ರಾಮ ಭರತರಂತೆ ಹಿಂದ ಮತ್ತು ಪಾಕಿಸ್ತಾನದ ಜನರು ಎರಡು ದೇಹಗಳಲ್ಲಿ ಒಂದೇ ಆತ್ಮ ಇದ್ದಂತೆ ಇರುವರು ಮತ್ತು ಇರತಕ್ಕದ್ದು. ಎರಡು ದೇಹಗಳಿರುವವರ ಮೂಲಕವೇ ಇಬ್ಬರ ತಾಯಿ ಬೇರೆ ಬೇರೆ. ಅವರ ಲಾಲನ ಪಾಲನೆ ಮಾಡಬೇಕಾಗಿದೆ. ಅವರಿಬ್ಬರೂ ಪರಸ್ಪರ ಅಸೂಯೆ ಪಡುವರು. ಪರಿಣಾಮವಾಗಿ ಈ ಅವಳಿ ಜವಳಿ ಕಳೆದ ವರುಷ ಎಷ್ಟು ಸುಖಿಯಾಗಿರಬೇಕು ಅಷ್ಟು ಸುಖಿಯಾಗಿ ಇರಲಿಲ್ಲ. ರಾಮ ಭರತರು ಕೂಡ ಹದಿನಾಲ್ಕು ವರುಷ ದುಃಖದ ದಿನಗಳನ್ನು ಕಳೆಯಬೇಕಾಯಿತು. ಈ ಅವಧಿಯಲ್ಲಿ ಅವರ ತಂದೆಯ ಮರಣ, ಸೀತೆಯ ಅಪಹಾರ ಮತ್ತು ರಾವಣನಕೂಡ ಘೋರ ಯುದ್ಧ ಈ ಮೊದಲಾದ ಘಟನೆ ನಡೆದವು. ಅದೇರೀತಿಯಾಗಿ ನಮಗೂ ದುರ್ದಿನಗಳು ಕಾಣಬರಬಹುದು. ಆದರೆ ಅದರಿಂದ ನಾವು ನಿರಾಸೆಗೊಳ್ಳತಕ್ಕದ್ದಲ್ಲ. ರಾಮ ಮತ್ತು ಭರತರಂತೆ ಅಂತರ್ ಬಾಹ್ಯ ದುಷ್ಟ ಶಕ್ತಿಗಳೊಡನೆ ಶೌರ್ಯದಿಂದ ಹೋರಾಡುವಾ. ಆದರೆ ಅದೇಕಾಲಕ್ಕೆ ದುಷ್ಟ ಶಕ್ತಿಗಳೊಡನೆ ಹೋರಾಡುವ ನಿಜವಾದ ಮಾರ್ಗವೆಂದರೆ ಆ ದುಷ್ಟ ಶಕ್ತಿಗಳ ವಿರುದ್ಧ ದುಷ್ಟತರ ಶಕ್ತಿಗಳನ್ನು ಪ್ರಯೋಗಿಸುವದಲ್ಲ ಆದರೆ ಸಾತ್ವಿಕತರ ಶಕ್ತಿಗಳನ್ನು ಪ್ರಯೋಗಿಸುವದು ಎಂಬದನ್ನು ಮರೆಯೋಣ ಬೇಡ. ಜಗತ್ತಿನಲ್ಲಿಯ ಈ ತಾಮಸ ಶಕ್ತಿಗಳನ್ನು ಹೋಗಲಾಡಿಸುವಲ್ಲಿ ನಾವು ಯಶಸ್ವಿಯಾಗಬಹುದು, ಆಗಲಿಕ್ಕಿಲ್ಲ ಆದರೆ ಗಾಂಧೀಜಿ ನಿರ್ಧರಿಸಿದಂತೆ ನಾವಾದರೂ ನಿರಾಸೆಯಲ್ಲಿ ದುಷ್ಟ ಶಕ್ತಿಗಳೊಡನೆ ಹೋರಾಡುವದನ್ನು ಬಿಟ್ಟುಗೊಟ್ಟೆವು ಮತ್ತು ಅದಕ್ಕೆ ಶರಣುಹೋದೆವು ಎಂಬದಾಗಿ ಎನಿಸಿಕೊಳ್ಳೊಣಬೇಡ ಎಂದು ನಿರ್ಧರಿಸುವಾ. ಈ ಎರಡೂ ಡೊಮಿನಿಯನ್‌ಗಳಲ್ಲಿಯ ಜನರು ಮುಂದೊಂದು ದಿನ ಇದೆಲ್ಲ ತಾಮಸವೃತ್ತಿಯನ್ನು ಬಿಟ್ಟುಗೊಟ್ಟು ಶಾಂತ, ನಿರಾಮಯ ಮತ್ತು ಉತ್ಸಾಹಪೂರ್ಣ ಜೀವನವನ್ನು ಅನುಭೋಗಿಸುವವು ಮತ್ತು ರಾಮ ಹಾಗು ಭರತರಂತೆ ಸಾಮರಸ್ಯದಿಂದ ಇರಬಲ್ಲವು ಎಂಬ ಆಸೆಯನ್ನು ನಾವು ಬಿಟ್ಟುಗೊಡಲೊಣಬೇಡ. ಪರಮಾತ್ಮನು ನಮ್ಮನ್ನು ಅನುಗ್ರಹಿಸಲಿ.

ಹೊಸದಿಲ್ಲಿ

೧–೮–೪೮ ಕಿ. ಘ. ಮಶ್ರುವಾಲಾ

ಸಿದ್ಧಾಂತ, ಸಚ್ಚರಿತ್ರ ಮತ್ತು ಪ್ರಾಮಾಣಿಕತೆ

[ಈ ಸಲದ ಅಗ್ರಲೇಖನದಲ್ಲಿ ವಿವೇಚಿಸಲ್ಪಟ್ಟ ಬಗೆಯ ವಿಚಾರಗಳನ್ನೇ ಮದ್ರಾಸಿನಲ್ಲಿ ಜುಲೈ ೨೪, ೧೯೪೮ ದಿನ ಶಾಸನ ಸಭಾಭವನದಲ್ಲಿ ಶ್ರೀ ರಾಜಾಜಿಯ ಭಾವಚಿತ್ರದ ಅನಾವರಣ ಮಾಡುತ್ತ ಪಂ. ಜವಾಹರಲಾಲ ನೆಹರೂ ಅವರೂ ವ್ಯಕ್ತಗೊಳಿಸಿದ್ದು ಆಕಸ್ಮಾತ್ ಸಂಘಟಿಸಿದ ಸಂಗತಿಯೆನ್ನಬೇಕು.]

"ನಾನು ಯುವಕನಾಗಿದ್ದಾಗ ಬೇರೆ ಬೇರೆ ಸಿದ್ಧಾಂತಗಳು, ಧೋರಣೆಗಳು ಎನಿಸಿದ ವಿಷಯಗಳಿಗೆ ಬಹಳ ಮಹತ್ವವನ್ನು ಕೊಡುತ್ತಿದ್ದೆ. ಇಂದಿಗೂ ನಾನು ಅವುಗಳಿಗೆ ತಕ್ಕಷ್ಟು ಮಹತ್ವ ಕೊಡುತ್ತಿದ್ದೇನೆಂಬದೇನೋ ನಿಜ; ಏಕೆಂದರೆ ಅವು ಒಂದು ನಿರ್ದಿಷ್ಟ ಧ್ಯೇಯದ, ಒಂದು ವಿಚಾರರೀತಿಯ, ಒಂದು ಕಾರ್ಯಪದ್ಧತಿಯ ಪ್ರತೀಕಗಳಾಗಿವೆ. ಅವುಗಳಿಗೆ ಮಹತ್ವ ಕೊಡುತ್ತಿದ್ದೇನೇನೋ ನಿಜ; ಆದರೆ ಹಿಂದಿನಷ್ಟಲ್ಲ. ಇದೇಕೆ? ಏಕೆಂದರೆ ಒಬ್ಬನಲ್ಲಿ ನಾವು ಪ್ರಧಾನವಾಗಿ ಅರಸಬೇಕಾದುದು, ಅವನ ಮತವಾವುದು, ಅವನ ಧರ್ಮ, ಅವನ ರಾಜಕಾರಣ, ಅವನ ಆರ್ಥಿಕ ವಿಚಾರಗಳೇನು ಎಂಬ ಮಾತುಗಳನ್ನಲ್ಲ. ಒಬ್ಬ ವ್ಯಕ್ತಿಯಲ್ಲಿ ಅರಸಬೇಕಾದ ಪ್ರಧಾನ ಗುಣವೆಂದರೆ ಅವನ ಪ್ರಾಮಾಣಿಕತೆ. ಅವನು ಪ್ರಾಮಾಣಿಕನಾಗಿರದಿದ್ದರೆ, ರಾಜಕೀಯ ಅಥವಾ ಆರ್ಥಿಕ ದೃಷ್ಟಿಯಿಂದ ಅವನ ಸಿದ್ಧಾಂತಗಳೆಷ್ಟು ಉನ್ನತವಾಗಿದ್ದರೂ ಅದರಿಂದ ಅಷ್ಟೇನೂ ಪ್ರಯೋಜನವಿಲ್ಲ.

"ಪ್ರಾಮಾಣಿಕತೆಯೂ ಅಮೂಲ್ಯವೆಂದು ನಾನು ತಿಳಿದಿದ್ದೆ. ಆದರೂ ಯಾಕೊ ಏನೊ ಒಂದು ವಿಶಿಷ್ಟ ಧೋರಣೆಯ ಪ್ರತಿಪಾದನೆಯೆ ಅದಕ್ಕಿಂತ ಹೆಚ್ಚಿನದೆಂದು ನನ್ನ ಕಲ್ಪನೆಯಾಗಿತ್ತು. ಆದರೆ ಬರುತ್ತಾ ಬರುತ್ತಾ ಬರಿ ಧೋರಣನಿರ್ದೇಶವೊಂದರಿಂದಲೇ ಒಬ್ಬನನ್ನು ನಂಬಿ ಕುಳಿತಿರಲು ಸಾಧ್ಯವಿಲ್ಲೆಂದು ಅನುಭವಕ್ಕೆ ಬಂತು. ನಿಜವಾಗಿ, ಕೆಲವರು ವ್ಯಕ್ತಗೊಳಿಸಿದ ಉದಾತ್ತ ಧ್ಯೇಯಗಳು ಎಷ್ಟೋ ಬಾರಿ ನೀಚ ಹೇತುಗಳಿಗಾಗಿ ಉಪಯೋಗಿಸಲ್ಪಡುತ್ತಿದ್ದವು. ಹೀಗೆ ಬೇಕೆಂದು ದುರುಪಯೋಗಪಡಿಸುವದಲ್ಲದಿದ್ದರೂ ನಮ್ಮಲ್ಲಿ ಎಷ್ಟೋ ಜನರು ಕೆಲವು ಉದಾತ್ತ ವಿಚಾರಗಳನ್ನು ಪ್ರತಿಪಾದಿಸಿದರೆ ತಮ್ಮ ಪಾಲಿನ ಕರ್ತವ್ಯ ಮುಗಿಯಿತು, ಆ ಮೇಲೆ ಉದಾತ್ತವಲ್ಲದ ಚಟುವಟಿಕೆಗಳಲ್ಲಿ ಆಸಕ್ತರಾದರೂ ತಪ್ಪಿಲ್ಲವೆಂದು ತಿಳಿದುಕೊಂಡು ಬಿಟ್ಟದ್ದೂ ಇದೆ. ಆದುದರಿಂದಲೇ, ರಾಷ್ಟ್ರೀಯ–ಅಂತರ್ ರಾಷ್ಟ್ರೀಯ ವಿಚಾರಗಳನ್ನು ತೂಗಿಸಿಕೊಂಡು ಹೋಗುವಲ್ಲಿ ಎಷ್ಟೇಮೇಲಾಟವಾದರೂ ಪ್ರಾಮಾಣಿಕ ಗುಣವೊಂದರಿಂದಲೇ ಕೆಲಸವಾಗುವದಿಲ್ಲೆಂದು ಗೊತ್ತಿದ್ದರೂ ನಾನು ಪ್ರಾಮಾಣಿಕತೆಗೆ ಹೆಚ್ಚು ಮಹತ್ವಕೊಡಲು ಕಲಿತ ಪ್ರಾಮಾಣಿಕತೆಯೆ ಮೂಲ ತಳಹದಿ; ಅದರಿಂದ ಧೋರಣೆಬೆಳೆದು ಬರಬಹುದು; ಆದರೆ ಪ್ರಾಮಾಣಿಕತೆಯೆ ಧೋರಣೆಯಲ್ಲ.

"ನಾನು ಮಾತಾಡಬೇಕಾದ ಇನ್ನೊಂದು ಮಹತ್ವದ ಅಂಶವೂ ಇದೆ. ಸಾಮಾನ್ಯವಾಗಿ ಹೇಳುವದಾದರೆ, ಪ್ರತಿಯೊಂದು ದೇಶಕ್ಕೂ ಅದರದೆ ಆದ ಒಂದು ತನ್ನತನ ಒಂದು ಪ್ರತಿಭೆ ಇದೆ. ಒಂದು ದೇಶದ ಇಂಥ ಘನತೆಯನ್ನು ಅಳೆಯುವ ಬಗೆಯಾವುದು? ಅದರ ಸಂಪತ್ತಿಯಿಂದಲ್ಲ; ಅದರ ಸ್ಥಿರ-ಚರ ಸೊತ್ತುಗಳ ಸಂಗ್ರಹದಿಂದಲೂ ಅಲ್ಲ. ಹಿಂದುಸ್ತಾನದಲ್ಲಿ ಆದರ ಗೌರವಗಳಿಗೆ ಪಾತ್ರವಾಗುವದು ಖಂಡಿತವಾಗಿಯೂ ಒಬ್ಬನ ಸಿರಿ ಸೊತ್ತುಗಳಾಗಲಿ ಅವನ ಬಿರುದು ಬಾವಲಿಗಳಾಗಲಿ ಅಲ್ಲ. ನಮ್ಮಲ್ಲಿ ರಾಜರು, ಮಹಾರಾಜರು, ನವಾಬರು ಇರಬಹುದಾದರೂ ಸಾಮಾನ್ಯ ಮನುಷ್ಯನು ಅವರ ಮೇಲೆ ಅಷ್ಟೇನೂ ಗೌರವವನ್ನಿಟ್ಟಿರುವದಿಲ್ಲ. ಬಿರುದುಗಳಿರಲಿ ಇಲ್ಲದಿರಲಿ, ಸಂಪನ್ನನಿರಲಿ ಇಲ್ಲದಿರಲಿ, ಸಾಮಾನ್ಯ ಮನುಷ್ಯನಿಗೆ ಅದರಿಂದೇನು? ಹಣಕ್ಕೂ ಬಲುಮೆಗೂ ಅನೇಕರು ತಲೆವಾಗ ಬಹುದಾದರೂ ಹಿಂದೀಯರು ಐಹಿಕ ಸಂಪತ್ತಿಗೆ ಮನಸೋಲುವದಿಲ್ಲ. ಹಿಂದಾದರೂ ಇಂದಾದರೂ ಹಿಂದುಸ್ತಾನ ಗೌರವಿಸಿದ್ದು, ಗೌರವಿಸುವದು ಜ್ಞಾನ, ವಿದ್ಯೆ ಇವುಗಳನ್ನು. ಅದಕ್ಕಿಂತಲೂ ಹೆಚ್ಚಾಗಿ ಪರೋಪಕಾರ ಬುದ್ಧಿಯನ್ನು ಹಿಂದುಸ್ತಾನ ಆದರಿಸುತ್ತದೆ. ಹಿಂದೀ ಬುದ್ಧಿ – ವ್ಯಕ್ತಿಯ ಬುದ್ಧಿಯಲ್ಲ ರಾಷ್ಟ್ರೀಯ ಬುದ್ಧಿ – ಪ್ರಥಮ ಸ್ಥಾನವನ್ನು ಮೊದಲಿಂದಲೂ ಕೊಡುತ್ತ ಬಂದಿರುವದು. ಈ ಮೂಲಭೂತ ಸಂಗತಿಗೆ. ಆದರಿಂದಲೇ ಸಂಪತ್ತಿ, ಬಿರುದು ಬಾವಲಿಗಳೆ ಮೊದಲಾದವುಗಳಿಂದ ಭಿನ್ನವಾದ ಗುಣಗಳಿಗಾಗಿ ಮಹಾತ್ಮಾ ಗಾಂಧಿಯವರಲ್ಲಿ ನಾವು ಅದ್ಭುತ ಗೌರವವನ್ನಿಟ್ಟಿದ್ದೇವೆ. ಹಾಗೆಯೆ ರಾಜಾಜಿಯನ್ನು ಅವರ ವ್ಯಕ್ತಿತ್ವಕ್ಕಾಗಿ, ಸೇವೆಗಾಗಿ, ತ್ಯಾಗಕ್ಕಾಗಿ ಗೌರವಿಸುತ್ತೇವೆ. ಭಾರತದ ಅತ್ಯುದಾತ್ತ ಬುದ್ಧಿಯ ಪ್ರತೀಕ ರಾಜಾಜಿ."

— ಜವಾಹರಲಾಲ ನೆಹರು.

(ತಾ. ೨೫–೭–೧೯೪೮ ರ "ಹಿಂದು" ದಿಂದ)

ವನಸ್ಪತಿ ತುಪ್ಪ

ನಾನು "ಹರಿಜನ"ದ ಸಂಪಾದಕತ್ವವನ್ನು ವಹಿಸಿಕೊಂಡಂದಿನಿಂದ ವನಸ್ಪತಿ ತುಪ್ಪದ ವಿಷಯಕ್ಕೆ ಸಂಬಂಧಪಟ್ಟು ಚರ್ಚಿಸಬೇಕೆಂದು ಕೋರಿಕೊಳ್ಳುವ ಕೆಲವು ಪತ್ರಗಳು ಬಂದಿವೆ. ಇದು ಪೂ. ಗಾಂಧೀಜಿಯವರು ಬರೆಯುತ್ತಿದ್ದ, ಆದರೆ ನಾನು ಪ್ರಸ್ತಾಪಿಸದ, ಇನ್ನು ಎಷ್ಟೋ ಪ್ರಶ್ನೆಗಳ ಪೈಕಿ ಒಂದು. ಇದನ್ನು ಕುರಿತು ಬರೆಯಬೇಕೆಂದಿದ್ದೆ. ನಾನು "ಹರಿಜನ"ದ ಭಾರವನ್ನು ವಹಿಸಿಕೊಂಡಿದ್ದೇನೆಂದ ಮಾತ್ರಕ್ಕೆ ಗಾಂಧೀಜಿಯ ಸ್ಥಾನವನ್ನು ತುಂಬುವ ಸಾಮರ್ಥ್ಯ ನನಗೆ ಬಂದಂತಾಗಲಿಲ್ಲ. ಆದರೆ ನಾನು ವನಸ್ಪತಿ ತುಪ್ಪದ ಪ್ರಶ್ನವನ್ನು ಎತ್ತಿರಲು ಗಾಂಧೀಜಿ ಆ ಕುರಿತು ಬರೆದುದಕ್ಕೆ ಮತ್ತು ಮಾಡಿದುದಕ್ಕೆ ಜೋಡಿಸಲು ನನ್ನಲ್ಲಿ ಹೆಚ್ಚಿನದೇನೂ ಇರಲಿಲ್ಲವೆಂಬುದೂ ಒಂದು ಕಾರಣವಾಗಿತ್ತು. ಆದರೂ ಪರ್ಧಾದ ಗೋಸೇವಾ ಸಂಘದವರು ಈ ವಿಷಯದಲ್ಲಿ ಕೆಲಸಕ್ಕೆ ಕೈಕೊಂಡೇನೂ ಕುಳಿತಿಲ್ಲವೆಂದು ನಾನು ಓದುಗರಿಗೆ ತಿಳಿಸಬಲ್ಲೆ. ಈ ಪ್ರಶ್ನವನ್ನು ಬಿಡದೆ ಕೇಂದ್ರ ಅಧಿಕಾರಿಗಳನ್ನು ಅವರು ಒತ್ತಾಯಗೊಳಿಸುತ್ತಿದ್ದಾರೆ.

ನನ್ನ ಪಾಲಿಗೆ ಈ ಪ್ರಶ್ನೆ ನೈತಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಅದರ ಮುಂದೆ ಆರೋಗ್ಯದ ಮತ್ತು ಆರ್ಥಿಕ ಅಂಶಗಳು ಅಪ್ರಧಾನವೆನಿಸುತ್ತವೆ. ನಿಜವಾದ ತುಪ್ಪದೊಡನೆ ಬೆರಸಿ ಮಾರಲು ಬರುವದೆಂಬುದರಲ್ಲಿ ಆರ್ಥಿಕ ದೃಷ್ಟಿಯಿಂದ ವನಸ್ಪತಿಗೆ ಮಹತ್ವ ಬಂದಿದೆ. ಇದು ಹಳ್ಳಿಗರನ್ನೂ ವ್ಯಾಪಾರಿಗಳನ್ನೂ ನೀತಿಗೇಡಿಗಳನ್ನಾಗಿ ಮಾಡಿದೆ. ವನಸ್ಪತಿ ತುಪ್ಪವನ್ನು ವನಸ್ಪತಿ ತುಪ್ಪವೆಂದೇ ಅಪೇಕ್ಷಿಸುವವರ ಸಂಖ್ಯೆ ತೀರ ಕಡಿಮೆ. ನಿಜವಾದ ತುಪ್ಪವನ್ನು ಕೊಳ್ಳಹೋದರೂ ವನಸ್ಪತಿ ತುಪ್ಪಕ್ಕೇ ತುಸು ಅಚ್ಚ ತುಪ್ಪವನ್ನು ಬೆರಸಿದ ವಸ್ತುವೆ ವನಸ್ಪತಿಗಿಂತ ಹೆಚ್ಚು ಬೆಲೆಯಲ್ಲಿ ತಮಗೆ ದೊರಕುವದೆಂದು ಮನಗಂಡದ್ದರಿಂದಲೇ ವನಸ್ಪತಿಗೆ ಜನರು ಶರಣು ಹೋದರು. ಎಷ್ಟೋ ಜನರು ಇಂದಿಗೂ ಅಚ್ಚ ತುಪ್ಪವನ್ನೇ ಕೊಳ್ಳಬೇಕೆಂದು ವನಸ್ಪತಿಗಿಂತ ಬಹಳ ಹೆಚ್ಚು ಹಣ ಕೊಟ್ಟರೂ ಅವರಿಗೆ ದೊರೆಯುವದು ವನಸ್ಪತಿ ಮಿಶ್ರಿತ ತುಪ್ಪವೇ. ಒಕ್ಕಲಿಗರು ಕೂಡ ಬೆಣ್ಣೆಯೊಡನೆ ವನಸ್ಪತಿಯನ್ನು ಬೆರಸಿ ಬಿಡುವ ಮಾಟವನ್ನು ಕಲಿತುಬಿಟ್ಟಿದ್ದಾರೆ. ಆದರಿಂದ ನೀವು ಬೆಣ್ಣೆಯನ್ನು ಕೊಂಡರೆ ಕೂಡ ಅದರೊಡನೆ ನಿಮಗೆ ವನಸ್ಪತಿ ಬಂದೇ ಬರುತ್ತದೆ. ಹೀಗೆ ವನಸ್ಪತಿಯೆಂಬುದು ಅಪ್ರಾಮಾಣಿಕತೆಗೆ ಪ್ರತ್ಯಕ್ಷವಾಗಿ ಪೋಷಣೆ ಕೊಡುವ ವಸ್ತುವಾಗಿದೆ. ಈ ವಸ್ತುವಿನ ಉತ್ಪಾದನೆಯನ್ನು ಪ್ರತಿಬಂಧಿಸಲು ಮತ್ತಾವ ಕಾರಣವೂ ಇಲ್ಲದೆ ಹೋಗಿದ್ದರೂ ಇದೊಂದೇ ಸಾಕಾಗಿವೆಯೆಂದು ತಿಳಿಯಬೇಕು.

ಈ ಸಲುವಾಗಿ ಕಾಲದಲ್ಲಿ ದನಕರುಗಳನ್ನು ಸಾಕುವದು ಇನ್ನಷ್ಟು ಕಠಿಣವಾಗಿಬಿಟ್ಟಿದೆ. ಅಚ್ಚ ತುಪ್ಪವನ್ನು ಸಿದ್ಧಮಾಡುವವನಿಗೆ ಸರಿಯಾದ ಬೆಲೆ ದೊರೆಯದಿರುವದರಿಂದ ಅವನು ತನ್ನ ದನಕರುಗಳನ್ನು ದುರ್ಲಕ್ಷಿಸುತ್ತಾನೆ. ಆ ಮೂಲಕ ಹಾಲಿನ ಯೋಗ್ಯತೆಯೂ ಆರೋಗ್ಯದಾಯಕತ್ವವೂ ಕಡಿಮೆಯಾಗತೊಡಗಿವೆ. ಹೊಟ್ಟೆ ನಾಣ್ಯಗಳು ನಿಜವಾದ ನಾಣ್ಯಗಳನ್ನು ಓಡಿಸುವಂತೆ ವನಸ್ಪತಿ ತುಪ್ಪವು ಅಚ್ಚ ತುಪ್ಪವನ್ನು ಕಾಲಾಂತರದಲ್ಲಿ ಪೇಟೆಯಿಂದ ಓಡಿಸುವದು. ಈ ಪ್ರಕಾರ, ತಜ್ಞರು ವನಸ್ಪತಿಯ ಪೋಷಕತೆಯನ್ನು ಕುರಿತು ಏನೇ ಅಭಿಪ್ರಾಯ ಪಡಲಿ, ಮೇಲಿನ ಆಕ್ಷೇಪಕ್ಕೆ ಅದು ಸಮಾಧಾನ ಕೊಡಲಾರದು. ಬೆಣ್ಣೆ, ತುಪ್ಪ, ಕಚ್ಚಾ ಎಣ್ಣೆ ಮತ್ತು ಶುದ್ಧಮಾಡಿದ ಎಣ್ಣೆ ಇವುಗಳ ತುಲನಾತ್ಮಕ ಪೋಷಕತೆಯನ್ನು ನಿರ್ಧರಿಸಲು ಪೋಷಕತ್ವ ಸಂಶೋಧನ ಅವಶ್ಯವಾಗಿರಬಹುದು. ಆದರೆ ಜಲಜನಕ ವಾಯು ಪ್ರಯೋಗದಿಂದ ಘನೀಕೃತವಾದ ವನಸ್ಪತಿಯ ಜಾತಿಯೆ ಬೇರೆ.

—ಎಂಡಿಯ ಫುಲೆಕ್

ಆಧುನಿಕ ಸಾಲಗಾರ

ಸಾಲಗಾರರನ್ನು ಕರೆಯುತಿರುವವನೇ ಹಿಡಿದಿಟ್ಟುಕೊಳ್ಳುವದು ಪ್ರಾಚೀನ ಕಾಲದಿಂದಲೂ ನಡೆದು ಬಂದ ಸಂಪ್ರದಾಯ. ಸಾಮಾನ್ಯವಾಗಿ ಸಾಹುಕಾರನೇ ಸಾಲಗಾರನಿಗೆ ತನ್ನ ಕರಾರುಗಳನ್ನು ಹಾಕುವದುಂಟು. ಹಿಂದುಸ್ಥಾನವು ಸ್ವಾತಂತ್ರ್ಯವನ್ನೇನೋ ಸಂಪಾದಿಸಿತು. ಆದರೆ ಅದಕ್ಕೆ ತನ್ನ ಬಾಧ್ಯತೆಗಳನ್ನು ವಸೂಲು ಮಾಡಿಕೊಳ್ಳುವ ಶಕ್ತಿ ಬಂದಿಲ್ಲ. ಹಿಂದುಸ್ಥಾನದ ಸಾಲಗಾರ ರಾಷ್ಟ್ರವಾದ ಬ್ರಿಟನ್ನು ಏಕಪಕ್ಷೀಯ ಕೌಲತ್ತುಗಳನ್ನು ಪಡೆದುಕೊಂಡ ಮೇಲೂ ೧೨೦೦ ಕೋಟಿ ರೂಪಾಯಿಗಳನ್ನು ಭಾರತಕ್ಕೆ ಕೊಡಬೇಕಾಗುತ್ತದೆ. ಭಾರತದ ಅರ್ಥಸಚಿವರ ನೇತೃತ್ವದಲ್ಲಿ ಸ್ಟರ್ಲಿಂಗ ಶಿಲ್ಕಿನ ಬಗ್ಗೆ ಒಪ್ಪಂದ ಮಾಡಿಕೊಳ್ಳಲು ಭಾರತದಿಂದ ಒಂದು ಶಿಷ್ಟಮಂಡಲವು ಲಂಡನಕ್ಕೆ ಹೋಗಿತ್ತು. ಈ ಶಿಷ್ಟಾಯಿಯ ಫಲಿತಾಂಶವೆಂದರೆ, ಬೇಗ ಈ ಸಾಲವನ್ನು ಕೊಟ್ಟು ಮುಟ್ಟಿಸುವದು ತನಗೆ ದುಸ್ತರವೆಂಬುದನ್ನು ಬ್ರಿಟನ್ನು ಅತ್ಯಂತ ಯಶಸ್ವಿಯಾಗಿ ವಾದಿಸಿ ಗೆದ್ದುದು. ಬ್ರಿಟನ್ನಿನ ವಾರ್ಷಿಕ ಉತ್ಪನ್ನವು ೮೦೦೦ ಕೋಟಿ ಪೌಂಡು. ಹಿಂದುಸ್ಥಾನಕ್ಕೆ ಸಲ್ಲಬೇಕಾದ ಸಾಲವು ಬ್ರಿಟನ್ನಿನ ವಾರ್ಷಿಕ ಉತ್ಪನ್ನದ ಒಂಬತ್ತರಾಂಶಕ್ಕಿಂತ ಕಡಮೆಯಾಗುತ್ತದೆ. ೮೦೦೦ ರೂ.ಗಳ ವಾರ್ಷಿಕ ಉತ್ಪನ್ನವಿರುವವನಿಗೆ ೧೨೦೦ ರೂಪಾಯಿಯ ಸಾಲ ತೀರಿಸಲು ಆಗುವದಿಲ್ಲವೆಂದರೆ ಹಾಸ್ಯಾಸ್ಪದವೆಂದೇ ನಾವು ಸಾಮಾನ್ಯವಾಗಿ ತಿಳಿಯುತ್ತೇವೆ. ಆದರೂ ನಮ್ಮ ಸಾಲಗಾರರು ಶಿಷ್ಟಮಂಡಳಕ್ಕೆ ಒಳ್ಳೇ ಚಾತುರ್ಯದಿಂದ, ಈಗಿನ ಪರಿಸ್ಥಿತಿಯಲ್ಲಿ ಈ ಸಾಲವನ್ನು ಮುಟ್ಟಿಸಲು ಅತ್ಯಂತ ದೀರ್ಘಾವಕಾಶವೇ ಬೇಕಾಗುವದೆಂದು ಮನಗಾಣಿಸಿ ಕೊಟ್ಟಿದ್ದಾರೆ!

ಕಳೆದ ಜಾಗತಿಕ ಯುದ್ಧದಲ್ಲಿ ಬ್ರಿಟಿಶ್ ಮತ್ತು ಅಮೇರಿಕೆಯು ಭಾರತವನ್ನೇ ಏಶಿಯಾಖಂಡದ ತಮ್ಮ ನೆಲೆಯನ್ನಾಗಿ ಮಾಡಿಕೊಂಡು ನಮ್ಮ ದೇಶವನ್ನು ನುಗ್ಗುನುಗ್ಗಾಗುವಂತೆ ಮಾಡಿಬಿಟ್ಟರು. ಆದರಿಂದ ನಮ್ಮ ಹಳ್ಳಿಗಳ ಬಾಳೆಲ್ಲ ಹದಗೆಟ್ಟು ಹೋಗಿದ್ದು ಅವುಗಳ ಬೆಳವಣಿಗೆಗೆ ಅಪಾರ ಧನವ್ಯಯದ ಅಗತ್ಯತೆಯಿದೆ. ಇಂಗ್ಲಂಡವು ತನ್ನ ರಾಜಕೀಯ ಸತ್ತೆಯ ಮೂಲಕ ಹಿಂದುಸ್ಥಾನದಿಂದ ಯುದ್ಧೋಪಯೋಗಿ ಪದಾರ್ಥಗಳ ರೂಪದಲ್ಲಿ ಸಾಪಲದೆದಿತು. ನಮ್ಮಿಂದ ಪಡೆದುದನ್ನು ತಕ್ಕಷ್ಟು ಅಲ್ಪಾವಕಾಶದಲ್ಲಿ ಮುಟ್ಟಿಸುವದು ಆಗದ ಮಾತೆಂದು ಈ ಮುತ್ಸದ್ದಿಗಳು ಸಾಧಿಸುತ್ತಿದ್ದಾರೆ. ನಮ್ಮ ಗ್ರಾಮುಗಳ ಉದ್ಧಾರಕ್ಕಾಗಿ ನಮಗೀಗ ಅಪಾರ ಧನಬೇಕಾಗಿದೆ. ಗಂಟು ಸುಂಗುವದನ್ನು ನಿಲ್ಲಿಸಲೇಬೇಕು. ಕಾಲುವೆಗಳನ್ನು ಕಟ್ಟಿಸಲೇಬೇಕು. ಮರಳಿ ಬಂದ ಸ್ಟರ್ಲಿಂಗ ಶಿಲ್ಕನ್ನು ಈ ಕೆಲಸಗಳಿಗೆ ಬಳಸುವದು ಯುಕ್ತವಾಗಿದೆ. ಆದರೆ ಈ ಧನದ ಮೇಲೆ ತಮ್ಮ ಉದ್ಯೋಗವರ್ಧನ ಮಾಡಬೇಕೆನ್ನುವವರ ಕಾಕದೃಷ್ಟಿ ಬಿದ್ದಿರುವಂತೆ ಕಾಣುತ್ತದೆ. ನಮ್ಮ ಶಿಷ್ಟಾಯಿಯ ಸದಸ್ಯರು ಹಿಂದುಸ್ಥಾನದ ಉದ್ದಿಮೆಗಾರರಿಗೆ ಬೇಕಾದ ಪದಾರ್ಥಗಳನ್ನು ದೊರಕಿಸುವಲ್ಲಿ ವಿಶೇಷವಾಗಿ ವ್ಯಗ್ರರಾಗಿದ್ದಾರೆ. ಈ ದೃಷ್ಟಿಯಿಂದ ಈ ವಿಷಯದತ್ತ ಪರಿಶೀಲಿಸಿದಾಗ ಈ ಸ್ಟರ್ಲಿಂಗ ಶಿಲ್ಕನ್ನು ದೊರಕಿಸಿ ಅದನ್ನು ಹಳ್ಳಿಗಳನ್ನು ಕಡೆಗಣಿಸಿ ಉದ್ದಿಮೆಗಾರರ ಲಾಭಕ್ಕೆ ವೆಚ್ಚಮಾಡುವದು ಮಹಾ ಪ್ರಮಾದವೆಂದು ತೋರದಿರದು. ಹಳ್ಳಿಗಳೇ ದುಡಿದು ಈ ಧನವನ್ನು ಉಳಿತಾಯ ಮಾಡಿದವು. ಹೀಗಿರಲು ಈ ಗ್ರಾಮುಗಳು ಅಭಿವೃದ್ಧಿಯ ಸಾಧನ ಸೌಕರ್ಯಗಳಿಲ್ಲದೆ ಬಳಬಬೇಕೆ? ಈ ನಿಧಿಯು ನಮ್ಮ ಸ್ವಾಧೀನಕ್ಕೆ ಬರುತ್ತಲೇ ಇದನ್ನು ಹಳ್ಳಿಗರ ಊರ್ಜಿತಕ್ಕೆ ಬಳಸುವದೇ ಯುಕ್ತವೆಂದು ಈ ಮೊದಲೇ ನಾವು ಸೂಚಿಸಿದ್ದೆವು. ಜನತೆಯು ಒಂದು ಪಂಗಡಕ್ಕೆ ಸಲ್ಲುವ ಹಣವನ್ನು ತೆಗೆದು ಇನ್ನೊಂದು ಪಂಗಡಕ್ಕೆ ಸರ್ವಥಾ ಕೊಡಲಾಗದು. ಆದರೆ ದುರ್ದೈವದ ಮಾತೆಂದರೆ, ನಮ್ಮ ದೇಶದ ಉದ್ದಿಮೆಗಾರರೂ ಬಂಡವಳಗಾರರೂ ವಿದೇಶದ ಉದ್ದಿಮೆಗಾರರು ಬಂಡವಳಗಾರರಷ್ಟೇ ಬಲಶಾಲಿಗಳಾಗಿದ್ದಾರೆ. ಎಂದೇ ಇವರು ತಮಗೆ ಲಾಭದಾಯಕವಾದ ಮತ್ತು ಹಳ್ಳಿಗರಿಗೆ ಹಾನಿಕಾರಕವಾದ ಆರ್ಥಿಕ ಒಪ್ಪಂದಕ್ಕೆ ಅನುಮತಿಸುವಂತೆ ತಮ್ಮ ಪ್ರಭಾವವನ್ನು ಸರಕಾರದ ಮೇಲೆ ಬೀರುತ್ತಿದ್ದಾರೆ.

ಈ ಧನ ಬಂದ ಬಂದಹಾಗೆ ಜನಸಾಮಾನ್ಯರ ಊರ್ಜಿತಕ್ಕಾಗಿ ಹಳ್ಳಿಗಳಲ್ಲೇ ಇದು ವೆಚ್ಚವಾಗುವಂತೆ ಸರಕಾರವು ನೋಡಿಕೊಳ್ಳುವದೆಂದು ನಂಬುವಾ.—

ಜೆ. ಸಿ. ಕುಮಾರಪ್ಪ

ಚಂಡ ಪ್ರಚಂಡ ಬಾಂಬು

ಅಣುಬಾಂಬಿಗಿಂತಲೂ ಸಾವಿರಪಟ್ಟು ಹೆಚ್ಚು ಶಕ್ತಿಯುಳ್ಳ ಚಂಡಪ್ರಚಂಡವಾದ ಬಾಂಬನ್ನು ಅಮೇರಿಕೆಯಲ್ಲಿ ಶೋಧಿಸಲಾಗಿದೆಯೆಂದು ವಿದೇಶೀಯ ವಾರ್ತೆಯೊಂದರಿಂದ ತಿಳಿದು ಬರುತ್ತದೆ. ಇದನ್ನು ಸಿಡಿಸಲು ಯುರೇನಿಯಂ ಬದಲಿಗೆ ಭಾರವಾದ ಜಲಜನಕ ವಾಯುವನ್ನು ಬಳಸಲಾಗಿದೆಯಂತೆ.

ಎಲ್ಲೆಲ್ಲಿಯೂ ಜನಸಾಮಾನ್ಯರು ಇನ್ನು ಶಾಂತಿ ನೆಲೆಸುವದೆಂದು ತವಕದಿಂದ ಕಾದು ಕುಳಿತಾಗ ಕೆಲವು ಪ್ರಬಲ ರಾಷ್ಟ್ರಗಳು ಹೆಚ್ಚಿನ ವಿನಾಶಕ್ಕೆ ಅಮೋಘ ಉಪಾಯಗಳನ್ನು ಯೋಚಿಸುವಲ್ಲಿ ನಿರತವಾಗಿವೆ. ಕಳೆದ ಎರಡು ಮಹಾಯುದ್ಧಗಳು ಕಲಿಸಿದ ಪಾಠಗಳನ್ನು ಈ ರಾಷ್ಟ್ರಗಳು ಇಷ್ಟರಲ್ಲಿ ಮರೆತು ಬಿಟ್ಟಿವೆ. ರಶಿಯಾ, ಯುದ್ಧಸನ್ನದ್ಧವಾದ ತನ್ನ ಸೈನ್ಯದ ಬಲವನ್ನು ಒಂದೇ ಸಮನಾಗಿ ಇನ್ನೂ ಹೆಚ್ಚಿಸುತ್ತಲೇ ಇದೆಯೆಂದೂ ಅತ್ಯುತ್ತಮ ವಿಮಾನ ವಿಹಾರಗಳ ಮೂಲಕ ತನ್ನ ಬಲ ಪ್ರದರ್ಶನವನ್ನು ಮಾಡುತ್ತಲೆ ಇರುವದೆಂದೂ ತಿಳಿದು ಬರುತ್ತದೆ. ಮಾರ್ಶಲ್ ಸ್ಟಾಲಿನ್ನರ ಮಗನಾದ ಮೇಜರ ಜನರಲ್ ವಾಸಿಲಿ ಸ್ಟಾಲಿನ್‌ನು ಜೆಟ್ ವಿಮಾನಗಳ ಮೂಲಕ ವಾಯು ಯುದ್ಧವನ್ನು ಹೇಗೆ ಯಶಸ್ವಿಯಾಗಿ ಮಾಡಬಹುದೆಂಬದನ್ನು ತೋರಿಸಿ ಮಿತ್ರ ರಾಷ್ಟ್ರಗಳಿಗಿಂತ ರಶಿಯನ್ನರ ಸಿದ್ಧತೆಯು ಮಿಗಿಲಾದುದೆಂದು ಪೌರುಷ ಕೊಚ್ಚುತ್ತಿರುವನೆಂದು ರಾಯಟರ ವರದಿಯು ಹೇಳುತ್ತದೆ.

ಈ ಬಗೆಯ ಚಟುವಟಿಕೆಗಳು ಯುರೋಪದಲ್ಲಿಯೇ ಮೊದಲಾಗಿ ಅಲ್ಲಿಯೇ ಮುಗಿದು ಹೋಗುವದಿಲ್ಲ. ರಾಯಲ ಇಂಡಿಯನ್ ಏರ ಫೋರ್ಸನ್ನು ಸರ್ವಸಮರ್ಥಗೊಳಿಸುವ ಹವ್ಯಾಸಕ್ಕೆ ಬಿದ್ದ ನಮ್ಮ ಬಡದೇಶವು ಸಹ ಧನವ್ಯಯ ಮಾಡಬೇಕಾಗಿದೆ. ಪ್ರಾಚ್ಯದೇಶಗಳಿಗೇ ನಮ್ಮ ವಿಮಾನಬಲವು ಹೆಚ್ಚಿನದೆಂದು ತೋರಿಸುವ ಉದ್ದೇಶದಿಂದ ಈ ಧನ ವ್ಯಯ ಅವಶ್ಯವೆಂದು ಗ್ರಹಿಸಲಾಗಿದೆ. ಬರುವ ೨೦ ತಿಂಗಳಲ್ಲಿ ಭಾರತದ ವಿಮಾನಬಲದಲ್ಲಿ ೪ ಯುದ್ಧ ವಿಮಾನ ದಲಗಳೂ ೧ ಬಾಂಬ ನಿಕ್ಷೇಪಕ ದಲವೂ ೧ ಜೆಟ್ ವಿಮಾನಪಡೆಯೂ ಇನ್ನೊಂದು ಅತ್ಯಾಧುನಿಕ ಜೆಟ್ ವಿಮಾನ ಪಡೆಯೂ ಹೆಚ್ಚಬಹುದೆಂದು ಭಾರತ ಸರಕಾರದ ನಿರೀಕ್ಷೆಯಿದೆ. ಇದಕ್ಕೆಲ್ಲ ತಗಲುವ ವೆಚ್ಚಕ್ಕಿಂತ ಈ ಸಿದ್ಧತೆಯ ಹಿಂದೆ ಅವಿತ ಮನೋಭಾವನೆಯೂ ಉದ್ದೇಶವೂ ಹೆಚ್ಚು ಉದ್ವೇಗಕಾರಕವಾಗಿದೆ. ನಮಗೆ ಅತಿ ನಿಕಟವಾಗಿದ್ದ ಜಪಾನದಲ್ಲಿ ಆದ ಅನಾಹುತವನ್ನು ನೋಡಿದ ಮೇಲೆಯೂ ನಮ್ಮ ಧುರೀಣರು ಸಶಸ್ತ್ರ ಸೈನ್ಯಬಲದ ಮೇಲೆಯೇ ವಿಶ್ವಾಸವಿಟ್ಟಿರುವದೆಂದರೆ!

ನಮ್ಮ ನೌಕಾ 'ಬಲವನ್ನು ಹೆಚ್ಚಿಸಬೇಕೆಂದಾಗಲೂ ನಾವು ಇನ್ನುಳಿದ ನೌಕಾಬಲಗಳ ವಿಫಲತೆಯನ್ನು ಗಮನಿಸಬೇಕು. ಉಳಿದ ರಾಷ್ಟ್ರಗಳು ಅತ್ಯಾಧುನಿಕ ಯುದ್ಧನೌಕೆಗಳನ್ನು ಕಟ್ಟುತ್ತಿರುವಾಗ ನಾವು ಬಿಟ್ಟ ಉಡುಗೆಗಳನ್ನೂ ದೊಡ್ಡಳತೆಯ ಪಾದರಕ್ಷೆಗಳನ್ನು ಎತ್ತಿಕೊಳ್ಳುತ್ತಿದ್ದೇವೆ. ಅವರ ಪರಿತ್ಯಕ್ತ ಪದಾರ್ಥಗಳಿಗೆ ನಾವು ಪೇಟೆ ಒದಗಿಸಿ ಕೊಡುತ್ತಿದ್ದೇವೆ! ಇತ್ತೀಚೆ, ರಾಯಲ ಇಂಡಿಯನ್ ನೇವ್ಹಿಯವರು H. M. S. "ಅಚಿಲಿಸ" ತೆಗೆದುಕೊಂಡರು. ಆಗ ಒಂದೆರಡು ವಿಮಾನ ವಾಹಕಗಳನ್ನೂ ಕ್ರೂಝರಗಳನ್ನೂ ನಾವು ಕೊಳ್ಳಬಹುದೆಂದು ಲಾರ್ಡ ಮೌಂಟ ಬಾಟನ್ನರು ಇಚ್ಛೆ ವ್ಯಕ್ತಪಡಿಸಿದರು. ಗ್ರೇಟ ಬ್ರಿಟನ್ನು ನಮ್ಮೊಡನೆ ತನ್ನ ಲೆಕ್ಕಾಚಾರವನ್ನು ಬಗೆಹರಿಸುವ ವಿಧಾನಗಳಿವು. ಅಪರಿಮಿತ ಬೆಲೆ ಕೊಟ್ಟು ಅವರು ಪರಿತ್ಯಜಿಸಿದ ವಸ್ತುಗಳನ್ನು ನಾವು ಕೊಂಡುಕೊಳ್ಳ ಹಚ್ಚುವ ಸಂಚು ಇದು.

ಮೈತ್ರಿ, ಸರಿಯಾದ ತಿಳುವಳಿಕೆ ಇವೇ ಸದ್ಭಾವಗಳನ್ನು ಹುಟ್ಟಿಸಬಲ್ಲವಲ್ಲದೆ ಹಿಂಸೆಯಿಂದ ಲೋಕದ ವಾದ ವಿವಾದಗಳ ನಿವಾರಣೆಯಾಗದೆಂದು ಹಿಂದುಸ್ಥಾನದ ದೃಢ ವಿಶ್ವಾಸವಿರುವದೆಂಬ ಮಾತನ್ನು ಸ್ವಾತಂತ್ರ್ಯ ಪ್ರಾಪ್ತಿಯಾಗುತ್ತಲೇ ನಮ್ಮ ಧುರೀಣರು ಲೋಕಕ್ಕೆ ಸಾರಬಹುದೆಂದು ಆಶಿಸಲಾಗಿತ್ತು. ಆ ಆಶಭಂಗವಾಗಿದೆ. ಆದ್ದರಿಂದ, ರಾಷ್ಟ್ರದ ಚಟುವಟಿಕೆಯಲ್ಲಿ ಜನತೆಯು ಹೆಚ್ಚು ಆಸಕ್ತಿ ತೋರುವ ಮತ್ತು ನಮ್ಮ ರಾಷ್ಟ್ರದ ಮುಂದಿಡಲಾದ ಹಿಂಸಾತ್ಮಕ ಯೋಜನೆಗಳನ್ನು ತಡೆಗಟ್ಟುವ ಕಾಲವೀಗ ಸನ್ನಿಹಿತವಾಗಿದೆ.

ಜೆ. ಸಿ. ಕುಮಾರಪ್ಪ.

ಕುದಿವ ಹೈದರಾಬಾದ

ಸರ್ ವಿರ್ಝಾ ಇಸ್ಮಾಯಿಲರು ನಿಜಾಮರಿಗೆ ತಿಳಿಹೇಳಿ ಅವರ ಸರ್ವನಾಶವನ್ನು ತಪ್ಪಿಸಲು ಮತ್ತೊಮ್ಮೆ ವಿಶ್ವಪ್ರಯತ್ನಮಾಡಿ ಮತ್ತೆ ವಿಫಲರಾಗಿದ್ದಾರೆ. ಸ್ವತಃ ಮಿರ್ಝಾರೇ ಹೇಳುವಂತೆ ನಿಜಾಮರು ಈಗ ತಾವೇ ಪ್ರೋತ್ಸಾಹಿಸಿ ಬೆಳೆಸಿದ ರಜಾಕಾರ ಮುಖಂಡರ ಹಿಡಿತದಲ್ಲಿ ಸಿಕ್ಕು ಅಸಹಾಯರಾಗಿದ್ದಾರೆಂದು ತಿಳಿಯುತ್ತದೆ. ಇನ್ನು ಕೆಲವರು ಇದಕ್ಕೆ ವಿಪರೀತವಾಗಿಯೂ ಹೇಳುತ್ತಾರೆ. ಕಾಶೀಂ ರಜ್ವಿಯೂ ರಜಾಕಾರರೂ ಹೈದರಾಬಾದದ ರಾಜಕಾರಣದಲ್ಲಿ ಕೇವಲ ಬೆದರುಗೋಲುಗಳಂತಿದ್ದೂ ನಿಜಾಮರೇ ಎಲ್ಲಕ್ಕೂ ಹೊಣೆಯೆಂದೂ ಹೇಳಲಾಗುತ್ತಿದೆ. ಅದೇನೇ ಇದ್ದರೂ ಯಾರ ಹಿತವಾದವನ್ನೂ ಲೆಕ್ಕಿಸದೆ ವಿನಾಶದತ್ತ ನಿಜಾಮರು ಭರದಿಂದ ಸಾಗುತ್ತಿದ್ದಾರೆ. ಸರ ಮಿರ್ಝಾರ ಸಂಧಾನದ ಫಲವೆಂದರೆ ದಿಲ್ಲಿಯಲ್ಲಿ ಹೈದ್ರಾಬಾದದ ಎಜಂಟ ಜನರಲರಾದ ನವಾಬ ಜೈನ ಯಾರ ಜಂಗರ ಪದಚ್ಯುತಿ ಅಥವಾ ರಾಜೀನಾಮೆ. ನಿಜಾಮರ ಆಳ ಮೇಳವಿಲ್ಲದ ಧೋರಣಕ್ಕೆ ಬೇಸತ್ತೋ ಅಥವಾ ಬ್ರಿಟನದಿಂದ ಬಂದ ಒತ್ತಡಕ್ಕೋ ಹೈದರಾಬಾದದ ಮುಖ್ಯ ಸೇನಾಪತಿ ಎಡ್ರೋಜರೂ ರಾಜೀನಾಮೆ ಕೊಟ್ಟಿದ್ದಾರೆ. ಅಂತೂ ಸಂಸ್ಥಾನದಲ್ಲಿ ಇಂದು ಅರಾಜಕತೆಯುಂಟಾಗಿ ಹೋಗಿದೆ. ಹೈದರಾಬಾದದ ಮಂತ್ರಿಗಳು ತಮಗೆ ಪ್ರತಿಕೂಲರಾದವರ ಶಿರಚ್ಛೇದವನ್ನೇ ಮಾಡುವದಾಗಿ ಕೂಗಾಟವೆಬ್ಬಿಸಿದ್ದಾರೆ. ಇತ್ತೀಚಿಗೆ ಹೈದರಾಬಾದದ ಮುಖ್ಯಮಂತ್ರಿ ಮೀರ ಲಾಯಕ ಅಲ್ಲಿಯವರು ತಮ್ಮ ಒಂದು ಭಾಷಣದಲ್ಲಿ, ಹೈದರಾಬಾದದ ವಿಷಯದಲ್ಲಿ ಭಾರತವು ಜಾಗಿ ನಡೆಯದಿದ್ದರೆ ಭಾರತದಲ್ಲೆಲ್ಲ ಬರುವ ೫ ವರ್ಷಗಳಾದರೂ ಅರಾಜಕತೆ ಉಂಟು ಮಾಡುವಷ್ಟು ಸಿದ್ಧತೆ ತಮ್ಮಲ್ಲಿರುವದೆಂದು ಹೆಮ್ಮೆ ಕೊಚ್ಚಹೋಗಿ ತಮ್ಮ ಅಪರಾಧವನ್ನು ತಾವೇ ಸಾರಿ ಹೇಳಿದ್ದಾರೆ.

ಒಕ್ಕೂಟದ ಗಡಿಯಲ್ಲಿ ಪೋಲೀಸರೂ ರಜಾಕಾರರೂ ಮಾಡುತ್ತಿರುವ ಅತಿಕ್ರಮಣವನ್ನು ನಿಯಂತ್ರಿಸುವದು ಅನಿವಾರ್ಯವಾಗಿ ಹಿಂದೀ ಸೈನಿಕರು ಈ ೮-೧೦ ದಿನಗಳಲ್ಲಿ ನಾನಜ ಮತ್ತು ಯಳಸಂಗ ಸೇಂದ್ರಿ ಎಂಬ ನಿಜಾಮರ ಮೂರು ಹಳ್ಳಿಗಳನ್ನು ಆಕ್ರಮಿಸಿ ಬಿಟ್ಟಿದ್ದಾರೆ. ಈಕೆಲ ದಿನಗಳಲ್ಲಿ ನೂರಾರು ಹಳ್ಳಿಗಳು ಸ್ವಾತಂತ್ರ್ಯ ಸಾರಿ ನಿಜಾಮ ದಬ್ಬಾಳಿಕೆಯನ್ನು ಪ್ರತಿಭಟಿಸಿವೆ.

ತಾ. ೧೦ ರಂದು ನಿಜಾಮ ಸರಕಾರದ ಇನ್ನೊಬ್ಬ ಮಂತ್ರಿಗಳಾದ ಶ್ರೀ ಮಲ್ಲಿಕಾರ್ಜುನಪ್ಪನವರೂ ಅವರ ಜೊತೆಗೆ ಶಾಸನ ಸಭೆಯ ೭ ಜನ ಲಿಂಗಾಯತ ಸದಸ್ಯರೂ ರಾಜೀನಾಮೆ ಸಲ್ಲಿಸಿದ್ದಾರೆ.

ಓಡಾಡುವ ರೇಲ್ವೆ ಗಾಡಿಗಳ ಮೇಲೆ ರಜಾಕಾರರ ದಾಳಿಗಳು ನಡೆದೇ ಇವೆ. ತಾ ೭ರಂದು ನಸುಕಿನಲ್ಲಿ ಹೈದರಾಬಾದ ಪ್ರದೇಶದಲ್ಲಿಯ ಗಂಗಿನೇನಿ ಮತ್ತು ಯಿರುಪಾಳ್ಯಂ ಸ್ಟೇಶನಗಳ ನಡುವೆ ಮುಂದರು ೧ ನೇ ೨ ನೇ ತರಗತಿಯ ೨ ಡಬ್ಬಿಗಳನ್ನೂ ಟಪಾಲಡಬ್ಬಿಯನ್ನೂ ಸುಟ್ಟಿದ್ದಾರಲ್ಲದೆ ಆರ್. ಎಂ. ಎಸ್‌ದ ಸಾರ್ಟರನನ್ನು ಗುಂಡಿಕ್ಕಿ ಗಾಯಗೊಳಿಸಿದ್ದಾರೆ. ಇದರಂತೆ ತಾ ೫ ರಂದು ಗಾಣಗಾಪುರದ ಬಳಿ ಕುಲಾಲಿ ಎಂಬ ಸ್ಟೇಶನದಲ್ಲಿ ಮದ್ರಾಸ ಎಕ್ಸ್‌ಪ್ರೆಸ್‌ದ ಮೇಲೆ ರಜಾಕಾರರು ದಾಳಿ ಮಾಡಬೇಕೆಂಬ ಹೊಂಚು ದ್ರಾಯವರನ ಪ್ರಸಂಗಾವಧಾನದಿಂದ ತಪ್ಪಿತೆಂದು ವರದಿಯಾಗಿದೆ. ಆಲಂಪುರ ಎಂಬಲ್ಲಿಂದ ಮುಂದೆ ತೊಂದರೆ ಸಂಭವಿಸುವದೆಂದು ಮುಂಗಂಡು ದ್ರೋಣಾಚಲಂ ಸಿಕಂದರಾಬಾದದ ಗಾಡಿಯಲ್ಲಿದ್ದ ಜನರನ್ನೆಲ್ಲ ಕರ್ನೂಲ ಸ್ಟೇಶನ್ನಿನಲ್ಲಿಯೇ ರೇಲ್ವೆ ಅಧಿಕಾರಿಗಳು ೮ ನೇ ತಾ.ದೆ ಇಳಿಸಿಬಿಟ್ಟರು.

ಪ್ರೊ. ಬನಸಾಲಿಯವರು ಹೈದರಾಬಾದದ ಹಳ್ಳಿಗಳಲ್ಲಿ ಸಂಚರಿಸಿ ರಜಾಕಾರರ ಅಮಾನುಷ ಅತ್ಯಾಚಾರಗಳನ್ನು ಕಣ್ಣಾರೆ ಕಂಡು ತಾ ೯ ರ ಮಧ್ಯ ರಾತ್ರಿಯಿಂದ ಮತ್ತೆ ಆಮರಣ ಉಪವಾಸ ಕೈಕೊಂಡಿದ್ದಾರೆ.

ಇತ್ತ ಮುಂಬಯಿ ಪ್ರಾಂತದ ಮುಖ್ಯ ಪ್ರಧಾನರು ಧಾರವಾಡ ವಿಜಾಪೂರ ಜಿಲ್ಲೆಗಳ ಗಡಿಯಲ್ಲಿ ಅಡ್ಡಾಡಿ ಅಲ್ಲಿಯ ಜನರ ಸ್ವಸಂರಕ್ಷಣೆಯ ಸಿದ್ಧತೆಯನ್ನು ಕಂಡು ಸಂತೋಷಗೊಂಡರಲ್ಲದೆ ಪ್ರಸಂಗಬಂದರೆ ಗಡಿಯ ರಕ್ಷಣೆಗೆ ಸ್ವತಃ ತಾವೇ ನಿಂತು ಪ್ರಾಣಾರ್ಪಣ ಮಾಡುವದಾಗಿ ಹೇಳಿ ಹುರಿದುಂಬಿಸಿ ಬಂದಿದ್ದಾರೆ. ತಾ ೯ ರಂದು ಹಿರಿಯೋಲಗದಲ್ಲಿಯೂ ಹೈದರಾಬಾದದ ಬಗ್ಗೆ ತಕ್ಕ ಕ್ರಮ ಕೈಕೊಂಡಿರುವದಾಗಿ ಮುಖ್ಯ ಮಂತ್ರಿ ಜವಾಹರಲಾಲರೂ ಉಪಮುಖ್ಯ ಮಂತ್ರಿ ಮತ್ತು ಸಂಸ್ಥಾನ ಮಂತ್ರಿ ಸರದಾರ ಪಟೇಲರೂ ಹೇಳಿರುವರಲ್ಲದೆ ಹೈದರಾಬಾದದ ಬಗ್ಗೆ ಒಂದು ಶ್ವೇತ ಪತ್ರವನ್ನೂ ಹೊರಡಿಸಿದ್ದಾರೆ. (ಅದನ್ನು ಬೇರೆಡೆ ಕೊಡಲಾಗಿದೆ).

ಹಿಂದುಸ್ಥಾನದ ಹಿರಿಯೋಲಗ

ಹಿಂದುಸ್ಥಾನದ ಹಿರಿಯೋಲಗದ ಶರದೃತುವಿನ ಅಧಿವೇಶನವು ತಾ ೯ ರಿಂದ ದಿಲ್ಲಿಯಲ್ಲಿ ಪ್ರಾರಂಭವಾಯ್ತು. ಸರದಾರ ಪಟೇಲರು ದೇಹಾಲಸ್ಯದಿಂದ ಗುಣಹೊಂದಿ ಈ ದಿನ ಸಭೆಗೆ ಬಂದ ಕಾರಣಕ್ಕೆ ಪ್ರಚಂಡ ಜಯಜಯಕಾರವಾಯ್ತು. ಈ ದಿನ ಕಾಶ್ಮೀರದಲ್ಲಿ ಪಾಕಿಸ್ತಾನ ಸೈನಿಕರ ಹೋರಾಟ, ಹೈದರಾಬಾದಕ್ಕೆ ಕತ್ಯತನದಿಂದ ಸಾಗುತ್ತಿದ್ದ ಮದ್ದು ಗುಂಡಿನ ವಿಷಯ ಇವೇ ಮುಖ್ಯವಾಗಿದ್ದವು. ಇಂದಿನ ಪ್ರಶ್ನೋತ್ತರದಲ್ಲಿ ಕರ್ನಾಟಕದ ಪ್ರತಿನಿಧಿ ಶ್ರೀ ದಿವಾಕರ ರಂಗರಾಯರೂ ಭಾಗವಹಿಸಿದ್ದರು. ಪಾಕಿಸ್ತಾನದ ಸೈನ್ಯ ಕಾಶ್ಮೀರದಲ್ಲಿ ಭಾಗವಹಿಸಿದೆ ಎಂಬ ಸುದ್ದಿಯನ್ನು ಪಾಕಿಸ್ತಾನ ಸರಕಾರವು ಈಗೆರಡು ದಿನಗಳ ಹಿಂದೆ ನಿರಾಕರಿಸಿದ್ದು ಸರಕಾರಕ್ಕೆ ಗೊತ್ತೇ ಎಂದು ಇವರು ಕೇಳಿದ ಒಂದು ಪ್ರಶ್ನೆಗೆ ಪಂ. ಜವಾಹರಲಾಲರು ಉತ್ತರ ಕೊಡುತ್ತ ಈ ನಿರಾಕರಣೆಯ ಮೂಲಕವೇ ಪಾಕಿಸ್ತಾನವು ತಮ್ಮ ಸೈನ್ಯ ಕಾಶ್ಮೀರದಲ್ಲಿರುವದನ್ನು ಹೆಚ್ಚುಕಡಮೆ ಒಪ್ಪಿಕೊಂಡಂತಾಗಿದೆ ಎಂದರು.

ತಾ ೧೦ ಕ್ಕೆ ಸಂಸ್ಥಾನ ಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು ಹೈದರಾಬಾದದ ಬಗ್ಗೆ ಶ್ವೇತಪತ್ರವನ್ನು ಮಂಡಿಸುತ್ತ ಈ ಬಗ್ಗೆ ಉಗ್ರ ಕ್ರಮ ಕೈಕೊಳ್ಳದೆ ನಿರ್ವಾಹವಿಲ್ಲವೆಂದು ಹೇಳಿ ಭಾರತ ಸರಕಾರದ ಧೋರಣವನ್ನು ಸ್ಪಷ್ಟಪಡಿಸಿದರು.

ತಾ ೧೧ ರಂದು ಪಂಡಿತ ಗೋವಿಂದ ಮಾಲವೀಯರು ಅತಿಪ್ರಸರಣವನ್ನು ತಡೆಗಟ್ಟಬೇಕೆಂಬ ಬಗ್ಗೆ ಗೊತ್ತುವಳಿ ಮಂಡಿಸಿದರು. ಈ ಬಗ್ಗೆ ನಡೆದ ಚರ್ಚೆಯ ಕಾಲಕ್ಕೆ, ಜನತೆಯ ಸ್ಥಿತಿಗತಿಗನುರೂಪವಾದ ಆರ್ಥಿಕ ಧೋರಣದನ್ನು ರೂಪಿಸಲು ಪ್ರತ್ಯೇಕ ಒಬ್ಬ ಮಂತ್ರಿಯೇ ಬೇಕೆಂದು ಪಂ. ಜವಾಹರಲಾಲರು ಹೇಳಿದರು. ಡಾ. ಶಾಮಪ್ರಸಾದರು ಬಟ್ಟೆಯ ಪುನರ್ನಿಯಂತ್ರಣವನ್ನು ಸಮರ್ಥಿಸಿ ಮಾತನಾಡಿದರು. ಸರಕಾರೀ ನೌಕರಿಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಜಾತಿ, ಉಪಜಾತಿ ಧರ್ಮ ಇವುಗಳನ್ನು ಮಾನ್ಯಮಾಡಕೂಡದೆಂಬ ಅಭಿಪ್ರಾಯದ ಗೊತ್ತುವಳಿಯೊಂದನ್ನು ಶ್ರೀ ದಿವಾಕರ ರಂಗರಾಯರು ಮಂಡಿಸಿದರು. ಸರಕಾರದವರೂ ಈ ತತ್ವಕ್ಕೆ ಒಪ್ಪುವರೆಂದೂ ಈ ಬಗ್ಗೆ ಶಕ್ಯಾಶಕ್ಯತೆಯನ್ನು ವಿಚಾರಿಸಲು ಒಂದು ಸಮಿತಿಯನ್ನು ನಿಯಮಿಸಲಾಗುವದೆಂದೂ ಸರದಾರ ವಲ್ಲಭಭಾಯಿಯವರು ಆಶ್ವಾಸನ ಕೊಟ್ಟಿದ್ದರಿಂದ ಶ್ರೀ ದಿವಾಕರರು ತಮ್ಮ ಈ ಗೊತ್ತುವಳಿಯನ್ನು ಹಿಂದಕ್ಕೆ ತೆಗೆದುಕೊಂಡರು. ಈ ದಿನದ ಚರ್ಚೆಯ ಒಂದು ಸಂದರ್ಭದಲ್ಲಿ ಶ್ರೀ ಅನಂತಶಯನಂ ಅಯ್ಯಂಗಾರರು ದೇಶವನ್ನು ಸಂತಪ್ತನ್ನುದ್ಧರಿಸಲು ವದಾಗದಿದ್ದರೆ ದಯವಿಟ್ಟು ಹೊರಬಿದ್ದು ಬನ್ನಿರಿ" ಎಂಬುದಾಗಿ ಸರಕಾರವನ್ನು ಕಟುವಾಗಿ ಟೀಕಿಸಿ ಮಾತನಾಡಿದರು. ರಾಜರ ಖಾಸಗಿ ವೆಚ್ಚಕ್ಕೆ ಪ್ರಜೆಗಳ ಸಮ್ಮತಿಯುಂಟು ಎಂಬ ಬಗ್ಗೆಯೂ ಇಂದು ಪ್ರಶ್ನೋತ್ತರಗಳಾದವು. ಈ ಪ್ರಶ್ನೆಗಳಿಗೆ ಸರದಾರ ಪಟೇಲರೇ ಉತ್ತರ ಹೇಳಿದರು.

(೯ನೆಯ ಪುಟದಿಂದ)

ವನಸ್ಪತಿ ತುಪ್ಪ ಹೆರೆಹೆರೆಯಾಗಿರುವದರಿಂದಲೇ ನಗರವಾಸಿಗಳು ಶುದ್ಧ ಮಾಡಿದ ಎಣ್ಣೆಯ ಬದಲು ಅದನ್ನು ಅಪೇಕ್ಷಿಸುವರೆಂದು ಕೆಲವರ ವಾದ. ತುಪ್ಪವನ್ನು ತಿನ್ನದೆಯೂ ಅಂಥದೇ ವಸ್ತುವನ್ನುಂಡೆವೆಂದು ಸಮಾಧಾನ ಹಚ್ಚಿಕೊಳ್ಳುವರಂತೆ ಅವರು ತಾವು ತುಪ್ಪವನ್ನೇ ತಿಂದೆವೆಂಬ ನಂಬಿಕೆಯನ್ನು ಕಲ್ಪಿಸಿಕೊಳ್ಳುವ ಆಶೆ ಅವರಿಗೆ. ಇಂಥ ಜನರು ಇರುವದೇ ನಿಜವಾದರೆ ಅವರಿಗೆ ಅವರ ತಪ್ಪನ್ನು ಮನಗಾಣಿಸಿ ಕೊಡುವದು ಉಚಿತವಾದೀತಲ್ಲದೆ ಅವರಿಗೆ ಹಿತಕಾರಿಯಲ್ಲದ ವಸ್ತುವನ್ನು ಒದಗಿಸುವದಲ್ಲ. ನಿಜವಾದ ತುಪ್ಪವನ್ನು, ಅದರ ಬೆಲೆ ಹೆಚ್ಚಾದ ಕಾರಣ, ಬಳಸಲಾರದವರು ಎಣ್ಣೆಯನ್ನು ಎಣ್ಣೆಯ ರೂಪದಲ್ಲೇ ಉಪಯೋಗಿಸಬೇಕು ಹೊರತು ತುಪ್ಪದಂತೆ ಕಾಣುವ, ಆದರೂ ಎಣ್ಣೆಗಿಂತಲೂ ಕೀಳ್ತರವಾಗಿರಬಹುದಾದ ರೂಪದಲ್ಲಲ್ಲ. ಅಧುನಿಕ ವ್ಯಾಪಾರಕ್ಕೆ ನಾವು ಹೇಗೆ ಅನುಮತಿ ಕೊಡಲಾರೆವೊ ಹಾಗೆಯೆ ಘನೀಕೃತ ಎಣ್ಣೆಗಳ ವ್ಯಾಪಾರಕ್ಕೂ ಎಡೆಕೊಡಬಾರದು.

ಹೊಸದಿಲ್ಲಿ ೩-೮-೪೮ — ಕಿ. ಘ. ಮಶ್ರೂವಾಲಾ

ಸ್ವಾತಂತ್ರ್ಯದ ಒಂದು ವರ್ಷದಲ್ಲಿ ಒಕ್ಕಲುತನದ ಸುಧಾರಣೆ

ಭಾರತ ದೇಶಕ್ಕೆ ಒಕ್ಕಲತನವೇ ಬೆನ್ನೆಲುಬು. ಉದ್ಯೋಗಗಳನ್ನು ನಾವೆಷ್ಟೇ ಬೆಳೆಸಿದರೂ ಒಕ್ಕಲತನಕ್ಕೆ ಇಲ್ಲಿ ಎಲ್ಲಕ್ಕಿಂತ ಮಹತ್ವ ಉಳಿಯುತಕ್ಕದ್ದಿದೆ. ಒಕ್ಕಲತನದ ದೇಶವಾಗಿಯೂ ಈ ದೇಶದಲ್ಲಿ ಆಹಾರದ ತೀಕ್ಷ್ಣವಾದ ಕೊರತೆಯುಂಟಾಗಿ ೧೯೪೩ ರಲ್ಲಿ ಲಕ್ಷಾಂತರ ಮಾನವ ಜೀವಿಗಳು ಜೀವಕ್ಕೆರವಾಗಬೇಕಾಯಿತು. ಆದುದರಿಂದ ಆಹಾರ [illegible] ವಿದೇಶದ ಆಮದಿನ ಮೇಲೆ ನಾವು ಜೀವಿಸಬೇಕಾಗುವಂತಿಲ್ಲ. [illegible] ಬಂಗಾಲದಲ್ಲಿ [illegible].

[illegible] ಕೋಟಿ ಭಾರತೀಯರ ಜೀವನದ ಹೊಣೆ ಹೊತ್ತ ಸ್ವತಂತ್ರ ಸರಕಾರ ಒಕ್ಕಲತನದ [illegible] ವಿಶೇಷ ಗಮನವಿತ್ತದ್ದು ಅಸ್ವಾಭಾವಿಕವಲ್ಲ.



[illegible]

ಶ್ರೀ [illegible]

[illegible] ಸರಕಾರ [illegible] ಮಹತ್ವ ಕೊಟ್ಟಿತ್ತು. ನಿಯಂತ್ರಿತ ಬೆಲೆಗಳಲ್ಲಿ ರೈತನಿಂದ ಧಾನ್ಯವನ್ನು ಒತ್ತಾಯದಿಂದ ತೆಗೆದುಕೊಂಡು ರೈತರಲ್ಲದವರಿಗೆ ನಿಯಂತ್ರಿತ ಬೆಲೆಗಳಲ್ಲಿ ಹಂಚುವದರಲ್ಲಿ ಅದರ ಪ್ರಯತ್ನಗಳು ಅಡಕವಾಗಿದ್ದವು. ಆದರೆ ಈ ಬಗೆಯಾಗಿ ನಿಯಂತ್ರಿತ ಬೆಲೆಗಳಲ್ಲಿ ಧಾನ್ಯವನ್ನೊಪ್ಪಿಸುವ ವಿಷಯ ರೈತರಿಗೆ ಅಪ್ರಿಯವಾಗಿದ್ದು ಅದರಿಂದ ತಪ್ಪಿಸಿಕೊಳ್ಳಲು ಅವರು [illegible] ಹಾಕತೊಡಗಿದರು. ಜನಪ್ರಿಯ ಸರಕಾರಗಳು ಬಂದ ಮೇಲಂತೂ ರೈತರ ವಿರೋಧ ಬಲವತ್ತರವಾಯಿತು. ಗಾಂಧೀಜಿಯೂ ನಿಯಂತ್ರಣಗಳು ಹೋಗಬೇಕೆಂದು ಒತ್ತಾಯ ಮಾಡಿದರು. ಮೇಲಾಗಿ ಕೊರತೆಯ ಪ್ರಮಾಣ ಹೆಚ್ಚಾಗುತ್ತ ಹೋಗಿ ಸೀದಾ ಪ್ರಮಾಣವನ್ನು ಇಳಿಸಲೇಬೇಕಾಯಿತು. ಕೊನೆಗೆ ಸರಕಾರ ಆಹಾರ ಧಾನ್ಯಗಳ ಸಾವಕಾಶ ವಿನಿಯಂತ್ರಣವನ್ನು ಕೈಕೊಂಡಿತು.

ಆಹಾರಧಾನ್ಯ ಸಲಹೆ ಸಮಿತಿಯವರು ಕೂಡಲೆ ವರ್ಷಕ್ಕೆ ಒಂದು ಕೋಟಿ ಟನ್ ಧಾನ್ಯಗಳನ್ನು ಹೆಚ್ಚು ಬೆಳೆಯಬೇಕೆಂದು ಸೂಚಿಸಿದ್ದಾರೆ. ರೈತನಿಗೆ ಉತ್ತೇಜನವಿಲ್ಲದಿದ್ದರೆ ಇದು ಸಾಧ್ಯವಿದ್ದಿಲ್ಲವಾದುದರಿಂದಲೂ ನಿಯಂತ್ರಣಗಳನ್ನು ತೆಗೆಯಬೇಕಾಯಿತು.

ಸಾಲ, ಸಹಾಯಧನ

ಒಕ್ಕಲತನದ ವಿಷಯ ಪ್ರಾಂತಿಕ ಸರಕಾರಗಳಿಗೆ ಸೇರಿದ್ದು. ಕೇಂದ್ರ ಸರಕಾರ ಸಲಹೆ, ಸಹಾಯಗಳನ್ನಷ್ಟೆ ಕೊಡಬಹುದು. ಆಹಾರದ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಕೇಂದ್ರ ಸರಕಾರ ಪ್ರಾಂತಿಕ ಸರಕಾರಗಳಿಗೆ ಈ ಕೆಳಗಿನಂತೆ ಸಹಾಯ ನೀಡಿತು:

ಉದ್ದೇಶ	ಸಾಲ	ಸಹಾಯ
	(ಲಕ್ಷ ರೂಪಾಯಿ)	
ನೀರಾವರಿ	೬೨	೧೦೭
ಭೂಸುಧಾರಣೆ	೧೫	೭೫
ಗೊಬ್ಬರ	೨೪	೨೭
ಬೀಜ	೨೬	೧೭
ಮೀನದ ಉತ್ಪಾದನೆ	೨	೨.೫

ಹಣ್ಣು ಹಂಪಲು	—	೨.೭
ಹಾಲಿನ ಕೈಗಾರಿಕೆ	—	೨೦.೫
ದನಕರು	೪	೪
[illegible]	[illegible]	[illegible]

೧೯೪೭—೪೮ ರ ವರ್ಷ ಆಹಾರ ಉತ್ಪಾದನೆಯ ದೃಷ್ಟಿಯಿಂದ ಹಿಂದಿನ ವರ್ಷಗಳಿಗಿಂತ ಉತ್ತಮವಾಗಿತ್ತೆಂದು ಹೇಳಬಹುದು. ೧೯೪೬-೪೭ ರಲ್ಲಿ ಅಕ್ಕಿ, ಜೋಳ, ಸಜ್ಜೆ, ಗೋವಿನಜೋಳ, ಗೋದಿ, ಬಾರ್ಲಿ ಮೊದಲಾದ್ದು ಸೇರಿ ೩,೧೪,೩೩,೦೦೦ ಟನ್ ಬೆಳೆದಿದ್ದರೆ ಈ ವರ್ಷ (೧೯೪೭-೪೮) ೪,೦೪,೧೯,೦೦೦ ಟನ್ ಬೆಳೆದಿದೆ. ಒಟ್ಟಿನ ಮೇಲೆ ೧೦ ಲಕ್ಷ ಟನ್ ಉತ್ಪಾದನೆ ಹೆಚ್ಚಾಗಿದೆಯೆಂದಾಯಿತು.

ಪಡಭೂಮಿಯ ಸಾಗುವಳಿ

ಆದರೆ ನಮಗೆ ಬೇಕಾಗಿದೆ ೧೦೦ ಲಕ್ಷ ಟನ್ ಹೆಚ್ಚಳ. ಇದು ಕೇವಲ ಈಗಿದ್ದ ಭೂಮಿಯ ಸಾಗುವಳಿಯಿಂದ ದೊರಕುವದು ಕಠಿನ. ಅದುದರಿಂದ ಈ ವರೆಗೆ ಸಾಗುವಳಿಯಾಗದಿದ್ದ ಭೂಮಿಯನ್ನು ಸಾಗುವಳಿಗೆ ತರುವದು ಅತ್ಯವಶ್ಯವೆನಿಸಿತು. ಇದಕ್ಕಾಗಿ ಈಗಾಗಲೆ ಕ್ರಮಗಳನ್ನು ಕೈಕೊಳ್ಳಲಾಗಿದೆ ೧೯೪೭ ಡಿಸೆಂಬರದಲ್ಲಿ ಪೂರ್ವ ರಾಷ್ಟ್ರಗಳಲ್ಲೆ ಅತಿದೊಡ್ಡದೆನಿಸಿದ ಪಡಭೂಮಿಯ ಸಾಗುವಳಿಯ ಉಪಕ್ರಮವನ್ನು ಕೇಂದ್ರ ಒಕ್ಕಲತನ ಮಂತ್ರಿ ಕಚೇರಿ ಪ್ರಾರಂಭಿಸಿತು. [illegible]

[illegible] ಪರಿಶೀಲನ ನಡೆಸಲು ಕಾಲ ಬೇಕಾಗುವದರಿಂದಲೂ ಮುಂದಿನ ೫—೬ ವರ್ಷಗಳಲ್ಲಿ ಈ ಪ್ರಕಾರ ೬೦ ಲಕ್ಷ ಎಕರೆಗಿಂತ ಹೆಚ್ಚು ಪಡಭೂಮಿಯನ್ನು ಕೃಷಿಯೋಗ್ಯಮಾಡುವದು ಸಾಧ್ಯವಾಗಲಾರದು.

ಇದಲ್ಲದೆ ನೀರಾವರಿ ಮೂಲಕ ನದಿಗಳ ನೀರನ್ನು ಸಾಗುವಳಿಗೆ ಉಪಯೋಗಿಸುವ ದೊಡ್ಡ ಯೋಜನೆಗಳೂ ಸಿದ್ಧವಾಗಿವೆ. ಅನೇಕ ದೊಡ್ಡ ನದಿಗಳನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಉಪಯೋಗಿಸುವ ಯೋಜನೆಗಳು ಸರಕಾರದ ದೃಷ್ಟಿಪಥದಲ್ಲಿವೆಯಷ್ಟೇ ಅಲ್ಲ, ದಾಮೋದರ ಕಣಿವೆ (ಬಂಗಾಲ-ಬಿಹಾರ) ಹಾಗು ಹಿರಾಕುಡ ಕಣಿವೆ (ಓಡಿಸಾ) ಯೋಜನೆಗಳ ಕೆಲಸ ಈಗಾಗಲೆ ಪ್ರಾರಂಭವಾಗಿದೆ. ಈ ಯೋಜನೆಗಳಿಂದ ಮುಂದಿನ ೫ ವರ್ಷಗಳಲ್ಲಿ 'ಕೃಷಿಗೆ ಸಿದ್ಧವಾಗುವ ಭೂಮಿಗಳಿಂದ ವರ್ಷಕ್ಕೆ ೪೦ ಲಕ್ಷ ಟನ್ ಉತ್ಪಾದನೆ ಹೆಚ್ಚಬಹುದು. ಒಕ್ಕಲತನ ಸುಧಾರಣೆಯಿಂದ ೩೦ ಲಕ್ಷ ಟನ್ ಮತ್ತು ಪಡಭೂಮಿಯ ಸಾಗುವಳಿಯಿಂದ ೩೦ ಲಕ್ಷ ಟನ್ ಹೀಗೆ ೫ ವರ್ಷದಲ್ಲಿ ೧೦ ಕೋಟಿ ಟನ್ ಉತ್ಪಾದನೆ ಹೆಚ್ಚಿಸುವದು ಸರಕಾರದ ಉದ್ದೇಶ.

ದೇಶದ ಮೂಲಭೂತ ಉತ್ಪಾದಕನಾದ ರೈತನ ವಿಷಯದಲ್ಲಿ ಸರಕಾರದ ವರ್ತನೆ ಬದಲಾದುದಕ್ಕೆ ನಗರಗಳ ಮಲದಿಂದ ಗೊಬ್ಬರವನ್ನು ತಯಾರಿಸುವದಕ್ಕೆ ಅದು ಕೊಡುತಿರುವ ಪ್ರಾಶಸ್ತ್ಯವೇ ಸಾಕ್ಷಿ. ಇಂದು ೨೨,೫೪೩ ಹಳ್ಳಿ ಕೇಂದ್ರಗಳಲ್ಲಿ ೧೨,೫೦,೦೦೦ ಟನ್ ಮಲದ ಗೊಬ್ಬರ ಉತ್ಪನ್ನವಾಗುತಿದೆ. ಇವಲ್ಲದೆ ಕೃತಕ ಗೊಬ್ಬರದ ಉತ್ಪಾದನೆಯನ್ನೂ ಇನ್ನು ಮೂರು ವರ್ಷಗಳಲ್ಲಿ ಹತ್ತು ಪಟ್ಟಿಗಿಂತಲೂ ಹೆಚ್ಚು ವಿಸ್ತರಿಸುವ ಯೋಜನೆಯಿದೆ.

● ಸರ್ ಮಿರ್ಝಾ ಇಸ್ಮಾಯಿಲ್ ಶಾ [illegible] ದಿಲ್ಲಿಯಿಂದ ಮದ್ರಾಸಕ್ಕೆ ಹೋಗಿ [illegible] ಮುಂಜಾನೆ ವಿಮಾನ ಮೂಲಕ ಬೆಂಗಳೂರಿಗೆ ಹೊರಟರು.

ರೂಪರಂಗ

"ನತೀಜಾ"

"ನತೀಜಾ" ಅಥವಾ ಪರಿಣಾಮವೆಂಬುದು ಬಾಂಬೇ ಟಾಕೀಸಿನ ತಯಾರಿಕೆ. ಯಾಕೂಬ್, ಶಾಮೀಮ್, ರೇಹನಾ ಮುಂತಾದವರು ನಟ [illegible] ಕರು.



[illegible] ಸುರಯ್ಯಳ ಪಾತ್ರದಲ್ಲಿ ರೇಹನಾ

ಅಸ್ಲಾಂ ಒಬ್ಬ ಧನವಂತನ ಮಗ. ಧನವಂತಿಕೆಯ ದುಂದುಗಾರಿಕೆಯನ್ನು ಚಿಕ್ಕತನದಿಂದ ತಂದೆಯ ಮೂಲಕ ಕಲಿತು ಅವನು ಜೋಹ್ರಎಂಬ ಸೂಳೆಯ ಪಾಶಕ್ಕೆ ಪ್ರಾಯದಲ್ಲಿ ಸಿಲುಕಿ, ನವಾಬಸುತ್ರಿಯಾದ ಸೂರಯ್ಯಳನ್ನು ಮದುವೆಯಾದರೂ ಅವಳ ಮುಗ್ಧ ಪಾತಿವ್ರತ್ಯದಿಂದ ತುಷ್ಟನಾಗದೆ ದವಾಖೋರನಾದನು. ಸೂರಯ್ಯ ತನ್ನ ಮಗು ಸಲೀಮನೊಡನೆ ತಂದೆಯ ಮನೆಗೆ ಹೋಗಿ ಗಂಡನ ದುರ್ವ್ಯಾಪಾರದಿಂದ ಕೊರಗುತ್ತ ಕಾಲಕಳೆದಳಲ್ಲದೆ ಆವನನ್ನು ಒಲಿಸಿಕೊಂಡು ಸನ್ಮಾರ್ಗಕ್ಕೆ ಹಚ್ಚುವ ಹೃದಯ ಶಕ್ತಿ ಬುದ್ಧಿ ಶಕ್ತಿಗಳನ್ನು ಬೆಳೆಸಿಕೊಳ್ಳಲಿಲ್ಲ. ಕಡೆಗೆ ಆ ಮಗುವನ್ನು ಕಳೆದುಕೊಂಡಳು. ಮಗು ಮೆಹಬೂಬನೆಂಬ ಹೆಸರಿಂದ ಮುಂಬಯಿಯ ವರ್ತಕನ ಮನೆಯಲ್ಲಿ ಬೆಳೆದು ಅವನ ಪತ್ನಿಯಿಂದ ತನ್ನ ಅನಾಥತೆಯನ್ನು ಅರಿತು ದುಃಖದಿಂದ ಸಿನೆಮಾದಲ್ಲಿ ಪಾತ್ರವಹಿಸ ಹೋಗಿ (ಚಿಕ್ಕಂದಿನ ಸಂಗಾತಿಯಾಗಿದ್ದ ತನ್ನ ತಾಯಿಯ ಅಣ್ಣನ ಮಗಳಲ್ಲಿಟ್ಟ ಪ್ರೇಮವು ತನ್ನನ್ನು ಗುರುತಿಸದಿದ್ದ ತಾಯಿಯಿಂದಲೇ ಭಂಗ ಹೊಂದಿದ್ದರೂ), ಅಸ್ಲಮನನ್ನು ಬಿಟ್ಟು ಅಲ್ಲಿಗೆ ಓಡಿ ಬಂದು ನಟಿಯಾಗಿದ್ದ ಜೋಹ್ರಳ ಬಲಾತ್ಕಾರ ಪ್ರೇಮಲೀಲೆಯಿಂದ ಬೇಸತ್ತನು. ಅಷ್ಟರಲ್ಲಿ ಪುನಃ ಜಾದುಗಾರಿಕೆಯ ವೃತ್ತಿ ಹಿಡಿದ ಅಸ್ಲಮನು ಜೋಹ್ರಳ ಕಡೆಗೆ ಬಂದು ಅವಳಿಂದ ತಿರಸ್ಕೃತನಾಗಿ ಅವಳನ್ನು ಕೊಂದು ಹೆಂಡತಿ ಮತ್ತು ಮಗನನ್ನು ಗುರುತಿಸಿ ಪಶ್ಚಾತ್ತಾಪದಿಂದ ಪರಿಶುದ್ಧನಾಗಿ ಆತ್ಮಹತ್ಯೆ ಮಾಡಿಕೊಂಡನು.

ಹೆಣ್ಣಿಗೆ ಹೆಣ್ಣೇ ಶತ್ರು; ಅರಸಿಕತೆಯಿಂದ ಗಂಡಿನ ಪ್ರಥಮೋತ್ಸಾಹವನ್ನು ಭಂಗಿಸಿ ಒಲಿಸಿಕೊಳ್ಳುವ ಬುದ್ಧಿಶಕ್ತಿಯಿಲ್ಲದೆ ದಣಿಸಿ, ಅವನ ಅನ್ಯಾಸಕ್ತಿ ಅತಿರೇಕವಾಗಲು ಅವಕಾಶ ಕೊಟ್ಟು, ಅನಂತರ ತನ್ನಂತೆಯೇ ಹೆಣ್ಣಾದ ಸೂಳೆಯ ಅತಿರಸಿಕತೆಯ ಪ್ರೇಮನಾಟಕದ ಮೂಲಕ ನಷ್ಟಹೊಂದಿದ ಗಂಡನ್ನು ಕ್ಷಮಿಸುವ ಮಹಾತ್ಯಾಗ ಮಾಡುವ ಆತ್ಮಘಾತಕ ವೃತ್ತಿಗೆ ಈ ಚಿತ್ರವೊಂದು ನಿದರ್ಶನವಾಗಿದೆ ಅರಸಿಕತೆ, ಬುದ್ಧಿಶೂನ್ಯತೆಗಳನ್ನು ಇಲ್ಲದಂತೆ ಮಾಡಿ ಅತಿರಸಿಕತೆ ಅನಾಗರಿಕತೆಗಳಿಗಿಳಿಯದಂತೆ ಹುಡುಗಿಯರನ್ನು ತರಬೇತು ಮಾಡುವುದು ಗಂಡಿಗಿಂತ ಹೆಣ್ಣಿನ ಮುಖ್ಯ ಕರ್ತವ್ಯ. ಇದನ್ನು

[illegible] ಕೊಡಬೇಕೆಂದು ಈ ಕಥೆ ಬರೆದ ಶ್ರೀ. [illegible] ಆರ್. ನವಾಜರ ಉದ್ದೇಶವೆಂಬುದನ್ನು [illegible] ಕರು ತಿಳಿಯಬಹುದೆಂದು ನಂಬಿಗೆಯಿದೆ.

[illegible] ವಾರಗಳಿಂದ ಮೇಲಿನ ಚಿತ್ರವು [illegible] ಯ 'ರೂಪಂ' ರಂಗದಲ್ಲಿ ಪ್ರದರ್ಶಿಸಲ್ಪಡುತ್ತಿದೆ. ನಾಯಕರು [illegible] ವಿಶಾಲಗೊಳಿಸಿಕೊಳ್ಳಲು ಇದನ್ನು [illegible] ವುದು ಅತ್ಯವಶ್ಯ. ಅಭಿನಯ, ಚಿತ್ರಗ್ರಹಣ ಕಲೆ ಇವೆಲ್ಲ ಸಮಾ[illegible] ಕೆಲವೆಡೆ ಮಾತ್ರ ಅತ್ಯಭಿನಯದ [illegible] ಕಾಣಬಹುದು, ಅಷ್ಟೆ.

—ಕರ್ಮವೀರದ ಪ್ರ[illegible]

"ಶಹನಾಜ"

"ವಶ್ಯಾ ಕಟಾಕ್ಷಮೋಕ್ಷೇ ಜಗ್ರಾಹ [illegible]

ಮಯಾ ತು ಹೃದಯಂ ದತ್ತ್ವಾ ಗೃಹೀತಾ ಮುಷಿತಸ್ಸ್ವರು [illegible]"



[illegible]

"ಶಹಾನಾಜ" ಚಿತ್ರವು ವಹಾಬ ಕಂ[illegible] ತಯಾರಿಕೆ. ಬೇಗಂ ಪ್ಯಾರಾ ಕಥಾನಾಯಿಕೆ ಶ[illegible] ನಾಜಳ ಪಾತ್ರವನ್ನು ಅಲ್ತಾಫನು [illegible] ನಾಯಕನಮುರಾದನ ಪಾತ್ರವನ್ನೂ ವಹಿಸಿದ್ದಾರೆ. [illegible] ಶೇಕರು ದಿಗ್ದರ್ಶಕರು. ಕಳೆದ [illegible] ಹುಬ್ಬಳ್ಳಿಯ "ಡೆಕ್ಕನ್ ಟಾಕೀಜ" [illegible] ಇದನ್ನು ಪ್ರದರ್ಶಿಸಲಾಗುತ್ತಿದೆ.

ರಸಿಕ ಮುರಾದನು ಶ್ರೀಮಂತ [illegible] ದುಃಖಿಂದನೊಬ್ಬನ ಮಗ. ಶಹನಾ[illegible] ಮತ್ತೊಬ್ಬ ವರ್ತಕ ಮುಖಂಡನ ಮಗಳು. ಇವರಿಬ್ಬರಲ್ಲಿ ಗಾಢ ಪ್ರೇಮ ಉಂಟಾ[illegible] ಆದರೆ ಶಹನಾಜಳ ಯೌವನದ ಗರ್ವ [illegible] ಬುದ್ಧಿಶೂನ್ಯತೆಯಿಂದ ಇವರು [illegible] ಅನ್ಯರನ್ನು ಪ್ರೀತಿಸತೊಡಗಿ [illegible] ವಂಚನೆಗೆ ಗುರಿಪಡಿಸಿದ್ದಲ್ಲದೆ, ತಾಯ[illegible] ಯರಿಗೂ ಇವರ ನಡತೆ ಅರ್ಥವಾಗ[illegible] ಇವರನ್ನು ಇವರ ಆಟದ ಪ್ರಿಯ [illegible] ಯರೊಡನೆ ವಿವಾಹ ಮಾಡಲು ನಿಶ್ಚಯಿ[illegible] ಸ್ತಾರೆ. ಅದರಿಂದ ಇವರ ದುಃಖ ದು[illegible] ಧರ್ಮಸಂಕಟದಿಂದ ಪ್ರಾಣಸಂಕಟವು[illegible] ದಲ್ಲದೆ, ಶಹನಾಜಳ ಎಷ್ಟರ ಶಕ್ತಿ [illegible] ಪ್ರೇಮಲೀಲೆಗೆ ಬಲಿಯಾದ [illegible] ಆಕಸ್ಮಿಕ ಮರಣಕ್ಕೆ ಕಾರಣಾಗಿ ಮುಕ್ತಸಾ[illegible] ಸುಲ್ತಾನರು ಮುರಾದನಿಗಾಗಿ ಪರಿತಪಿ[illegible] ನರಳಿ ಕಡೆಗೆ ಅವನ ದುಃಖ [illegible] ಪುನರ್ಮಿಲನ ವಿವಾಹಗಳಿಗೆ [illegible] ಅವಕಾಶಕ್ಕೆ ಸಿಕ್ಕ ಸತ್ತಳು.

—[illegible]ಯ ಪುಟ[illegible]

ವಿವಿಧ ಪ್ರಪಂಚ

ಶುಕ್ರಸ್ತ್ರೀ

ಅಮೇರಿಕದಲ್ಲಿ ಹೆಂಗಸರ ಸ್ವಾತಂತ್ರ್ಯವು ಅನೇಕ ಉದ್ಯೋಗಗಳನ್ನು ಕಲ್ಪಿಸಿಕೊಡುತ್ತಲಿದೆ. ಆದರಿಂದ ಅವರು ಗೃಹ ಮತ್ತು ದಾಂಪತ್ಯಜೀವನದಿಂದ ಮುಕ್ತರಾಗಿ "ಸ್ವತಂತ್ರ" ಜೀವನ ನಡೆಸಲು ಅನೇಕ ವೇಳೆ ಅನುಕೂಲ ಉಂಟಾಗುವಂತಾಯಿತು. ಇಂಥ ('ಬಿಜಿನೆಸ್'—) ಶಾಖೆಗಳಲ್ಲಿ ('ನೌಕರಿ'ಯಲ್ಲಿ) ಶುಕ್ರಸ್ತ್ರೀ ಕೆಲಸವೂ ಒಂದು.

ಶುಕ್ರಸ್ತ್ರೀ ಅಥವಾ Girl Friday ಎಂದರೆ ದಾಸಗಿ "ಕಾರ್ಯದರ್ಶಿನಿ" ಇದ್ದ ಹಾಗೆ. ಅರ್ಥಾತ್ ದೊಡ್ಡ ದೊಡ್ಡ ನೌಕರರ ಕಾರ್ಯಾಲಯಗಳಲ್ಲಿ (ಮನೆಯಲ್ಲಿ ಸಹ) ಅಗತ್ಯವಿರುವ ಎಲ್ಲ ಕಾರ್ಯಗಳೂ ಅತಿ ಸ್ವಾಭಾವಿಕ ವಿಧೇಯತೆಯಿಂದ, ಚಟುವಟಿಕೆಯಿಂದ, ನಾಯಿಗಿಂತ ಹೆಚ್ಚು ಪ್ರಾಮಾಣಿಕತೆಯಿಂದ ನಿರ್ವಹಿಸಿ, ನಿಃಸ್ವಾರ್ಥ ಸೇವೆಯಿಂದ ನ್ಯಾಯಾನ್ಯಾಯ ವಿಮರ್ಶೆಯ ಗೊಡವೆಗೆ ಹೋಗದೆ, ಒಡೆಯ ಹೇಳಿದ್ದನ್ನು ಚಾಚೂ ತಪ್ಪದೆ ನಿರ್ವಹಿಸಿ ಅವನ ಪ್ರೀತಿಗೆ ಪಾತ್ರಳಾಗಿ ಬಡತಿ ಪಡೆಯುವಳು.

ಅಮೇರಿಕದ ಸರಕಾರೀ ಕಚೇರಿಯಲ್ಲಿ (White House) ಈಗ ಈ ಶುಕ್ರಸ್ತ್ರೀಗಳನ್ನು ಎಲ್ಲೆಲ್ಲೂ ಕಾಣಬಹುದು. ಅಧ್ಯಕ್ಷರ ಕೈಕೆಳಗೆ ಕೆಲಸಮಾಡುವ ಪ್ರತಿಯೊಬ್ಬ ಅಧಿಕಾರಿಗೂ ಒಬ್ಬೊಬ್ಬ ಶುಕ್ರಸ್ತ್ರೀ ನೆರವಿಗಾಗಿ ಇರುತ್ತಾಳೆ. ಅವಳು ಅವನ ಭೆಟ್ಟಿಯ ಕಾರ್ಯಕ್ರಮ, ಕಾಗದ ಪತ್ರ, ಟೆಲಿಫೋನಿನ ಕರೆ, ಸಿಗರೇಟು, ಕಾಫಿ, ವಸ್ತ್ರ ಬಟ್ಟೆ— ಈ ಎಲ್ಲವರ ಮೇಲ್ವಿಚಾರಣೆಯನ್ನು ನಡೆಸುತ್ತಾಳೆ. ಅವನ ಗುಟ್ಟುಗುಟ್ಟು ಗಳಿಗೆಯನ್ನೂ ಯಂತ್ರದಂತೆ ಕಾದುಕೊಂಡು ಆ ಕಾಸೂ ಅವನ ಅಗತ್ಯವನ್ನು ಪೂರೈಸಲು ಸಿದ್ಧಳಿರುತ್ತಾಳೆ. ಅಧ್ಯಕ್ಷ ರೂಸ್ವೆಲ್ಟರ "ಮಿಸ್ಸಿ" ಯೆನಿಸಿದ ಮಿಸ್ಸಿ ಲೇಹ್ಯಾಂಡ್ ಎಂಬ ಶುಕ್ರಸ್ತ್ರೀ ಅವರ ಮನಃಸ್ಥಿತಿ ಮತ್ತು ಇಂಗಿತವನ್ನು ಅರಿತು ಅವರಿಗೆ ಸೇವೆ ಸಲ್ಲಿಸುವದರಲ್ಲಿ ನಿಷ್ಣಾತಳೆಂದು ಹೆಸರಾಗಿದ್ದಳು. ರಾಜಕಾರಣದಲ್ಲಿ ಕೂಡ ಅವಳು ಭಾಗ ವಹಿಸಿ ನಿಸ ಕೇಳಿಬೋಬಾಯಿಂದ ಒಡೆಯನಿಗೆ ಅನುಕೂಲ ಪಡಿಸಿಕೊಟ್ಟು ಮಾಡುತ್ತಿದ್ದಳಂತೆ! ಆಧುನಿಕತೆಯ ಹೆಸರಲ್ಲಿ ಭಾರತದಲ್ಲೂ ಇಂಥ ಶುಕ್ರಸ್ತ್ರೀಗಳು ತಯಾರಾಗಿ ಗೃಹಲಕ್ಷ್ಮಿಯರನ್ನು ಸವತಿಮತ್ಸರಕ್ಕೆ ಗುರಿಪಡಿಸುವ ಕಾಲ ಬರಬಹುದೇ?

ವ್ಯಕ್ತಿತ್ವ

ಪ್ರಯತ್ನದಿಂದ ಸಾಧ್ಯವಾಗದುದು ವಿರಳ. ಎಂಬುದನ್ನು ವ್ಯಕ್ತಿತ್ವದ ವಿಷಯವಾಗಿ ಬರೆದ ಡಾ. ಹೆನ್ರಿ ಸಿ. ಲಿಂಕರ ಬರಹವನ್ನು ಓದಿದರೆ ತಿಳಿಯುತ್ತದೆ.

ವ್ಯಕ್ತಿತ್ವವನ್ನು ಬೆಳೆಸಿಕೊಂಡರೆ ಜೀವನದಲ್ಲಿ ಜಯ; ಮನುಷ್ಯ ವರ್ಗಕ್ಕೆ ಅದಕ್ಕಿಂತ ಹೆಚ್ಚಿನ ಸೌಂದರ್ಯವಿಲ್ಲ, ಶಕ್ತಿಯಿಲ್ಲ. ಸಮಾಜ ಜೀವನದಲ್ಲಿ ತಾನು ಸಂತೋಷಪಟ್ಟು ಇತರರನ್ನು ಸಂತೋಷಪಡಿಸಬಲ್ಲ ಕಾರ್ಯದಕ್ಷತೆ ಮತ್ತು ಕುಶಲತೆಗಳನ್ನು ಬೆಳೆಸಿಕೊಳ್ಳುವುದೇ ವ್ಯಕ್ತಿತ್ವವನ್ನು ಸಂಪಾದಿಸುವ ಮಾರ್ಗ. ಮನಃಶಾಸ್ತ್ರದಲ್ಲಿ ಬುದ್ಧಿಮತ್ತೆಯನ್ನು ಅಳತೆ ಮಾಡುವಂತೆ ವ್ಯಕ್ತಿತ್ವವನ್ನೂ ಅಳತೆ ಮಾಡುತ್ತಾರೆ. ಬುದ್ಧಿಮತ್ತೆಯ ಹೆಚ್ಚು ಕಡಿಮೆಯ ಮೇಲೆ ವ್ಯಕ್ತಿತ್ವದ ಹೆಚ್ಚು ಕಡಿಮೆ ಅವಲಂಬಿಸಿಲ್ಲವೆಂಬುದು ಅನುಕೂಲ ನಿರ್ಣಯವಾಗಿ ಕಂಡು ಬಂದಿದೆ. ಆಟಪಾಠಗಳಲ್ಲಿ ಆಸಕ್ತಿ, ಚುರುಕುತನಗಳನ್ನು ತೋರುವ ಮಕ್ಕಳು ಬೇಗ ಇತರರ ಮನಸವನ್ನು ಆಕರ್ಷಿಸಬಲ್ಲರು; ಅಂಜಿಕೆ, ನಾಚಿಕೆ ಹೆಚ್ಚಿರುವ ಮಕ್ಕಳಿಗೆ ವ್ಯಕ್ತಿತ್ವ ಕಡಿಮೆ. ಈ ಗುಣಗಳನ್ನು ಗೆಲ್ಲಲು ಅಭ್ಯಾಸ ಬೇಕು. ಅಭ್ಯಾಸದಿಂದ ಪರಿಣಾಮಿಯಾದ ವ್ಯಕ್ತಿತ್ವ ಲಭಿಸುತ್ತದೆ.

ದೇಹಶ್ರಮದ ಕೌಶಲಪ್ರದರ್ಶನದಿಂದ ವ್ಯಕ್ತಿತ್ವ ಬೆಳೆಯುವುದು ಮುಖ್ಯವಾಗಿದೆ. ದೇಹಶಕ್ತಿಯನ್ನು ಹೆಚ್ಚಾಗಿ ಬಳಸಿಕೊಳ್ಳುವುದು ಇದಕ್ಕೆ ಸೂತ್ರ. ಅಂಥವರ ಆಹಾರ ...ಗಳು ಶೀಘ್ರವಾಗಿ ಸಾಗಿ ಆರೋಗ್ಯ ...ತ್ತದೆ. ಕ್ರೀಡೆಯ ಕುಶಲಗಳು ಮತ್ತು ...ವಾಗಿ ಅಭ್ಯಾಸ ಮಾಡುವವರು ಕಡಿಮೆ ವ್ಯಕ್ತಿತ್ವ ಪಡೆಯುತ್ತಾರೆ.

ವ್ಯಕ್ತಿತ್ವ ಸಂಪನ್ನರು ನಿಷ್ಪಕ್ಷಪಾತ ವಿಮರ್ಶೆಯಿಂದ ಅನ್ಯರನ್ನು ಬಹಳವಾಗಿ ಟೀಕಿಸುವುದಿಲ್ಲ. ಅವರು ಚನ್ನಾಗಿ ... ಅನುಸರಿಸುವಂತೆ ನಡೆಯಬಲ್ಲ... ಹೀನರು ಮನಸ್ಸು ... ನಡೆದುಕೊಂಡು ಅನ್ಯರಿಗೆ ಅಸಂತೋ... ತನ್ಮೂಲಕ ತಾವೂ ಅಸಂತೋಷಕ್ಕೆ ...ಗುತ್ತಾರೆ. ನ್ಯಾಯವಾದುದನ್ನು ...ಗಳೂ ಮಾಡುವ ಧೀರತನದಿಂದ ವ್ಯಕ್ತಿತ್ವವಂತರು ಜಯಶಾಲಿಗಳಾಗುತ್ತಾರೆ. ಅವರಲ್ಲಿ ಶಿಸ್ತು ತುಂಬಿರುತ್ತದೆ. ವ್ಯಕ್ತಿತ್ವದ ಕೇಜವಿಲ್ಲದವರು 'ನಾನು ಹೇಳಿದ್ದು, ನನಗೆ ಅದು ಬೇಡ, ತಿಳಿಯದು' ಎಂದು ಪ್ರಯತ್ನವಿಮುಖರಾಗಿ ಜಡತ್ವವನ್ನು ಪ್ರದರ್ಶಿಸುತ್ತಾರೆ. ಅಂಥವರಿಗೆ ಅಶಾಂತಿ, ಉದ್ವೇಗ ಜಾಸ್ತಿ; ತಮ್ಮನ್ನು ಟೀಕಿಸಿದರೆ ಅವರು ಸಹಿಸಿಕೊಳ್ಳಲಾರರು.

ಕೊಡಚಕೋಟ ವ್ಯವಹಾರಕ್ಕೆ ಗಂಡಹೆಂಡಿರಲ್ಲಿ ಒಬ್ಬರಿಬ್ಬರಿಗೆ ವ್ಯಕ್ತಿತ್ವ ಕಡಿಮೆಯಿರುವುದೇ ಕಾರಣವೆಂಬುದನ್ನು ದಂಪತಿಗಳೆಲ್ಲರೂ ಗಮನಿಸಬೇಕು. ಆ ಕೇಜನಿದ್ದಲ್ಲಿ ಬುದ್ಧಿಹೀನ ದಂಪತಿಗಳಾದರೂ ಸಾಯುವವರೆಗೆ ಅನ್ಯೋನ್ಯತ್ಯಾಗದಿಂದ ಸುಖಿಗಳಾಗಿ ಬಾಳಬಲ್ಲರು. ತರುಣ ತರುಣಿಯರು ಪೂರ್ವಗ್ರಹದಿಂದ ಮುಕ್ತರಾಗಲು ಅಂಥ ಕೇಜ ಅವಶ್ಯಕ; ಅದು ಅವರಿಗೆ ಎಲ್ಲಕ್ಕಿಂತ ಹೆಚ್ಚಿನ ಭೂಷಣ ಮತ್ತು ಆಕರ್ಷಣ.

ವಿದ್ಯಾವಂತರಾರು?

ಈಗಿನ ಕಾಲದಲ್ಲಿ ತ ಅಕ್ಷರ ಬಂತೆಂದರೆ ... ನರನಾರಿಯರೂ ವಿದ್ಯಾವಂತರೆಂದು ಹೆಮ್ಮೆಯಿಂದ ತಿರುಗುತ್ತಾರೆ; ಹರಟೆ ಹೊಡೆಯಲಿಕ್ಕೆ ಸ್ವಲ್ಪ ಬಂತೆಂದರೆ ದೊಡ್ಡ ವಾಗ್ಮಿಗಳು, ಬರಹಗಾರರು ಎಂದು ತಿಳಿದು ಆರೀತಿ ನಟಿಸುತ್ತಾರೆ. ಇದನ್ನು ಕಂಡು ಶ್ರೀ ಒ. ಸಿ. ಶಾಸ್ಸೈಕೀಲರು ನಿಜವಾದ ವಿದ್ಯಾವಂತಿಕೆ ಎಂದರೇನೆಂಬುದನ್ನು ವೈಜ್ಞಾನಿಕವಾಗಿ ವಿಮರ್ಶಿಸಿ ನಿರ್ಣಯವನ್ನು ಜನತೆಯ ಮುಂದೆ ಈ ರೀತಿ ವಿವರಿಸಿ ಇಟ್ಟಿದ್ದಾರೆ.

೧) ವಿದ್ಯಾವಂತ ತರುಣ ತರುಣಿಯರಿಗೆ ಮೊದಲು ಅಭ್ಯಾಸಕ್ಕೆ ತೆಗೆದುಕೊಂಡ ವಿಷಯದಲ್ಲಿ ತಕ್ಕಮಟ್ಟಿಗೆ ನಿರ್ದಿಷ್ಟವಾದ ವಿವರಪೂರ್ಣವಾದ ಜ್ಞಾನವಿರಬೇಕು ಅದರ ಜೊತೆಗೆ ತನ್ನ ಸ್ವಭಾವದ, ತನ್ನ ಸಮಾಜದ ಮತ್ತು ಪ್ರಕೃತಿವ್ಯಾಪ್ತ ಜಗತ್ತಿನ ಪರಿಚಯ ಆದಷ್ಟು ಹೆಚ್ಚಾಗಿ ಇರತಕ್ಕದ್ದು. ಈ ಪರಿಚಯ ಎಷ್ಟೆಷ್ಟು ಹೆಚ್ಚಾಗಿರುವದೋ ಅಷ್ಟಷ್ಟು ಮಾನವರು ತಮ್ಮ ವಾತಾವರಣದೊಡನೆ ಹೊಂದಿಕೊಂಡಿರಲು ಬಲ್ಲವರಾಗುತ್ತಾರೆ.

೨) ಎರಡನೆಯದಾಗಿ, ಬುದ್ಧಿಮತ್ತೆ, ಹಿಂದಿನ ಶಾಸ್ತ್ರಗಳಲ್ಲಿ ಶಾಸ್ತ್ರಾಭ್ಯಾಸದಿಂದ ಬುದ್ಧಿವೈಕಲ್ಯ ಉಂಟಾಗುವುದೆಂದು ಹೇಳಿದೆ. ತನ್ನ ಮನದ ಅಭಿಪ್ರಾಯವನ್ನು ಚಿತ್ರದಲ್ಲಿ ತೋರಿಸಿದಂತೆ ಸ್ಪಷ್ಟವಾಗಿ ವಾಗ್ರೂಪದಲ್ಲಿ ಇತರರ ಮುಂದಿಡುವ ಶಕ್ತಿ ಪ್ರತಿಯೊಂದು ವಿದ್ಯಾವಂತ ಎನಿಸಿಕೊಳ್ಳುವ ವ್ಯಕ್ತಿಗೂ ಅಗತ್ಯ. ಇನ್ನೊಬ್ಬರ ಇಂಗಿತವನ್ನು ಕೂಡಲೆ ಗ್ರಹಿಸುವ ಚಾಣಾಕ್ಷತೆಯೂ ಬೇಕು.



ಭಾರತದಲ್ಲಿ ಇಂಗ್ಲಂಡಿನ ಹೈಕಮೀಶನರರಾದ ಸರ್ ಟೆರೆನ್ಸ್ ಶೋನರು ಈಚೆಗೆ ಕೊಟ್ಟ ಒಂದು ಸತ್ಕಾರಕೂಟದಲ್ಲಿ ಭಾರತ ಮುಖ್ಯಮಂತ್ರಿ ಪಂ. ಜವಾಹರಲಾಲರು.

೩) ಕಾರ್ಯಕಾರಣ ಸಮನ್ವಯಬುದ್ಧಿಯನ್ನು ಬೆಳೆಸಿಕೊಂಡಿರಬೇಕು. ಏಕೆಂದರೆ ಪ್ರಾಣಿಗಳಿಂದ ಮನುಷ್ಯನನ್ನು ಪ್ರತ್ಯೇಕಿಸುವ ಲಕ್ಷಣವೆಂದರೆ ಈ ವಿಚಾರಪರತೆಯೇ.

೪) ಕಲ್ಪನಾಶಕ್ತಿಯಿಂದ ವಸ್ತುವಸ್ತುಗಳ, ವ್ಯಕ್ತಿ ವ್ಯಕ್ತಿಗಳ ಪರಸ್ಪರ ಸಂಬಂಧಗಳ ಇತಿಮಿತಿಗಳನ್ನರಿವ ಯೋಗ್ಯತೆ ವಿದ್ಯಾವಂತಿಕೆಯ ಒಂದಂಶ.

೫) ಸಾಮಾಜಿಕ ಹೊಣೆಯ ಜ್ಞಾನ ಮತ್ತು ಆ ಹೊಣೆಯ ನಿರ್ವಹಣಬುದ್ಧಿ ಇವು ಎಲ್ಲಕ್ಕಿಂತ ಮುಖ್ಯವಾಗಿ ವಿದ್ಯಾವಂತರಲ್ಲಿ ಇರಬೇಕಾದ ಅಂಶಗಳು, ಸಹನಶೀಲತೆ, ಅನ್ಯರ ಅಭಿಪ್ರಾಯಕ್ಕೆ ಲಕ್ಷ್ಯವೀವಬುದ್ಧಿ, ಸಮಾಜಹಿತದೃಷ್ಟಿ ಇವು ವಿದ್ಯಾವಂತಿಕೆಯ ಸಾರವೆನಿಸುತ್ತವೆ.

೬) ಅಜ್ಞಾತ ವಿಷಯ ಮತ್ತು ವ್ಯಕ್ತಿಗಳಲ್ಲಿ ತೋರಬೇಕಾದ ನಮ್ರತೆ ಮತ್ತು ಮನುಷ್ಯರನ್ನು ನಿಜವಾಗಿ ಸ್ವತಂತ್ರರನ್ನಾಗಿ ಮಾಡುವ ಸತ್ಯ ಮಾರ್ಗದ ಅನ್ವೇಷಣದಲ್ಲಿ ಆಸಕ್ತಿ ಇವೂ ವಿದ್ಯಾವಂತರೆನಿಸಿಕೊಳ್ಳಬೇಕಾದರೆ ಅವಶ್ಯಕವೆನಿಸುವ ಗುಣಗಳು.

ಪ್ರತಿಯೊಬ್ಬ ನರನಾರಿಯೂ ಮೇಲಿನ ಪಟ್ಟಿಸೂತ್ರಗಳನ್ನು ಕಮತಮಗೆ ಅನ್ವಯಿಸಿಕೊಂಡು ಆತ್ಮನಿರೀಕ್ಷಣೆ ಮಾಡಿಕೊಳ್ಳುವುದು ಸ್ವಪರೋದ್ಧಾರಕ್ಕೆ ಪ್ರಥಮ ಸೋಪಾನ.

ಹಾಸ್ಯ ರಸಾಯನ

ಕೊಂದರೆ ತಾಪತ್ರಯಗಳಿಗೆ ಸಿಕ್ಕಿ ನಿದ್ರೆ ಬಾರದೆ ನರಳುವ ಸ್ತ್ರೀ ಪುರುಷರ ಸಂಖ್ಯೆ ಹೆಚ್ಚುತ್ತಿದೆ. ಇದಕ್ಕೆ ಮದ್ದೇನೆಂದು ಹಲವರು ಶೋಧ ಮಾಡಿದರು. ಗುಳಿಗೆ ಕಷಾಯಾದಿಗಳು ತಾತ್ಕಾಲಿಕವೆನಿಸಿದವು.

ಹಿಂದೊಬ್ಬ ವೈದ್ಯಭಕ್ತನಿದ್ದನು, ಅವನು ತನ್ನ ರೋಗಿಗಳಿಗೆ ನಗಲು ಕಲಿಸಿದ್ದನು. ನಕ್ಕರೆ, ಅಳಿಸಿದರೆ, ದೇಹ ಮನಸ್ಸುಗಳೆರಡೂ ನೀಡಿದಂತಾಗಿ ಬಿಗು ಕಡಿಮೆಯಾಗುವುದು. ಮಾಂಸಖಂಡ ಮತ್ತು ನರಗಳು ಸಡಿಲಗುರವಾದಂತೆನಿಸುವುದು ಎಂಬುದು ಅನುಭವಸಿದ್ಧವಿದ್ದರೂ ಅದನ್ನು ಖಿನ್ನತೆ, ಶ್ರಮ ಒಪಗಿದಾಗಿ ಬಳಸಿಕೊಂಬ ಅಭ್ಯಾಸ ಬಹಳ ಜನರಿಗಿಲ್ಲ. ಆದರಿಂದ ದೀರ್ಘವಾದ ಉಚ್ಛ್ವಾಸ ಮತ್ತು ನಿಃಶ್ವಾಸಕ್ಕೆ ಅವಕಾಶ ದೊರಗಿ ಬಹು ಬೇಗ ಆಯಾಸ ಪರಿಹಾರವಾಗುವುದು, ಮಾಂಸಖಂಡಮತ್ತು ನರಗಳನ್ನು ಕ್ರಮಪ್ರಕಾರ ಸಂಕೋಚ ವಿಕಾಸಗೊಳಿಸುವುದೇ ಯೋಗ ವ್ಯಾಯಾಮಪದ್ಧತಿಯ ಗುಟ್ಟು. ಅಮೇರಿಕದ ಮನಃಶಾಸ್ತ್ರಜ್ಞರಿಂದ ಇಂಥ ಹಾಸ್ಯರಸಾಯನದ ಪ್ರಯೋಗದಿಂದ ಎಷ್ಟೋ ಜನರ ನಿರುತ್ಸಾಹ, ಮಂದತೆ, ಚಾತ್ಯಾಭಾರಭಾವ ಇವನ್ನು ಹೋಗಲಾಡಿಸಿ ಜೀವನದ ಚಟುವಟಿಕೆಗಳಲ್ಲಿ ಹುರುಪಿನಿಂದ ಭಾಗ ವಹಿಸಲು ಶಕ್ತರಾಗುವಂತೆ ಮಾಡಿದ್ದಾರೆಂಬುದನ್ನು ಗಮನಿಸಿ ಭಾರತೀಯರು ತಮ್ಮ ಜೀವನದಲ್ಲಿ ಇಂಥ ಪ್ರಯೋಗವನ್ನು ಮಾಡಿದರೆ ಲಾಭವಾಗದಿರದು. ಖರ್ಚಿಲ್ಲದ ಔಷಧವೆಂದು ಇದನ್ನು ಬಳಸದವರು ಮೂರ್ಧರೇ ಸರಿ.

ಬಿಳಿ ಛಾಯೆ

"ಸ್ಪೆಕ್ಟ್ರೋಫೋಟೋ ಮೀಟರ್" ಎಂಬುದು ಬಣ್ಣಗಳನ್ನು ವಿಶ್ಲೇಷಿಸಿ ತೋರಿಸುವ ಒಂದು ಯಂತ್ರಸಾಧನ. ಅದು ಚರ್ಮದಲ್ಲಿಯ ರಕ್ತಾಂಶವನ್ನೂ ಆಮ್ಲಜನಕಾಂಶವನ್ನೂ ಅಳತೆ ಮಾಡಬಲ್ಲುದು.

ಈ ಸಾಧನದ ಸಹಾಯದಿಂದ ಡಾ. ಇ. ಎ. ಎಡ್ವರ್ಡ್ಸ್ ಮತ್ತು ಡಾ. ಎಸ್. ಕ್ಯೂ. ಡಂಟ್ಲಿಯವರು ಕಣ್ಣಿನ ಕಾಣ್ಕೆಯಂತೆ ಮಾನವನ ಚರ್ಮವನ್ನು ಕೃತಕವಾಗಿ ರಚಿಸಿದ್ದಾರೆ. ಹೆಂಗಸು ಗಂಡಸಿಗಿಂತ ಸ್ವಲ್ಪ ಮಟ್ಟಿಗೆ ಬಿಳಿಕರಿಸಿರಲು ಅವಳ ಚರ್ಮದಲ್ಲಿ ರಕ್ತ ಮತ್ತು ಆಮ್ಲಜನಕದ ಅಂಶಗಳು ಕಡಿಮೆ ಇರುವುದೇ ಕಾರಣ. ಈ ರಕ್ತಬಲ ಮೈಯಲ್ಲಿ ಚುರುಕು ಹುಟ್ಟಿಸುತ್ತದೆ, ಜಡತೆಯನ್ನು ಬರಗೊಡದು. ನಿರ್ವೀರ್ಯರಾದವರು (ಷಂಢರು) ಹೆಂಗಸರಂತೆಯೇ ಬಿಳಿಕರಿಸಿದ ಮೈಬಣ್ಣ ಉಳ್ಳವರಾಗಿರುವರು, ಅವರಿಗೆ ರೋಮಗಳ ಬೆಳವಣಿಗೆಯೂ ಕಡಿಮೆ, ತೇಜಸ್ಸು ಇರುವ... ಬಣ್ಣದಲ್ಲಿ ಬೆಳಕನ್ನು ಪ್ರತಿಫಲಿಸುವ ಶಕ್ತಿ (ತೇಜಸ್ಸು, ಕಾಂತಿ) ಹೆಚ್ಚಬೇಕಾದರೆ ಮೊಟ್ಟೆ ಮತ್ತು ಹಸಿರು ತರಕಾರಿಗಳನ್ನು ಹೆಚ್ಚಾಗಿ ಬಳಸಬೇಕು. ಅದರಿಂದ ಮೈಗೆ ಕಳೆ ಬರುತ್ತದೆ. ಇದರ ಮೇಲೆ ಈ ಬಣ್ಣಕ್ಕೆ ... ಸಹಜವಾದ ಭಿನ್ನ Hormones—ರಸದ್ರವ್ಯಗಳೂ ಕಾರಣ. ಈ ರಸದ್ರವ್ಯಗಳನ್ನು ಸ್ತ್ರೀತ್ವ ಮತ್ತು ಪುಂಸ್ತ್ವಗಳು ಕಡಿಮೆಯಾದಲ್ಲಿ ಸ್ತ್ರೀ ಪುರುಷರು ವೈದ್ಯರ ಸಲಹೆಯಂತೆ ಚುಚ್ಚು ಮದ್ದಿನ ರೂಪದಲ್ಲಿ ತೆಗೆದುಕೊಳ್ಳಬಹುದು.

ಜನಮತ

ಅತಿಪ್ರಸರಣ

ಮಹನೀಯರೆ :—

ಇಂದು ದೇಶದಲ್ಲಿ ಹಬ್ಬಿರುವ ಅತಿಪ್ರಸರಣಾವಸ್ಥೆಯನ್ನು ತಡೆಯಲು ಯಾವ ಉಗ್ರ ಕ್ರಮವನ್ನೂ ಸರಕಾರ ಕೈಕೊಳ್ಳುವ ಲಕ್ಷಣಗಳು ಕಾಣಿಸಲೊಲ್ಲವು. ಹೀಗೆಯೆ ನಾವು ನೋಟುಗಳ ಮುದ್ರಣವನ್ನು ಹೆಚ್ಚಿಸುತ್ತ ಹೋದರೆ ಚೀನದಲ್ಲಿ ಆದಂತೆ ಇಲ್ಲಿಯೂ ಒಂದೂಟಕ್ಕೆ ಕೆಲ ಕೋಟಿ ರೂಪಾಯಿಗಳನ್ನು ಕೊಡಬೇಕಾದ ದಿನ ಬಾರದಿರದು. ಉತ್ಪಾದನೆಯನ್ನು ಹೆಚ್ಚಿಸಿದರೆ ಮಾತ್ರ ಅತಿಪ್ರಸರಣದ ದುಷ್ಪರಿಣಾಮಗಳು ಮಾಯವಾಗಬಲ್ಲವೆಂದು ಅರ್ಥಶಾಸ್ತ್ರಿಗಳು ಹೇಳುತ್ತಾರೆ. ಆದರೆ ಉತ್ಪಾದನೆಯು ಒಮ್ಮಿಂದೊಮ್ಮೆ ಹೆಚ್ಚುವಂತೆ ಕಾಣುವದಿಲ್ಲ. ಅದುದರಿಂದ ಚಲಾವಣೆಯಲ್ಲಿರುವ ಹಣವನ್ನು ಹಿಂತೆಗೆದುಕೊಳ್ಳುವ ಅಥವಾ ಅದರ ಬೆಲೆಯನ್ನು ಕಡಿಮೆ ಮಾಡುವ ಉಪಾಯವನ್ನು ಸರಕಾರವು ಏಕೆ ಕೈಕೊಳ್ಳಬಾರದು? ಉದಾಹರಣೆಗಾಗಿ ದೊಡ್ಡ ದೊಡ್ಡ ಶ್ರೀಮಂತರ ಬ್ಯಾಂಕ ಹಣವನ್ನು ಸ್ಥಗಿತಗೊಳಿಸಬಹುದು. ಮತ್ತು ಒಂದು ನಿರ್ದಿಷ್ಟ ಉತ್ಪನ್ನದ ಮೇಲ್ಪಟ್ಟ ಉತ್ಪನ್ನವುಳ್ಳವರ ಹಣವನ್ನು ನೂರಕ್ಕೆ ಇಂತಿಷ್ಟರಂತೆ ಕಡಿಮೆಮಾಡಬಹುದು. ಉದಾಹರಣೆಗಾಗಿ, ಲಕ್ಷ ರೂಪಾಯಿಯನು ಬ್ಯಾಂಕಿನಲ್ಲಿಟ್ಟವನಿಗೆ ಬರಿ ೫೦ ಸಾವಿರ ದೊರಕುವಂತೆ ಮಾಡಬೇಕು. ಸೋವಿಯೆಟ್ ರಶಿಯಾದಲ್ಲಿಯೂ ಮೊನ್ನೆ ಜರ್ಮನಿಯಲ್ಲಿಯೂ ಇಂಥ ಪ್ರಯೋಗಗಳನ್ನು ಮಾಡಿದ್ದಾರೆ. ನಾವೂ ಈ ಧೋರಣವನ್ನನುಸರಿಸಿದರೆ ಮತ್ತೇನಿಲ್ಲದಿದ್ದರೂ ಕೂಡಿಟ್ಟು ಬೆಲೆ ಏರಿಸುವವರ ಕೈಹಿಡಿದಂತಾಗಿ ಬೆಲೆಗಳು ಇಳಿಯಬಹುದಲ್ಲವೆ?

ಹುಬ್ಬಳ್ಳಿ —ಬಳಲಿದವನೊಬ್ಬ

ಗೋವಿನಜೋಳ ರುಚಿಯಾಗದೇ?

ಮಹನೀಯರೇ –

ಶ್ರೀ ಅರಸಿಂಹರ ಸೂಚನೆ ನಾನು ಕಂಡೆ. ಅವರು ತವಡು ಬಹಳ ಹೋಗುವದುಎಂದ ಹೇಳಿದುದೇನೋ ನಿಜ. ಆದರೆ ಅದುರುಚಿಕಟ್ಟಾಗದಿದ್ದುದವರ ದುರ್ದೈವ! ಚನ್ನಾಗಿ ಬೇಯಿಸಿ ಸರಿಯಾಗಿ ಉಪ್ಪು ಕಾರ ಹಾಕಿ ಚುರ್ರೆಂದು ಒಗ್ಗರಣೆ ಕೊಟ್ಟರೆ ಅದು ಹೇಗೆ ತಾನೆ ರುಚಿಯಾಗಲಿಕ್ಕಿಲ್ಲ! ಒಮ್ಮೆ ನನ್ನನ್ನು ಸಂದರ್ಶಿಸಲಿ. ಆಗ ನಾನು ಅವರಿಗೆ ಅದರ ವಿಷಯವನ್ನು ತಿಳಿಸುವೆನಲ್ಲದೆ, ಉಪ್ಪಿಟ್ಟು ತಿನ್ನಿಸುತ್ತೇನೆ!

೧೨—೮—೪೮

ಗದಗ ಎ. ಬಿಂದುಮಾಧವ

ಕ ರ್ನಾ ಟ ಕ

ಧಾರವಾಡ

೮ ನೇ ತಾರೀಕು ಸಾಯಂಕಾಲ ಧಾರವಾಡ ನಗರ ಸಭೆಯಟ್ಟದ ಮೇಲೆ ಶ್ರೀ ಕುರ್ತಕೋಟಿ ಯವರ ಅಧ್ಯಕ್ಷತೆಯಲ್ಲಿ ಹೈದರಾಬಾದ ದಿನಾಚರಣೆಯ ನಿಮಿತ್ತ ನಾಗರಿಕರ ಸಭೆ ಕೂಡಿತು. ಸಭೆಯಲ್ಲಿ ಶ್ರೀ ಮಣಿಯಾರ, ಮಹಮ್ಮದ ವರೂರ, ಜಿನದಾಸಪ್ಪ ಕೌದಿ, ಬುರ್ಲಿಬಿಂದು ಮಾಧವ ಮತ್ತು ದಾಬಡೆಯವರು ಮಾತಾಡಿದರು. ಹೈದ್ರಾಬಾದವನ್ನು ಭಾರತ ಸರಕಾರವು ಬೇಗನೆ ವಶಪಡಿಸಿಕೊಳ್ಳದೆ ಗತ್ಯಂತರವಿಲ್ಲೆಂದು ಈ ಸಭೆಯು ಅಭಿಪ್ರಾಯವಾಗಿದ್ದು ಈ ಸಮಸ್ಯೆ ಬೇಗ ಬಗೆಹರಿಯಿತೆಂದ್ರು ಆಶಿಸುತ್ತೇವೆಂದು ಸಭೆಯಲ್ಲಿ ಗೊತ್ತುವಳಿ ಸ್ವೀಕೃತವಾಯಿತು.

ರೋಜದಲ್ಲಿ ಈದ ಪ್ರಾರ್ಥನೆಯ ನಂತರ ಜುಮ್ಮಾ ಮಸೀದೆಯ ಬೈಲಿನಲ್ಲಿ ೪೦೦ ಕ್ಕಿಂತ ಹೆಚ್ಚು ಜನರು ಸಮ್ಮಿಲಿತರಾಗಿದ್ದರು. ಹಲವು ಮುಸಲ್ಮಾನ ಮುಂದಾಳುಗಳು ಮಾತಾಡಿ ಹಿಂದುಸ್ತಾನ ಸರಕಾರಕ್ಕೆ ನಿಷ್ಠರಾಗಿ ಉಳಿಯುವದೇ ಹಿಂದೀ ಮುಸಲ್ಮಾನರ ಕರ್ತವ್ಯವೆಂಬುದನ್ನು ತಿಳಿಸಿ ಹೇಳಿದರು. ಜಕ್ಕಲಿ ಮುಸಲ್ಮಾನರು ಇದೇ ಬಗೆಯಾಗಿ ನಿರ್ಧರಿಸಿಕೊಂಡರು.

ಧಾರವಾಡದಲ್ಲಿ ಅಗಸ್ಟ ೯ ಕ್ಕೆ ರಾಜಕೀಯ ಸಂಶ್ರಸ್ತರ ಸಭೆ ಶ್ರೀ ಭಾಲಚಂದ್ರ ಘಾಣೇಕರರ ಅಧ್ಯಕ್ಷತೆಯಲ್ಲಿ ಸೇರಿ ಬದಲಾದ ಪರಿಸ್ಥಿತಿಯಲ್ಲಿ ತಾವು ಮಾಡಬೇಕಾದ ಕೆಲಸದ ವಿಚಾರ ಮಾಡಲಾಯಿತು. ಶ್ರೀ ವೆಂ. ಧೀ. ನಾಯಕ, ಶಂಕರ ಕುರ್ತಕೋಟಿ, ದ. ಪ. ಕರಮರಕರ ಮತ್ತು ಹಣಮಂತರಾವ ಮೋಹರೆ ಇವರು ಮಾತಾಡಿದ ನಂತರ ಹಳ್ಳಿಯ ಸಂಘಟನೆ ಕಾರ್ಯ ಕೈಕೊಳ್ಳಬೇಕೆಂದು ಗೊತ್ತಾಯಿತು.

ಗದುಗಿನ ವೀರನಾರಾಯಣ ದೇವರ ಗರ್ಭ ಗುಡಿಯನ್ನು ಪ್ರವೇಶಿಸಿ ದೇವರ ವಿಗ್ರಹವನ್ನು ಮುಟ್ಟಿ ಪೂಜಿಸಿದ್ದರ ಸಂಬಂಧವಲ್ಲಿ ಗದುಗಿನ ಕೋರ್ಟಿನಲ್ಲಿ ಖಟ್ಲೆ ನಡೆದು ಹಾಗೆ ಮಾಡಬಾರದೆಂದು ತಾತ್ಪೂರಿಕ ತಾಕೀದಿ ಆಗಿದ್ದರವಿರುದ್ಧ ಧಾರವಾಡ ಜಜ್ಜ ಕೋರ್ಟಿನಲ್ಲಿ ಅಪೀಲಾಗಿತ್ತಷ್ಟೇ. ಜಜ್ಜರು ಕೆಳ ಕೋರ್ಟಿನ ನಿರ್ಣಯನನ್ನೇ ಸ್ಥಿರಗೊಳಿಸಿದರು.

ವಿಜಾಪುರ

ಮುಂಬಯಿ ಸರಕಾರದ ಒಕ್ಕಲತನ ಮಂತ್ರಿಗಳಾದ ಶ್ರೀ. ಪಾಟೀಲ ಮಲ್ಲನಗೌಡರು ೮ ನೇ ತಾರೀಕು ಬಾಗಲಕೋಟೆಗೆ ಬಂದು ಅಲ್ಲಿ ಅಡವಿಸ್ವಾಮಿಮಠದಲ್ಲಿ ಸ್ಥಾಪಿತವಾಗಿರುವ ಒಕ್ಕಲತನ ಶಾಲೆಯ ಕಟ್ಟಡದ ಅಡಿಗಲ್ಲನ್ನು ಇಡುವ ಸಮಾರಂಭವನ್ನು ಜರುಗಿಸಿದರು ಈ ಶಾಲೆಯುಸ್ವಾವಲಂಬಿಯಾಗುವಂತೆ ವ್ಯವಸ್ಥಾಪಕರು ಯೋಜಿಸಿದ್ದು ಅಭಿನಂದನೀಯವೆಂದು ಅವರು ಅಭಿಪ್ರಾಯಪಟ್ಟರು.

ಮುಂಬಯಿ ಸರಕಾರದ ಉಪಮಂತ್ರಿಗಳಾದ ಶ್ರೀ ಎಸ್. ಆರ್. ಕಂಠಿಯವರು ಬಾಗಲಕೋಟೆಯಲ್ಲಿ ಒಕ್ಕಲತನ ಶಾಲೆಯ ಕಟ್ಟಡದ ಅಡಿಗಲ್ಲು ಇಡುವ ಸಮಾರಂಭದ ಕಾಲಕ್ಕೆ ಭಾಷಣಮಾಡುತ್ತ ಮುಂಬಯಿ ಸರಕಾರದವರು ವಿಜಾಪುರ ಜಿಲ್ಲೆಗಾಗಿ ಮಾಡಿದ ಯೋಜನೆಗಳನ್ನು ವಿವರಿಸಿ ಏನೂಮಾಡಿಲ್ಲೆಂಬ ಆರೋಪವನ್ನು ಅಲ್ಲಗಳೆದರು.

ಒಕ್ಕಲತನ ಮಂತ್ರಿಗಳಾದ ಶ್ರೀ ಪಾಟೀಲ ಮಲ್ಲನಗೌಡರು ೮ ನೇ ತಾರೀಕು ರಾಮದುರ್ಗಕ್ಕೆ ಬಂದು ಮಲಪ್ರಭಾ ಆಣೆಕಟ್ಟನ್ನು ಸಂದರ್ಶಿಸಿ ಸುಪರಿಂಟೆಂಡೆಂಟ ಇಂಜಿನಿಯರರೊಂದಿಗೆ ಆ ಆಣೆಕಟ್ಟಿನ ವಿವರಗಳನ್ನು ತಿಳಿದುಕೊಂಡರು. ಸಾರ್ವಜನಿಕ ಸಭೆಯಲ್ಲಿ ಮಾತಾಡುತ್ತ ಪ್ರಾಂತಗಳಲ್ಲಿ ಜನತೆಗೆ ಸಿಕ್ಕತಕ್ಕ ಸೌಕರ್ಯಗಳೇ ವಿಲೀನಹೊಂದಿದ ಪ್ರದೇಶಗಳ ಜನರಿಗೆ ಸಿಕ್ಕುವವೆಂದು ಆಶ್ವಾಸಿಸಿದರು.

ಬೆಳಗಾವಿ

ಅ. ಭಾ. ಭಾವಸಾರ ಕ್ಷತ್ರಿಯ ಸಮಾಜ ಸೇವಾ ಸಂಘದ ಕಾರ್ಯಕಾರೀ ಮಂಡಳದ ಸಭೆ ೨೯ ಕ್ಕೆ ಬೆಳಗಾವಿಯಲ್ಲಿ ಸಂಜೆ ೫ ಗಂಟೆಗೆ ಕ್ಯಾಂಪಿನಲ್ಲಿ ೧೭೯೦ ನಂಬರಿನ ಬಂಗ್ಲೆಯಲ್ಲಿ ಕೂಡುವದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ದಕ್ಷಿಣ ಕನ್ನಡ

ಅಖಿಲ ಕರ್ನಾಟಕ ಏಕೀಕರಣ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ದಿನಾಂಕ ೮ ರಂದು ಮಂಗಳೂರಿನ ಪ್ರಧಾನ ಕಚೇರಿಯಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ವರೆಗಿನ ಕಾರ್ಯಕಲಾಪಗಳ ವರದಿಯನ್ನು ಸಭೆಯ ಮುಂದಿಟ್ಟ ಮೇಲೆ ಘಟನಾ ಸಮಿತಿಯ ಪ್ರಶ್ನಾವಳಿಯ ಉತ್ತರವನ್ನು ಚರ್ಚಿಸಲಾಯಿತಲ್ಲದೆ ಆ ಕುರಿತು ತೀರ್ಮಾನವೂ ಆಯಿತು.

ವಿಶ್ವಕವಿ ರವೀಂದ್ರರ ದಿನಾಚರಣೆಯು ದಿನಾಂಕ ೬ ರಂದು ಮಂಗಳೂರಿನ ಪ್ರಗತಿಶೀಲ ಲೇಖಕ ಸಂಘದ ಆಶ್ರಯದಲ್ಲಿ ಜರಗಿತು. ಶ್ರೀ ಎಸ್. ಆರ್. ನಾರಾಯಣ ರಾಯರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಬಿ ಶಂಕರಭಟ್ಟ, ಪಿ. ಕೆ. ನಾರಾಯಣ, ಯು ಎನ್. ಶ್ರೀನಿವಾಸ ಭಟ್ಟ ಇವರಿಂದ ಭಾಷಣಗಳಾದವು.

ಮಂಗಳೂರಿಗೆ ಬಂದಿದ್ದ ಭೂಕಂದಾಯ, ಅಬಕಾರಿ ಮತ್ತು ಪಾನನಿರೋಧ ಕಮಿಶನರ ಶ್ರೀ ವಿ. ಎನ್. ಕುಡ್ವರು ಮೂಡಬಿದ್ರೆಯಲ್ಲಿ ತಯಾರಿಸುವ ತರಬೇತಿ ಶಾಲೆಯನ್ನೂ, ಕಾರ್ಕಳ, ಫರಂಗಿ ಪೇಟೆ, ಕಲ್ಲಡ್ಕ ಮುಂತಾದೆಡೆಗಳ ಪಾನನಿರೋಧಕೇಂದ್ರಗಳನ್ನೂ ಸಂದರ್ಶಿಸಿ ಮದ್ರಾಸಿಗೆ ಮರಳಿರುವರು.

ಮಂಗಳೂರ ಪೌರಸಭೆಯ ಸಾಮಾನ್ಯ ಸಭೆಯೊಂದು ಕಳೆದವಾರ ಜರಗಿದಾಗ ಇಂಡೋ ಪೋಲಂಡ್ ಲೈಬ್ರೇರಿಯವರಿತ್ತ—ಪೋಲಂಡ್ ಸ್ವಾತಂತ್ರ್ಯ ಹೋರಾಟ, ಅಲ್ಲಿನ ಸಾಹಿತ್ಯ ಪಂಜಯ, ತರುಣರ ಆಂದೋಲನ ಮುಂತಾದ ವಿಚಾರಗಳ ೧೦ ಪುಸ್ತಕಗಳನ್ನು ಸ್ವೀಕರಿಸಲಾಯಿತು. ಪ್ರಾಂತಕ್ಕೊಂದುಪೌರಸಭೆಗಳಪರಿಷತ್ತು ಬೇಕೆಂಬ ಚಿತ್ತೂರಿನ ನಿರ್ಣಯವನ್ನು ಸ್ವಾಗತಿಸಲಾಯಿತು.

ದಿನಾಂಕ ೧ ರಂದು ಉಪ್ಪಿನಂಗಡಿಯಲ್ಲಿ ಒಂದು "ರಿಕ್ರಿಯೇಶನ್ ಕ್ಲಬ್" ನ ಉದ್ಘಾಟನೆಯು ರೆ॥ ಫಾ॥ ಜೋಸ್ ಕೋಸ್ ರವರಿಂದ ಆಯಿತು. ಶ್ರೀ ಟಿ. ಲಕ್ಷ್ಮೀನಾರಾಯಣರಾವ ಮೊದಲಾದವರ ಭಾಷಣಗಳಾದ ಮೇಲೆ ವಂದನೋಕ್ತಿಗಳೊಂದಿಗೆ ಸಭೆಯು ಕೊನೆಗೊಂಡಿತು.

ಉಡುಪಿಯಲ್ಲಿ ಗ್ರಾಮಾಭಿವೃದ್ಧಿ ಶಿಕ್ಷಣ ಶಾಲೆಯು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರಿಂದ ತೆರೆಯಲ್ಪಟ್ಟಿತು.

ದಿನಾಂಕ ೩ ರಂದು ಕಾಸರಗೋಡಿನಿಂದ ೨೬ ಮಂದಿ ಕಮ್ಯುನಿಷ್ಟ ಕೈದಿಗಳನ್ನು ವಿಚಾರಣೆಗಾಗಿ ಪುತ್ತೂರಿಗೊಯ್ದಾಗ ಅಲ್ಲಿನ ಜೈಲಿನ ಅವ್ಯವಸ್ಥೆಗಾಗಿ ಅವರು ಅನ್ನ ಸತ್ಯಾಗ್ರಹ ಮಾಡಿದರು. ಮರುದಿನ ಅವರನ್ನು ಮಂಗಳೂರಿಗೆ ತರಲಾಗಿದೆ.

ಅಡ್ಯನಡ್ಕದಲ್ಲಿ ದಿನಾಂಕ ೭ ರಂದು ಪಂಡಿತ ಮುಳಿಯ ತಿಮ್ಮಪ್ಪಯ್ಯನವರಿಂದ ಆದಿಪುರಾಣ ವಾಚನವೂ ಒಂದು ಯಕ್ಷಗಾನ ಕಾಲಕ್ಷೇಪವೂ ಜರಗಿತು. ಈ ಸಮಾರಂಭಕ್ಕೆ ಶ್ರೀ ಸಿ. ಎಸ್. ಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಲೆಯ ಆಹಾರ ಪರಿಸ್ಥಿತಿ ಸಮಾಧಾನಕರವಿದೆಂದು ಜಿಲ್ಹಾ ಕಲೆಕ್ಟರರು ಪತ್ರಕಾರರ ಸಭೆಯಲ್ಲಿ ತಿಳಿಸಿದರು. ಒಟ್ಟು ೪೦೦೦ ಟನ್ ಆಹಾರ ಪದಾರ್ಥಗಳು ಜಿಲ್ಹೆ ಗೊಡೌನದಲ್ಲಿದ್ದು ಈ ತಿಂಗಳ ಸುಮಾರು ೧೦೦೦ ಟನ್ ಖರ್ಚಾಗಬಹುದೆಂದು ಹೇಳಿದರು. ಲಾಯಸೆನ್ಸದಾರರ ಹತ್ತಿರವೂ ಅಕ್ಕಿ ಸಂಗ್ರಹವಿದೆ. ಅಕ್ಕಿಯ ದರವೀಗ ಇಳಿಯ ಹತ್ತಿದೆ ಎಂದು ಮುಂದಾಗಿಯೂ ಹೇಳಿದರು.

ಉತ್ತರ ಕನ್ನಡ ಜಿಲ್ಹೆಯಲ್ಲಿ ಒಂದು ಸಾವಿರಕ್ಕಿಂತ ಹೆಚ್ಚಿಗೆ ಜನಸಂಖ್ಯೆಯುಳ್ಳ ೮೭ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವ ಕಾರ್ಯ ಭರದಿಂದ ಸಾಗಿದೆ. ನಾಲ್ಕು ಮುನಿಸಿಪಾಲಿಟಿ ಪ್ರದೇಶದಲ್ಲಿ ಮಾತ್ರ ಈ ಕಾರ್ಯ ಭರದಿಂದ ನಡೆದಿಲ್ಲ. ಮುನಿಸಿಪಾಲಿಟಿಯವರು ಬೋರ್ಡುಗಳಿಗೆ ಸಲ್ಲಿಸತಕ್ಕ ಹಣವನ್ನು ಸಲ್ಲಿಸದಿದ್ದುದರಿಂದಲೆ ಈ ವಿಲಂಬ.

ಕುಮಟಾ ನಗರ ಸಭೆಗೆ ಶ್ರೀ ಬಾಬಾ ಮುಳಪ್ಪ ಪೈರವರು ಅಧ್ಯಕ್ಷರಾಗಿಯೂ ಶ್ರೀ ರಾಯಸುಬ್ಬ ಬಾಳಗಿಯವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ಬಳ್ಳಾರಿ

ಶ್ರೀ [illegible] ಪೇಜಿಗೆ ಹೋದಾಗ ಪರಿವಾಳ್ಯದ ಆಬ್ಬಾಸಗಿ ಸವಾಕಾಲ ಅನುಕೂಲವಾಗುವ ಮಂಗರ್ವಾದ ಶ್ರೀ ಗೀತಾ ಸೇವಾಶ್ರಮವನ್ನು ಸಂಸ್ಥಾಪಿಸಿ ತಾವೇ ಅದಕ್ಕೆ ಕಾಯಂ ಅಧ್ಯಕ್ಷರಾಗಲು ಒಪ್ಪಿಕೊಂಡರು. ಗೋಳಿ ಓಬುಳಾಶೆಟ್ಟಿಯವರು ತಮ್ಮ ತಾಯಿ ಹೆಸರಿನಲ್ಲಿ ಇದಕ್ಕಾಗಿ ಸ್ಥಳವನ್ನು ಕೊಟ್ಟಿದ್ದು ಶ್ರೀ ಹೆಡ್ಡೂರ ಶಿದ್ದಪ್ಪನವರು ತಮ್ಮ ತಂದೆಯ ಹೆಸರಿನಲ್ಲಿ ಕಟ್ಟಡ ಕಟ್ಟಿಸಿ ಕೊಡಲು ಒಪ್ಪಿರುವರು.

ಶ್ರೀಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವವು ಎಂದಿನಂತೆ ವಿಜೃಂಭಣೆಯಿಂದ ನಡೆಯುತಿವೆ ಬಳ್ಳಾರಿ ಜಿಲ್ಹಾ ಕಲೆಕ್ಟರರು ಉತ್ಸವದ ಬಗ್ಗೆ ಎಲ್ಲ ಬಗೆಯ ವ್ಯವಸ್ಥೆ ಮಾಡಿದ್ದಾರೆ. ಉತ್ಸವಕ್ಕೆ ಬರುವವರು ಕಾಲರಾ ಚುಚ್ಚಿಸಿ ಕೊಂಡು ಬರಬೇಕಾಗುವದು. ಇಲ್ಲದಿದ್ದರೆ ಅಲ್ಲಿಯೇ ಟೈಲೀ ತೆಗೆಯಲಾಗುವದು.

ಶ್ರೀಮಂತ್ರಾಲಯ ಯಾತ್ರಿಕರ ಸಂಘದ ವಾರ್ಷಿಕ ಸರ್ವಸಾಧಾರಣ ಸಭೆ ೧೯೪೭-೪೮ ರ ಲೆಕ್ಕಪತ್ರ ಹಾಗು ವರದಿ ಸ್ವೀಕಾರ ಹೊಸ ವ್ಯವಸ್ಥಾಪಕ ಸಮಿತಿಯ ಆಯ್ಕೆ ಲೆಕ್ಕತಪಾಸಿಕರ ನೇಮಕ ಮೊದಲಾದ ವಿಷಯಗಳ ವಿಚಾರಣೆಗಾಗಿ ೨೨-೮-೪೮ ನೇ ದಿನ ರವಿವಾರ ರಾತ್ರಿ ೯ ಗಂಟೆಗೆ ಮಂತ್ರಾಲಯದಲ್ಲಿ ಸಂಘದ ಶಿಬಿರದಲ್ಲಿ ಸೇರುವದು. ಸದಸ್ಯರೆಲ್ಲರೂ ಬರಬೇಕೆಂದು ಅಧ್ಯಕ್ಷ ಶ್ರೀ ನವಲಿ ಗೋಪಾಳ ರಾಯರು ಪ್ರಕಟಿಸುತ್ತಾರೆ.


ಕನ್ನಡ ಸಂಸ್ಥಾನ

ಚಿತ್ರದುರ್ಗದಲ್ಲಿ ಮಹಿಳೋನ್ನತಿ ಕಾರ್ಯದಲ್ಲಿ ತೊಡಗಿದ್ದ ಶ್ರೀಮತಿ ಕಮಲಾಬಾಯಿ ಶಿರೂರ ಇವರು ಕಳೆದ ವಾರ ಸ್ವರ್ಗಸ್ಥರಾದರು. ಪೌರಸಭೆಯವರುಇವರನಿಧನದಬಗೆ ದುಃಖ ಪ್ರದರ್ಶಿಸುತ್ತ ಸಾರ್ವಜನಿಕ ಸೇವಿಕೆಯೊಬ್ಬಳು ಕಣ್ಮರೆಯಾದಂತಾಯಿತೆಂದು ಪೌರ ಸಭೆ ಅಭಿಪ್ರಾಯ ವ್ಯಕ್ತ ಮಾಡಿತು.

ಅರಸೀಕೆರೆ ಪೌರ ಸಭೆಯು ಮಹಾತ್ಮಾ ಗಾಂಧೀ ಸ್ಮಾರಕ ನಿಧಿಗೆ ೧೦೦೦ ರೂ. ಕೊಡಬೇಕೆಂದು ನಿರ್ಧರಿಸಿದೆ. ಊರಿನ ನೀರಿನ ಕೊರತೆಯನ್ನು ನಿವಾರಿಸಲು ೨೧ ಸಾವಿರ ರೂಪಾಯಿ ವೆಚ್ಚ ಮಾಡಿ ಹೊಸ ಕೊಳಿವೆಯನ್ನು ಹಾಕಿಸಬೇಕೆಂದೂ ಅದು ಗೊತ್ತು ಮಾಡಿದೆ.

ಬೆಳಗಾವಿಯಲ್ಲಿಯ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ವ್ಯಾಸಂಗಗೋಷ್ಠಿಯ ಕಾರ್ಯದರ್ಶಿಗಳು ಪತ್ರಿಕೆಗಳಿಗೆ ಪ್ರಕಟನೆಯನ್ನು ಕೊಡುತ್ತ ಶ್ರೀ ದಿ. ವ್ಹಿ. ಗುಂಡಪ್ಪನವರ ನೇತೃತ್ವದಲ್ಲಿ ದಿನವೂ ರಾಜಶಾಸ್ತ್ರ ವ್ಯಾಸಂಗವು ಪ್ರಾರಂಭವಾಗಿದ್ದು ಇದಕ್ಕಾಗಿ ಬೇಕಾಗುವ ಪುಸ್ತಕಗಳು ಮುಂತಾದವುಗಳಿಗಾಗಿ ಉದಾರ ಹಸ್ತದಿಂದ ಧನಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದಾರೆ.

ದಾವಣಗೇರೆ ತಾಲೂಕ ಮಾದಜದವಿ ಗ್ರಾಮದಲ್ಲಿ ಕಳೆದ ತಿಂಗಳು ೨೭ ಕ್ಕೆ ಗಂಡು ಹುಡುಗರ ಶಾಲೆಯಲ್ಲಿ ಗ್ರಾಮಾಭಿಮಾನಿಗಳೆಲ್ಲ ಸೇರಿ ಮೈಸೂರು ಮಹಾರಾಜ ಶ್ರೀ ಜಯ ಚಾಮರಾಜೇಂದ್ರ ಒಡೆಯರ ವರ್ಧಂತ್ಯುತ್ಸವವನ್ನು ಜರುಗಿಸಿದರು. ಶ್ರೀಯ ಪ್ರಾರ್ಥನೆ, ಗುಣಗಾನ, ಬಹುಮಾನಗಳು ವಿತಾರಣೆ ಮೊದಲಾದವು ನಡೆದು ಸಮಾರಂಭ ಕೊನೆಗಂಡಿತು.



ಶಹನಾಜ

(೧೦ ನೇ ಪುಟದಿಂದ)

ಆದರೆ [illegible] ಪಾತ್ರವನ್ನು [illegible] ಪ್ರೇಮ [illegible] ಇದರ ಪಾತ್ರಗಳೂ [illegible] ಭೂಮಿಯ [illegible] ಆದನ್ನು ಪ್ರದರ್ಶಿಸಲಾಗುತ್ತಿರುವ ರಂಗದ [illegible] ಮೇಲೆಂದು ಚಿತ್ರವನ್ನು ನೋಡಹೋಗುತ್ತಿರುವುದೇ ಚಿತ್ರದ [illegible] ಸೌಂದರ್ಯಕ್ಕೆ ವಿದರ್ಶನವಾಗಿದೆ. [illegible] ಚಿತ್ರದ ವೈಶಿಷ್ಟ್ಯ.

ಈ ಚಿತ್ರವು ತರುಣರಿಗೆ [illegible] ಬಹುದು—

ಪ್ರೇಮದಲ್ಲಿ ಆಶಾ ಬೇಡ
ವಿಧಿಗೆ [illegible]
ಹುಂಬತನದ ಇಂಥದಿಂದ
[illegible]
(ಕರ್ಮವೀರ ಪ್ರತಿನಿಧಿಯಿಂದ.)

ಒಂದು ವರ್ಷದ ಸ್ವಾತಂತ್ರ್ಯ

(೬ ನೇ ಪುಟದಿಂದ)

ಸ್ಥಿತಿಗೆ ಬಂದಿದ್ದೇವೆ. ಆದರೆ ಈ ಎಲ್ಲ [illegible] ಗಳನ್ನು [illegible] ಯೊಂದಕ್ಕೆ ನಾವು ಗುರಿಯಾದೆವು. ಸ್ವಾತಂತ್ರ್ಯದ ದಾರಿಯಲ್ಲಿ ನಮ್ಮನ್ನು ಮುನ್ನಡೆಸಿದ ಆ ಮಹಾ ರಾಷ್ಟ್ರಪಿತನನ್ನು "[illegible]" [illegible] ಕೊಂದನು. [illegible] ಈ ರಾಷ್ಟ್ರ [illegible]. ರಾಷ್ಟ್ರೀಯ ಸಮುದ್ರಮಂಥನದಿಂದ [illegible] ವನ್ನು ನುಂಗಿ ಗಾಂಧೀಜಿ, ರಾಷ್ಟ್ರ [illegible] ಬೆಂದು ತಾವು ಪ್ರಾಣ [illegible]. [illegible] ನಮ್ಮನ್ನು [illegible] ನಮ್ಮಲ್ಲಿ ಇನ್ನೂ [illegible] ನೀತಿಪಾತ, [illegible] ಇದನ್ನು [illegible] ರಕ್ತ ಒಂದು [illegible] ರಾಷ್ಟ್ರವನ್ನು [illegible] ಸಲಿ!

ಬೂದೀಗೆರೆ ಯುವಕ ಸಂಘದ [illegible] ವಾರ್ಷಿಕೋತ್ಸವ ೨೨-೮-೪೮ ಕ್ಕೆ ಮಧ್ಯಾಹ್ನ ೨ ಗಂಟೆ ಶ್ರೀ ತಿರುಮಲೆ [illegible] ವರ ಅಧ್ಯಕ್ಷತೆಯಲ್ಲಿ ಜರಗುವದು. [illegible] ಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ [illegible] ಕೊಂಡಪ್ಪನವರೂ ಈ ಸಮಾರಂಭಕ್ಕೆ [illegible] ಲಿರುವರು. ಸದಸ್ಯರೆಲ್ಲ ಬರಬೇಕಾಗಿ ಕಾರ್ಯದರ್ಶಿಗಳು ವಿನ್ನವಿಸುತ್ತಾರೆ.

ಗೋವಾದಿಂದ ಶಸ್ತ್ರಾಸ್ತ್ರಗಳನ್ನು [illegible] ಕಾರವಾರ ಭಾಗದಲ್ಲಿ [illegible] ಸಂಶಯದಿಂದ [illegible] ನಾಲ್ವರನ್ನು [illegible]. [illegible] ಸಿಕ್ಕ ಶಸ್ತ್ರಾಸ್ತ್ರಗಳನ್ನು [illegible] ದ್ದಾರೆ.

ಹಿಂದುಸ್ತಾನ

ಮುಂಬಯಿ

ಆಹಾರಧಾನ್ಯಗಳನ್ನು ಬಾಗುಗೊಳಿಸಲು ಕರಿಕೆ ಹೊಲಸು ಕಿತ್ತಿ ಹಾಕಲು ಮತ್ತು ಆಳವಾಗಿ ನೇಗಿಲು ಹೊಡೆಯಬೇಕಾದಲ್ಲಿ ಟ್ರಾಕ್ಟರು ಗಳನ್ನು ಉಪಯೋಗಿಸಬೇಕೆಂದು ಮುಂಬಯಿ ಸರಕಾರವು ನಿರ್ಧರಿಸಿದೆ.

ಬೆಳಗಾವಿ, ಧಾರವಾಡ, ವಿಜಾಪುರ ನಾಸಿಕ ಅಹಮ್ಮದನಗರ ಜಿಲ್ಲೆಗಳಲ್ಲಿ ವಿಂಡಬಿಯ ಉಪದ್ರವ ಇದೆಯೆಂದು ಮುಂಬಯಿ ಸರಕಾರವು ೨ ಲಕ್ಷ ೬೪ ಸಾವಿರ ರೂಪಾಯಿಗಳ ಒಂದು ಯೋಜನೆ ತಯಾರಿಸಿ ೫೯೭ ಟನ್ ಕ್ರಿಮಿ ನಾಶಕ (ಪೆಸ್ಟಿಸೈಡ್) ಉಪಯೋಗಿಸಬೇಕೆಂದು ನಿರ್ಧರಿಸಿದೆ.

ಹಿಂದುಸ್ತಾನ ಪಶ್ಚಿಮ ಕರಾವಳಿಯಲ್ಲಿ ದೊಡ್ಡ ಬಂದರ ಕಟ್ಟಬೇಕಾದರೆ ಭಟಕಳದ ಲ್ಲಿಯೇ ಕಟ್ಟಬೇಕೆಂದು ಸರ್ ವಿಶ್ವೇಶ್ವರಯ್ಯ ನವರು ತಾ ೨ ಕ್ಕೆ ಕೊಟ್ಟ ಒಂದು ಸಂದರ್ಶನದ ಕಾಲಕ್ಕೆ ಹೇಳಿದರು.

ಅವರ ನಿಯಂತ್ರಣ ಮಂಡಳದ ಸದಸ್ಯರಾಗಿದ್ದ ಶ್ರೀ ಜಗಜೀವನದಾಸ ಮೋಹಾಭಾಯಿ ಯವರು ಒಂದು ಹೇಳಿಕೆ ಹೊರಡಿಸಿ, ರೈತರ ಹಿತದ ದೃಷ್ಟಿಯಿಂದ ಅರಳೆಯ ಕನಿಷ್ಠ ಬೆಲೆ ಮಾತ್ರ ನಿರ್ಧರಿಸಬೇಕಲ್ಲದೆ ಪರಮಾವಧಿ ಬೆಲೆ ಇಷ್ಟೇ ಇರಬೇಕೆಂದು ಸರಕಾರವು ನಿರ್ಧರಿಸ ಬಾರದೆಂದು ಹೇಳಿದ್ದಾರೆ.

ಗಾಣಗಾಪೂರದ ಹತ್ತಿರ ಕುಲಾಲಿ ಎಂಬ ಸ್ಟೇಶನದಲ್ಲಿ ಮದ್ರಾಸ ಎಕ್ಸಪ್ರೆಸ್ ನಿಲ್ಲುವದಿಲ್ಲ ವಾದರೂ ಸಶಸ್ತ್ರ ರಜಾಕಾರರು ಅಲ್ಲಿಯ ಸ್ಟೇಶನ್ ಮಾಸ್ತರನನ್ನು ಜೀವದ ಹೆದರಿ ಹಾಕಿ ನಿಲ್ಲಿಸಬೇಕೆಂದು ಒತ್ತಾಯಪಡಿಸಿದರಂತೆ. ಸ್ಟೇಶನ್ ಮಾಸ್ತರನು ನಡುಗುವ ಕೈಯಿಂದ ಸಿಗ್ನಲ ನ್ನು ತೋರಿಸಿದ್ದನ್ನೂ ಅವನ ಭಯಗ್ರಸ್ತ ಸ್ಥಿತಿಯನ್ನೂ ನೋಡಿದ ಡ್ರಾಯವ್ಹರನು ಗಾಡಿಯನ್ನು ನಿಲ್ಲಿಸದೆ ಮುಂದೆ ಸಾಗಿಸಿದ್ದಾ ನಿಯೂ ಈಗ ಸ್ಟೇಶನ ಮಾಸ್ತರನು ಕಾಣೆಯಾಗಿದ್ದು ಅವನ ಕೊಲೆಯಾಗಿರಬೇಕೆಂದೂ ತಿಳಿಯುತ್ತದೆ.

ಖಡಕಿ ಸ್ಟೇಶನದಲ್ಲಿಯ ಮುಸಲ್ಮಾನ ಗೂಡ್ಸ್ ಕ್ಲಾರ್ಕನು ಸೈನ್ಯ ಶಾಖೆಯ ೪ ಟ್ಯಾಂಕುಗಳನ್ನು ಜಬಲಪುರಕ್ಕೆ ಕಳಿಸುವ ಬದಲು ನಿಜಾಮ ಹದ್ದಿಯ ವಾಡಿ ಸ್ಟೇಶನಕ್ಕೆ ಕಳಿಸಿದ್ದರಿಂದ ಪಂಚಮ ದಳದ ಕೆಲಸವಾಡುವನೆಂದು ಅವನನ್ನು ಬಂಧಿಸಲಾಗಿದೆ.

ಮೈಸೂರ ಸರಕಾರವು ಜೋಗದ ವಿದ್ಯುಚ್ಛಕ್ತಿಯನ್ನು ಪೂರೈಸಲು ಒಪ್ಪಿಕೊಂಡಿರುವದರಿಂದ ಹುಬ್ಬಳ್ಳಿ, ಗದಗ, ಬಾಗಲಕೋಟ, ದಾಂಡೇಲಿ ಬೆಳಗಾವಿ ನಗರಗಳಿಗೆ ಮತ್ತು ಸುತ್ತುಮುತ್ತಲಿನ ಪ್ರದೇಶಕ್ಕೆ ಎಷ್ಟು ವಿದ್ಯುತ್ ಶಕ್ತಿ ಬೇಕಾಗಬಹುದೆಂಬುದನ್ನು ಪರಿಶೀಲಿಸಬೇಕೆಂದು ಮುಂಬಯಿ ಸರಕಾರವು ತನ್ನ ಇಲೆಕ್ಟ್ರಿಕ್ ಕಮಿಶನರರನ್ನು ಕೇಳಿಕೊಂಡಿದೆ.

ಪೋಲೀಸ ಪಡೆಯಲ್ಲಿ ಸುಶಿಕ್ಷಿತ ತರುಣರು ಹೆಚ್ಚಾಗಿ ಸೇರುವಂತೆ ಮುಂಬಯಿ ಸರಕಾರವು ಏರ್ಪಾಡು ಮಾಡುತ್ತಿದೆಯೆಂದು ತಿಳಿಯುತ್ತದೆ. ಅವರವರ ಶಿಕ್ಷಣಕ್ಕನುಸಾರವಾಗಿ ದರ್ಜಾರವನ್ನೂ ಹುದ್ದೆಗಳನ್ನೂ ಕೊಡುವ ವ್ಯವಸ್ಥೆಯಾಗುವದು. ಪೋಲೀಸ ಸಬ್ ಇನಸ್ಪೆಕ್ಟರರ ಸ್ಥಳಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಏರ್ಪಡಿಸಿ ಯೋಗ್ಯರನ್ನು ಆರಿಸಲಾಗುವದೆಂದೂ ತಿಳಿಯುತ್ತದೆ.

ಹಿಂದುಸ್ತಾನದ ಮೊದಲನೇ ಪ್ರಯಾಣಿಕರ ಹಡಗವಾದ "ಜಲ ಅಝಾದ" ವು ತಾ ೬ ಕ್ಕೆ ಒಂದು ಒಳ್ಳೊಟ ಧ್ವಜವನ್ನು ಎತ್ತಿ ೫೫೦ ಪ್ರಯಾಣಿಕರನ್ನು ಕೂಡಿಸಿಕೊಂಡು ಇಂಗ್ಲಂಡಿಗೆ ಪರ್ಯಟನ ಮಾಡಿತು. ಜೊತೆಗೆ ೨೦೦ ಟನ್ ಟಪ್ಪಾಲೂ ಇತ್ತು. ಆಗಸ್ಟ ೨೭ ಕ್ಕೆ ಅದು ಲಂಡನ್ ತಲುಪುವದು. "ಜಲ ಜವಾಹರ" ಎಂಬ ಇನ್ನೊಂದು ಹಡಗು ಇಂಗ್ಲಂಡದಿಂದ ಮುಂಬಯಿಗೆ ಸಪ್ಟಂಬರ ೨ ನೇ ವಾರ ಹೊರಡಲಿದೆಯೆಂದು ತಿಳಿಯುತ್ತದೆ. ಇವನ್ನು ಸಿಂಧಿಯಾ ಸ್ಟೀಮ ನೇವ್ಹಿಗೇಶನ್ ಕಂಪನಿಯವರು ಕಟ್ಟಿದ್ದಾರೆ.

ಹಿಂದುಸ್ತಾನದಲ್ಲಿ ಹಾಸುವ ರೇಲ್ವೆಗಿಂತ ಪಾಕಿಸ್ತಾನಕ್ಕೆ ಅಗ್ಗದ ದರದಿಂದ ೫ ಸಾವಿರ ಟನ್ ಸಕ್ಕರೆಯನ್ನು ಹಿಂದುಸ್ತಾನ ಸರಕಾರವು ಮಾರಲಿರುವದೆಂದೂ ಮುಂಬಯಿ ಸಕ್ಕರೆ ವ್ಯಾಪಾರಸ್ಥರ ಸಂಸ್ಥೆಯವರು ಇದನ್ನು ಪ್ರತಿಭಟಿಸಿ ಆಹಾರ ಮಂತ್ರಿಗಳಾದ ಶ್ರೀ ಜಯ

ರಾಮದಾಸ ದೌಲತರಾಮರಿಗೆ ತಂತಿ ಕಳಿಸಿದ್ದಾರೆಂದೂ ತಿಳಿಯುತ್ತದೆ.

ಹೈದರಾಬಾದಕ್ಕೆ ಕ್ಲೋರಿನ್ ಕಳಿಸುವದನ್ನು ಮುಂಬಯಿ ಸರಕಾರವು ನಿಲ್ಲಿಸಿದೆಯೆಂದು ಹೈದರಾಬಾದ ಸರಕಾರವು ದೂರುತ್ತಿರುವದು ಅಸತ್ಯವೆಂದೂ ಹೋದ ತಿಂಗಳವೇ ೧೦ ಸಾವಿರ ಪೌಂಡು ಕ್ಲೋರಿನ್ ೨ ಲಕ್ಷ ಸಿ. ಸಿ. ಕಾಲರಾ ಚುಚ್ಚು ಮದ್ದು ಅಲ್ಲದೆ ಪ್ರಚುರ ಪ್ರಮಾಣದಲ್ಲಿ ಸಾಲ್ವಸಾವಸಾಯ್ಕು ಇತ್ಯಾದಿಯನ್ನು ಕೊಡಮಾಡಿದೆಯೆಂದೂ ಮುಂಬಯಿ ಸರಕಾರವು ಒಂದು ಪ್ರಕಟನೆಯ ಮೂಲಕ ಹೇಳಿದೆ.

ಇದೇ ಅಗಸ್ಟ ೨೦ ಕ್ಕೆ ಪ್ರಾಂತಗಳಿಗೂ ಅವುಗಳಿಗೆ ಬೇಕಾಗುವಷ್ಟು ಬಟ್ಟೆಯನ್ನು ಸಂಸ್ಥಾನಗಳಿಗೂ ಹಂಚಲಾಗುವದು. ಬಟ್ಟೆಯ ಮೇಲೆ ಹೊಸಬೆಲೆ ಮುದ್ರಿಸಲ್ಪಡುವದು. ಬೆಲೆಗಳು ಜನರಿಗೆ ಅನುಕೂಲವಾಗುವಂತೆಯೇ ಇದೆಯೆಂದು ತಿಳಿಯುತ್ತದೆ. ಮುಂದೆ ಬಟ್ಟೆ ಸಿಗಲಿಕ್ಕಿಲ್ಲವೆಂದು ಈಗಲೇ ಯಾರೂ ಬಟ್ಟೆ ಕೊಳ್ಳುವ ಕಾರಣವಿಲ್ಲವೆಂದೂ ಈ ಸಲ ಅತಿ ಕಠೋರ ರೀತಿಯಿಂದ ಅರಿವೆಯ ನಿಯಂತ್ರಣ ಹೇರಲಾಗುತ್ತಿದೆಂದೂ ತಿಳಿಯುತ್ತದೆ.

ಜಾತೀಯ ಸಂಸ್ಥೆಗಳಿಂದ ಏರ್ಪಡಿಸಲ್ಪಟ್ಟ ಯಾವವೇ ಪರಿಷತ್ತುಗಳಲ್ಲಿ ಸರಕಾರೀ ನೌಕರರು ಭಾಗವಹಿಸಕೂಡದೆಂದೂ ಅಲ್ಲಿ ಹಾಜರ ಇರಕೂಡದೆಂದೂ ಸರಕಾರದವರು ನಿರ್ಣಯಿಸಿದ್ದಾರೆ. ಈ ವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಪರಿಷತ್ತುಗಳಿಗೆ ಸರಕಾರಿ ನೌಕರರು ಹೋಗಲು ಆಸ್ಪದವಿತ್ತು. ಆದರೆ ಜಾತೀಯತೆಯ ನಿರ್ಮೂಲನದ ದೃಷ್ಟಿಯಿಂದ ಆ ಧೋರಣದಲ್ಲಿ ಈಗ ಬದಲಾಗಿದೆ.

ಸಮತಾವಾದಿ ಪಕ್ಷದ ಮುಂಬಯಿ ಮಜದೂರ ಸಂಘವು ಇದೇ ಅಗಸ್ಟ ೧೧ ಕ್ಕೆ ಒಂದು ದಿನದ ಸಾಂಕೇತಿಕ ಸಂಪನ್ನು ಹೂಡಬೇಕೆಂದು ಮಾಡಿದ ವಿಷಯವನ್ನು ವಿಚಾರಣೆಮಾಡಬೇಕೆಂದು ಮುಂಬಯಿ ಸರಕಾರವು ಔದ್ಯೋಗಿಕ ನ್ಯಾಯಾಲಯಕ್ಕೆ ಕೇಳಿಕೊಂಡಿತ್ತು. ಈ ಸಂಪನ್ನು ಜವಳಿ ಕೆಲಸಗಾರರು ಆಚರಿಸಿದರೆ ಅದು ಅಕ್ರಮವಾಗುವದೆಂದು ತಾ ೯ ಕ್ಕೆ ತೀರ್ಪುಕೊಡಲಾಗಿದೆ.

ಮಧ್ಯಪ್ರಾಂತ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಧಾನ ಸಂಘಟಕರಾದ ಶ್ರೀ ಎಂ. ಎಸ್. ಗೋಲವಾಲಕರರನ್ನು ತಾ ೬ ಮುಂಜಾನೆ ನಾಗಪುರ ಕೇಂದ್ರ ಕಾರಾಗಾರದಿಂದ ಬಿಡುಗಡೆ ಮಾಡಲಾಯ್ತು. ಜಿಲ್ಲಾ ಅಧಿಕಾರಿಗಳ ಅಪ್ಪಣೆಯಿಲ್ಲದೆ ನಾಗಪುರ ಬಿಟ್ಟು ಹೋಗಬಾರದೆಂದೂ ಯಾವ ಸಭೆಯಲ್ಲಿಯೂ ಭಾಷಣ ಮಾಡಬಾರದೆಂದೂ ಪತ್ರಿಕೆಗಳಿಗೆ ಬರೆಯಕೂಡದೆಂದೂ ಇವರ ಮೇಲೆ ನಿರ್ಬಂಧ ಹಾಕಲಾಗಿದೆ.

ಮದ್ರಾಸ

ಮದ್ರಾಸ ಪ್ರಾಂತದ ಒಕ್ಕೂಟಗಡಿಯಲ್ಲಿ ನಿಜಾಮ ಗುಪ್ತಚಾರರ ಸುಳಿದಾಟ ಹೆಚ್ಚಾಗಿದ್ದು ಜುಲೈ ಕೊನೆಯವಾರದಲ್ಲಿ ೨೫ ನಿಜಾಮ ಗುಪ್ತಚಾರರು ಬಂಧಿಸಲ್ಪಟ್ಟಿದ್ದಾರೆ. ಇವರಲ್ಲಿ ಒಬ್ಬ ಹೆಣ್ಣುಮಗಳಿದ್ದಾಳೆ.

ಯುಕ್ತಪ್ರಾಂತ

ಪೂಣಪೂಣ ಮತ್ತು ಫಲ್ಗು ನದಿಗಳಿಗೆ ಮಹಾಪೂರ ಬಂದದ್ದರಿಂದ ೪೦೦ ಹಳ್ಳಿಗಳು ನೀರಲ್ಲಿ ನಿಂತಿವೆಯೆಂದೂ ೨೦೦೦ ಮನೆಗಳು ಬಿದ್ದಿವೆಯೆಂದೂ ತಿಳಿಯುತ್ತದೆ.

ಪಶ್ಚಿಮ ಬಂಗಾಲ

ಕಲಕತ್ತೆಯ ಚೀನೀ ನಿವಾಸಿಗಳು ತಾ ೭ ಕ್ಕೆ ಗವರ್ನರರಾದ ಡಾ. ಕಟಜುರವರ ಕೈಯಲ್ಲಿ ೫೭೭೦ ರೂ.ಗಳನ್ನು ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ತಮ್ಮ ವಂತಿಗೆಯೆಂದು ಅರ್ಪಿಸಿದರು.

ಪಾಕಿಸ್ತಾನ ಸರಕಾರದವರು ಪೂರ್ವ ಬಂಗಾಲದಲ್ಲಿಯ ೧೧೦ ಮೈಲಿನ ಮೈಮನಸಿಂಗ ಭುರಿಬಜಾರ ರೇಲ್ವೆಯನ್ನು ೧ ಕೋಟಿ ೩೦ ಲಕ್ಷ ರೂ.ಗಳಿಗೆ ಕೊಂಡುಕೊಂಡಿದ್ದಾರೆ. ಇದಲ್ಲದೆ ೨೦ ಮೈಲುಗಳ ಖುಲನಾ—ಬಾಘೇರಾಟ ರೇಲ್ವೆಯನ್ನೂ ೧೧ ಲಕ್ಷ ರೂ.ಗಳಿಗೆ ಕೊಂಡಿರುವರು.

ಹೊಸದಿಲ್ಲಿ

ಸ್ವಾಟ್ಜರಲೆಂಡಿನಲ್ಲಿ ಕೂಡಲಿರುವ ಸಂಯುಕ್ತ ರಾಷ್ಟ್ರ ಸಂಘದ ಅಧಿವೇಶನಕ್ಕೆ ಹಿಂದುಸ್ತಾನ ಸರಕಾರದವರು ಶ್ರೀಮತಿ ವಿಜಯಲಕ್ಷ್ಮೀ ಪಂಡಿತರನ್ನು ಧುರೀಣರನ್ನಾಗಿ ಮಾಡಿ, ನವಾಬಜಾದಾ ಸಾಹೇಬ, ಜಿ. ಆರ್. ಡಿ ಟಾಟಾ, ಎಂ. ಸಿ ಸೆಟಲವಾಡ, ಬಿ. ಶಿವರಾವ, ಸಿ. ಎಸ್. ಝಾ. ಮೊದಲಾದವರ ಪ್ರತಿನಿಧಿ ಮಂಡಲ ಆರಿಸಿರುವರೆಂದು ತಿಳಿಯುತ್ತದೆ.

ಪ್ರಾಂತಗಳ ಆರೋಗ್ಯ ಮಂತ್ರಿಗಳ ದ್ವಿತೀಯ ಪರಿಷತ್ತಿನಲ್ಲಿ ರೋಗ ನಿವಾರಕ ಮತ್ತು ಪ್ರತಿಬಂಧಕ ಸಂಸ್ಥೆಯ ಅವಶ್ಯಕತೆಯನ್ನು ಸೂಚಿಸುವ ಒಂದು ಗೊತ್ತುವಳಿಯು ಸ್ವೀಕೃತವಾಯಿತು.

ಈದ ದಿನ ನಾವು ನಮ್ಮ ದುಷ್ಟ ಮನೋಭಾವಗಳನ್ನು ತೊಡೆದುಹಾಕಿ ಜನಸೇವೆಯೇ ದೇಶಸೇವೆಯೆಂದು ತಿಳಿದು ನಡೆಯೋಣ. ಈದದ ನಿಮಿತ್ತ ನನ್ನ ಸಹ ನಾಗರಿಕರಾದ ಹಿಂದಿ ಮುಸಲ್ಮಾನರಿಗೆ ನನ್ನ ಶುಭೇಚ್ಛೆಯನ್ನು ವ್ಯಕ್ತಗೊಳಿಸುತ್ತೇನೆ ಎಂದು ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ತಮ್ಮ ಸಂದೇಶ ಕೊಟ್ಟಿದ್ದಾರೆ.

ಪಾಕಿಸ್ತಾನ ವಿಮಾನದಳದವರು ಇತ್ತೀಚೆ ಗುಡ್ಡಗಾಡು ಪ್ರದೇಶದ ಮೇಲೆ ಬಾಂಬು ಹಾಕಿ ಸಿದ್ದನ್ನು ಕಾಬೂಲಿಗಳು ತೀವ್ರವಾಗಿ ಖಂಡಿಸಿದ್ದಾರಲ್ಲದೆ ಪಾಕಿಸ್ತಾನಕ್ಕೆ ಈ ಬಗ್ಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆಂದು ತಿಳಿಯುತ್ತದೆ. ಅಫಗಾನಿಸ್ತಾನ ಸರಕಾರಕ್ಕೆ ಈ ಪ್ರಶ್ನೆಯನ್ನು ಯುಕ್ತರಾಷ್ಟ್ರ ಸಂಘಕ್ಕೆ ಒಯ್ಯಲು ನೈತಿಕ ಹಕ್ಕಿದೆಯೆಂದು "ಅನಿಸ" ಎಂಬ ಪತ್ರವು ಉಲ್ಲೇಖಿಸಿದೆ.

ಪ್ರತಿಯೊಂದು ಪ್ರಮುಖ ಪಟ್ಟಣದಲ್ಲಿಯೂ ರಾಷ್ಟ್ರೀಯ ಸೈನ್ಯವನ್ನು ಸಂಘಟಿಸಲಾಗುವದಲ್ಲದೆ ದಿಲ್ಲಿಯೊಂದರಲ್ಲಿಯೇ ೮ ಸಾವಿರ ಸೈನಿಕರ ಒಂದು ದಳವನ್ನು ಬೇಗ ಸಿದ್ಧಗೊಳಿಸಲಾಗುವದಂತೆ.

ಭಾರತದಲ್ಲಿ ಚಿತ್ರಕಲಾಸಂಸ್ಥೆ, ಸಂಗೀತ, ನೃತ್ಯ, ನಾಟಕ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸುವದಕ್ಕಾಗಿ ಭಾರತ ಸರಕಾರದವರು ಒಂದು ಭಾರತೀಯ ಸಾಂಸ್ಕೃತಿಕ ವಿಶ್ವಸ್ತ ಮಂಡಳವನ್ನು ಸ್ಥಾಪಿಸಲಿರುವರೆಂದು ತಿಳಿಯುತ್ತದೆ. ವಿದೇಶಗಳೊಡನೆಯೂ ಸಾಂಸ್ಕೃತಿಕ ಸಂಪರ್ಕ ಬೆಳೆಸಿಕೊಳ್ಳಲು ಅನೇಕ ಯೋಜನೆ ಸಿದ್ಧಗೊಳಿಸಲಾಗಿವೆ.

ಹಿಂದೀ ಸೈನ್ಯದಲ್ಲಿ ಒಟ್ಟು ೩೦೦ ಬ್ರಿಟಿಶ ಅಧಿಕಾರಿಗಳಿರುವರೆಂದು ಅಧಿಕೃತ ವರ್ಗಗಳಿಂದ ತಿಳಿಯುತ್ತದೆ. ಇವರನ್ನು ಬೇರೆ ಬೇರೆ ತಾಂತ್ರಿಕ ವಿಭಾಗಗಳಲ್ಲಿ ಸಲಹೆಗಾರರೆಂದು ಮಾತ್ರ ಇರಿಸಿಕೊಳ್ಳಲಾಗಿದೆ. ಸೈನ್ಯ ಶಾಖೆಗೆ ಹಿಂದೀಯರೇ ಮುಖ್ಯಾಧಿಪತಿಗಳಾಗಿದ್ದಾರೆ. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನದಲ್ಲಿ ಸೈನ್ಯದ ಅನೇಕ ವಿಭಾಗಗಳಿಗೆ ಬ್ರಿಟಿಶರೇ ಮುಖ್ಯಾಧಿಪತಿಗಳಾಗಿದ್ದಾರೆ. ಬ್ರಿಟಿಶರು ಹಿಂದುಸ್ತಾನ ಪಾಕಿಸ್ತಾನಗಳಿಂದ ತಮ್ಮ ಜನರನ್ನು ತಿರುಗಿ ಕರೆಯಿಸಿಕೊಂಡದ್ದೇ ಆದರೆ ಹಿಂದುಸ್ತಾನಕ್ಕಿಂತ ಪಾಕಿಸ್ತಾನಕ್ಕೆ ಹೆಚ್ಚು ತೊಂದರೆಯಾಗುವದೆಂದು ತಿಳಿಯುತ್ತದೆ.

ಸಮಾಜವಾದೀ ಪಕ್ಷದ ಹೈದರಾಬಾದ ಹೋರಾಟ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಅರುಣಾ ಅಸಫಅಲ್ಲಿಯವರು ಒಂದು ಪ್ರಕಟನೆ ಹೊರಡಿಸಿ, ಸಮಾಜವಾದಿಗಳು ಕೂಡಲೆ ಹೈದರಾಬಾದ ಗಡಿಗೆ ಹೋಗಿ ಕೂಲಿಕಾರರನ್ನೂ ರೈತರನ್ನೂ ಸಂಘಟಿಸಿ ಹೋರಾಟಕ್ಕೆ ಸಿದ್ಧಗೊಳಿಸಬೇಕೆಂದೂ ಆ ಸಂಸ್ಥಾನದ ಜನರಿಗೆ ರಾಜಕೀಯ ಧುರೀಣತ್ವ ಬೇಕಾಗಿರುವ ಈ ಕಾಲದಲ್ಲಿ ಸಮಾಜವಾದಿಗಳು ತೆಪ್ಪಗೆ ಕುಳಿತಿರುವದು ಯುಕ್ತವಲ್ಲವೆಂದೂ ಹೇಳಿದ್ದಾರೆ.

ಶಾಸನ ಸಭೆಯ ಅಧ್ಯಕ್ಷರಾದ ಶ್ರೀಮಾವಳಂಕರರ ನೇತೃತ್ವದಲ್ಲಿ ಇಂಗ್ಲಂಡಿಗೆ ಹೋಗಲಿರುವ ಪಾರ್ಲಮೆಂಟ ಶಿಷ್ಟಮಂಡಲದಲ್ಲಿ ಕನ್ನಡಿಗರಾದ ಶ್ರೀ ಎಸ್. ವಿ. ಕೃಷ್ಣಮೂರ್ತಿಯವರೂ ಇರುವರು. ಈ ಶಿಷ್ಟಮಂಡಳವು ಸಪ್ಟೆಂಬರ ೨೫ ಕ್ಕೆ ಹಿಂದುಸ್ತಾನದಿಂದ ಹೊರಡುವದು.

ದಿಲ್ಲಿಯಲ್ಲಿ ಭಾರತದ ಎಲ್ಲ ಪೋಸ್ಟ ಮಾಸ್ತರರ ಪರಿಷತ್ತು ಕೂಡಿ ಟಿಂಕಿಯ ಪೆಟ್ಟಿಗೆಗಳನ್ನು ಅಂಚೆ ಕಚೇರಿಯ ಮೂಲಕ ಮಾರಬೇಕೆಂದೂ ಹಳ್ಳಿಗಳಲ್ಲಿ ಅಂಚೆಯ ಸೌಕರ್ಯ ಹೆಚ್ಚಿಸುವ ದೃಷ್ಟಿಯಿಂದ ಹಳ್ಳಿಯಪೋಸ್ಟಮಾಸ್ತರ, ರನ್ನರ ಮತ್ತು ಪೋಸ್ಟಮನ್ ಈ ಮೂವರ ಕೆಲಸಗಳನ್ನು ಮಾಡಬಲ್ಲ "ಡಾಕ ಸೇವಕ"

ರನ್ನು ನೇಮಿಸಬೇಕೆಂದೂ ನಿರ್ಣಯಿಸಲಾಯ್ತೆಂದು ತಿಳಿಯುತ್ತದೆ.

ಬ್ರಿ. ಮುಖ್ಯ ಮಂತ್ರಿ ಆಟ್ಲಿಯವರು ಕಳೆದ ಜೂನ ತಿಂಗಳಲ್ಲಿ ಕೈಹಾಕದಿದ್ದರೆ ಭಾರತ—ಪಾಕಿಸ್ತಾನಗಳಲ್ಲಿ ಬಹಿರಂಗ ಯುದ್ಧವೇ ನಡೆಯುತ್ತಿತ್ತೆಂದು ಹಿಂದುಸ್ತಾನ ಟೈಮ್ಸನ ಶ್ರೀನಗರ ಸುದ್ದಿಗಾರನು ಬರೆಯುತ್ತಾನೆ. ಆದರೂ ಪಾಕಿಸ್ತಾನದ ಸೈನ್ಯ ಪಡೆಯು ಜೂನ ೧೫ ಕ್ಕೆ ಭಾರತದ ಮೇಲೆ ದಾಳಿ ಕೈಕೊಂಡಿತೆಂದೂ ನಮ್ಮ ಡಾಣೆಗಳ ಮೇಲೆ ಪಾಕಿಸ್ತಾನದ ವಿಮಾನಗಳು ಹಾರಾಡಿದವೆಂದೂ ಕಾಶ್ಮೀರ ಮಂಡಳದವರು ಸಂಗ್ರಹಿಸಿದ ಸಾಕ್ಷಿ ಪುರಾವೆಗಳಿಂದ ಸಿದ್ಧವಾಗುತ್ತಿದೆಯೆಂದೂ ಹೇಳಲಾಗುತ್ತದೆ.

ಹಿಂದುಸ್ತಾನ ಘಟನಾ ಸಮಿತಿಯ ಕಾಂಗ್ರೆಸ ಪಕ್ಷದ ಸಭೆಯಲ್ಲಿ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಮಾತನಾಡುತ್ತ, ಪರಿಸ್ಥಿತಿ ಅನುಕೂಲವಿದ್ದರೆ ತಾವು ಸಪ್ಟೆಂಬರದಲ್ಲಿ ಕಾಮನ ವೆಲ್ತ ಮುಖ್ಯಮಂತ್ರಿಗಳ ಪರಿಷತ್ತಿಗೆ ಲಂಡನ್ನಿಗೆ ಹೋಗಬಹುದೆಂದೂ ಅದೇ ಕಾಲಕ್ಕೆ ಪ್ಯಾರಿಸದಲ್ಲಿ ಸೇರುವ ಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಗೂ ತಾವು ಹಾಜರ ಇರಬಹುದೆಂದೂ ಹೇಳಿದರೆಂದು ತಿಳಿಯುತ್ತದೆ.

ಎಲ್ಲರಿಗೂ ಮನೆ

ಪೂರ್ವಸಿದ್ಧ ಗೃಹಭಾಗಗಳು

ಆರೋಗ್ಯ ಮಂತ್ರಿಗಳ ೨ ನೇ ಪರಿಷತ್ತು ದಿಲ್ಲಿಯಲ್ಲಿ ತಾ. ೨ ಕ್ಕೆ ರಾಜಕುಮಾರಿ ಅಮೃತ ಕೌರ, ಆರೋಗ್ಯಮಂತ್ರಿ ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಅದರ ಉದ್ಘಾಟನೆ ಮಾಡಿದರು. ಆ ಸಂದರ್ಭದಲ್ಲಿ ಮೊದಲೇ ಹದಗೆಟ್ಟ ವಸತಿಯ ಸಮಸ್ಯೆಯು ನಿರಾಶ್ರಿತರ ಆಗಮನದಿಂದ ಇನ್ನಷ್ಟು ಗಂಭೀರವಾಗಿರುವ ವಿಷಯವನ್ನೆತ್ತಿ ಸರ್ವರಿಗೂ ಮನೆ ಒದಗಿಸಿಕೊಡಲು ಒಂದು ಹೊಸ ಶಾಖೆಯನ್ನೇರ್ಪಡಿಸುವ ನಿರ್ಧಾರವಾಗಿದೆ ಯೆಂದು ನಿರೂಪಿಸಿದರು. ಈ ಬಗ್ಗೆ ಅವರು ಇನ್ನೂ ಹೇಳಿದ್ದು ಹೀಗೆ:

ಎಲ್ಲರಿಗೂ ಮನೆ ಒದಗಿಸಲು ಸರಕಾರದವರು ಒಂದು ಕಾರಖಾನೆಯನ್ನು ಸ್ಥಾಪಿಸಲಿದ್ದಾರೆ. ಈ ಕಾರಖಾನೆಯಲ್ಲಿ ಉಕ್ಕು ಮತ್ತು ಸಿಮೆಂಟ ಇವುಗಳ ಉಪಯೋಗವಿಲ್ಲದೆ ಮನೆಗಳನ್ನು ಸುಲಭವಾಗಿ ಕಟ್ಟಲು ಬರುವಂತೆ ಮನೆಯ ವಿಭಾಗಗಳನ್ನೆಲ್ಲ ಮೊದಲೇ ಸಿದ್ಧಗೊಳಿಸಲಾಗುವದು. ಈ ಭಾಗಗಳನ್ನೆಲ್ಲ ಒಟ್ಟಾಗಿ ಜೋಡಿಸಿಬಿಟ್ಟರೆ ಸುಲಭವಾಗಿ ಮತ್ತು ಬಹು ಬೇಗ ಮನೆ ಸಿದ್ಧವಾಗುವದು. ಇಂತಹ ಪೂರ್ವಸಿದ್ಧ ಭಾಗಗಳಿಂದ ಎರಡು ಕೋಣೆಗಳು, ಒಂದು ಅಡಿಗೆಯ ಮನೆ ಒಂದು ಬಚ್ಚಲಮನೆ ಒಂದು ಬಂಕ ಒಂದು ಅಂಗಳ ಇಷ್ಟನ್ನು ಕಟ್ಟಲು ೨೫೦೦ ರೂ. ವೆಚ್ಚ ತಗಲುವದೆಂದು ನಿರೀಕ್ಷೆಯಿದೆ.

ಎಲ್ಲ ಪ್ರಾಂತಗಳಲ್ಲಿಯೂ ಸಂಸ್ಥಾನಗಳಲ್ಲಿಯೂ ಇದೇ ಮಾದರಿಯ ಮನೆ ಕಟ್ಟಿಸುವ ಶಾಖೆಯನ್ನು ಸ್ಥಾಪಿಸುವದು ಅವಶ್ಯವಿದೆ.

ಅನ್ನವರ್ಧನಕ್ಕೆ ೬೯ ಲಕ್ಷ ರೂ.

ಆಹಾರ ವರ್ಧನದ ಪ್ರಚಾರಕ್ಕಾಗಿ ಕೇಂದ್ರ ಸರಕಾರದ ಕೃಷಿಶಾಖೆಯವರು ೧೯೪೮-೪೯ ಒಂದು ವರ್ಷದ ಸಲುವಾಗಿ ಯುಕ್ತಪ್ರಾಂತಕ್ಕೆ ೯೧, ೮೬, ೩೫೦ ರೂ. ಮುಂಬಯಿ ಪ್ರಾಂತಕ್ಕೆ ೬೯, ೦೪, ೮೬೩ ರೂ. ಸಹಾಯಧನ ಕೊಡಮಾಡಿದ್ದಾರೆ. ಪ್ರಾಂತಿಕ ಸರಕಾರಗಳು ಕೇಂದ್ರ ಸರಕಾರದಿಂದ ಸಹಾಯ ಸ್ವೀಕರಿಸಿದಷ್ಟು ಹಣವನ್ನು ತಮ್ಮ ಉತ್ಪನ್ನದಿಂದ ಕೂಡಿಸಿ ವೆಚ್ಚ ಮಾಡತಕ್ಕದ್ದೆಂದು ಕರಾರು ಹಾಕಲಾಗಿದೆ. ಮುಂಬಯಿ ಪ್ರಾಂತಕ್ಕೆ ದೊರೆತ ಸಹಾಯಧನದಲ್ಲಿ ೨೩, ೯೩, ೫೪೦ ರೂ. ಸಣ್ಣ ನೀರಾವರಿ ಯೋಜನೆಗಾಗಿ ವೆಚ್ಚವಾಗಲಿರುವದೆಂದು ತಿಳಿಯುತ್ತದೆ.

ದಿಲ್ಲಿಯಲ್ಲಿ ಕನ್ನಡ ಅಧಿಕಾರಿ

ಕನ್ನಡಿಗರಾದ ಶ್ರೀ. ವ್ಹಿ. ನರಹರಿರಾಯರು ಹಿಂದುಸ್ತಾನ ಸರಕಾರದ ಪ್ರಥಮ ಹಿಂದೀ ಆಡಿಟರ ಜನರಲ್‌ರಾಗಿ ನೇಮಕಹೊಂದಿದ್ದಾರೆ. ದಿಲ್ಲಿಯ ಕರ್ನಾಟಕ ಸಂಘವು ಶ್ರೀಯುತರಿಗೆ ತಾ. ೩ ರಂದು ಸತ್ಕಾರಕೂಟ ಏರ್ಪಡಿಸಿತ್ತು. ಘಟನಾಸಮಿತಿಯ ಸದಸ್ಯರಾದ ಶ್ರೀ ಅನಂತಶಯನಂ ಅಯ್ಯಂಗಾರರು ಅಧ್ಯಕ್ಷರಾಗಿದ್ದರು. ಈ ಕಾಲಕ್ಕೆ ಸರ್ ಮಿರ್ಝಾ ಇಸ್ಮಾಯಿಲ, ಡಾ. ವ್ಹಿ. ಕೆ. ಆರ್. ವ್ಹಿ. ರಾವ ಇವರೇ ಮೊದಲಾದವರು ಭಾಷಣಮಾಡಿ ಶ್ರೀಯುತರ ಯೋಗ್ಯತೆಯನ್ನು ಹೊಗಳಿದರು.

ಚಿಕ್ಕಕತೆ

ರಕ್ತದ ಸೆಳೆತ

— ಲೇಖಕ —

ಶ್ರೀ. ಜೈತ್ಯಾಯನಾಚಾರ್ಯ ಜಹಾಗೀರದಾರ

"ಇನ್ನು ಮೇಲೆ ಅವಳ ಮದುವೆಯನ್ನು ಮಾಡಲು ಏನು ಅತಂಕವಿದೆ? ನೀವು ಅವಳ ಅಣ್ಣಂದಿರು. ನಿಮ್ಮ ಹೊರತು ಪ್ರಯತ್ನ ಮಾಡುವವರು ಯಾರಿದ್ದಾರೆ?" ಎಂದು ಜಯದೇವಿಯು ಶ್ರೀಧರನಿಗೆ ನುಡಿದಳು.

"ಜಯಾ, ಬಿ.ಎ. ಆದ ಹೊರತು ಕಮಲಳು ಮದುವೆಯಾಗಲಾರಳು, ಶಿಕ್ಷಣದ ಕಡೆಗೆ ಅವಳ ಒಲವು ವಿಶೇಷವಾಗಿದೆ ಮತ್ತು ನನ್ನಂತಹ ಅಣ್ಣನು ಅವಳ ಸಲುವಾಗಿ ಬೇಕಾದಷ್ಟು ವೆಚ್ಚಮಾಡಲು ಸಿದ್ಧನಿದ್ದ ಮೇಲೆ ಅವಳಿಗೆ ಕಲಿಯಲು ಅತಂಕವೇನು?" ಎಂದು ಶ್ರೀಧರನು ನುಡಿದನು.

"ಬಿ. ಎ. ಅಂದರೆ ಇನ್ನೂ ಎರಡು ವರುಷ, ನಾನು ನಿಮಗೆ ಖಂಡಿತವಾಗಿ ಹೇಳುವೆ ಇನ್ನು ಮೇಲೆ ನನಗೂ ಕಮಲಳಿಗೂ ಕೂಡಿ ನಡೆಯದು."

"ಜಯಾ, ಕಮಲಳು ನಿನ್ನೊಂದಿಗೆ ಪ್ರೇಮದಿಂದಿರುವದಿಲ್ಲವೇ?"

ಜಯದೇವಿಯು ಸ್ಪಷ್ಟೋಕ್ತಿಯಲ್ಲಿ "ಅದನ್ನೇನೂ ನನಗೆ ಹೇಳಬೇಡಿರಿ. ಅವಳ ಲಗ್ನ ಮಾಡಿರಿ ಇಲ್ಲವೆ ಅವಳಿಗೆ ಬೇರೆ ಇರಲು ವ್ಯವಸ್ಥೆ ಮಾಡಿರಿ."

"ಜಯಾ, ನೀನು ಹೀಗೇಕೆ ಮಾತಾಡುವಿ? ಅವ್ವನು ಸಾಯುವಾಗ ಕಮಲಳನ್ನು ಚನ್ನಾಗಿ ನೋಡಿಕೊಳ್ಳಬೇಕೆಂದು ನನ್ನಿಂದ ವಚನ ತೆಗೆದುಕೊಂಡಿಲ್ಲವೇ?"

"ವಚನ!" ಎಂದು ವ್ಯಂಗವಾಗಿ ಜಯದೇವಿಯು ನುಡಿದಳು

"ಜಯಾ ಕೇವಲ ಅವ್ವನಿಗೆ ಕೊಟ್ಟ ವಚನದ ಸಲುವಾಗಿಯಲ್ಲ, ಕಮಲಳು ನನ್ನ ಮೇಲೆ ಮಾಡುವ ಪ್ರೇಮಕ್ಕಾಗಿಯಾದರೂ ನಾನು ಹೀಗೆ ಮಾಡಬೇಡವೇ!"

"ನನಗೇನೂ ಅದು ತಿಳಿಯುವದಿಲ್ಲ. ವಿಚಾರಿಸಿ ನೋಡಿರಿ. ನನಗೆ ಒಂದು ನಿಶ್ಚಿತ ಉತ್ತರ ಕೊಡಿರಿ," ಎಂದು ಹೇಳಿ ಹೊರಟು ಬಿಟ್ಟಳು.

ಶ್ರೀಧರನಿಗೆ ಇತ್ತ ಭಾವಿ, ಅತ್ತ ಕೆರೆ ಯಂತಾಯಿತು. ಹೆಂಡತಿಯನ್ನು ಕಟ್ಟಿಕೊಂಡಿರಬೇಕೆ ತಂಗಿಯನ್ನು ಬಿಟ್ಟಿರಬೇಕೆ? ಎರಡು ವರುಷದ ಹಿಂದಿನ ಸಂಗತಿಗಳು ಕಣ್ಣಿಂದೆ ಕಟ್ಟಿದಂತಾದವು.

ಆಗ ಮನೆಯಲ್ಲಿ ಶ್ರೀಧರ, ಕಮಾ ಹಾಗು ಆವರ ಅವ್ವ ಹೀಗೆ ಮೂರೇ ಜನರಿದ್ದರು. ಶ್ರೀಧರ ಪ್ರಸಿದ್ಧ ಡಾಕ್ಟರ. ಕಮಲಳು ಕಲಿಯುತ್ತಿದ್ದಳು. ಅವಳಿಗೆ ತನ್ನ ಅಣ್ಣನ ಬಗ್ಗೆ ಒಳ್ಳೇ ಅಭಿಮಾನ. ಶ್ರೀಧರನಾದರೂ ಕಮಲಳಿಗೆ ತಂದೆಯ ನೆನಪು ಸಹ ಬಾರದಂತೆ ನೋಡಿಕೊಳ್ಳುತ್ತಿದ್ದ. ಆ ದಿನಗಳು ಒಳ್ಳೇ ಆನಂದದಿಂದ ಸಾಗಿದ್ದವು ಆದರೆ ಈ ಸುಖದ ದಿನಗಳನ್ನು ನೋಡುವದು ದೇವರಿಂದಾಗಲಿಲ್ಲ. ರಾಧಾಬಾಯಿ ಕಾಲವಶರಾದರು. ತಾಯಿಯ ಸ್ಮರಣೆಯಿಂದ ಶ್ರೀಧರನ ಕಣ್ಣುಗಳು ತುಂಬಿ ಬಂದವು. ತಾಯಿಯ ಮರಣದ ಎಂಟು ಹತ್ತು ತಿಂಗಳ ನಂತರ ಒದಗಿದ ಸಂಗತಿಯು ನೆನಪಿಗೆ ಬಂದಿತು.

ಅಂದು ಕಮಲಳು ಗೆಳತಿಯ ಮನೆಗೆ ಹೋಗಿದ್ದಳು. ಶ್ರೀಧರನೊಬ್ಬನೇ ಮನೆಯಲ್ಲಿದ್ದ. ಇದಲ್ಲದೆ ಅಂದು ರವಿವಾರ. ದವಾಖಾನೆಗೆ ಬಿಡುವು. ಹೊರಗೆ ಹೋಗುವ ಗಡಬಿಡಿಯೂ ಇದ್ದಿಲ್ಲ. ಕಮಲಳು ಬಂದೊಡನೆ ಚಹಾ ತೆಗೆದುಕೊಂಡು ಹೋಗಬೇಕೆಂದು ಅವಳದೇ ದಾರಿಕಾಯುತ್ತಿದ್ದ. ಅಷ್ಟರಲ್ಲಿಗಂಟೆ ಬಾರಿಸಿ ಯಾರೊ ಬಂದಿರುವರೆಂದು ಎಚ್ಚರಿಸಿತು.

ಕಮಾ, ಬಂದೆ ಎಂದು ಶ್ರೀಧರನು ಗಡಿಬಿಡಿಯಿಂದ ಬಾಗಿಲ ತೆರೆದನು. ಎದುರಿಗೆ ಓರ್ವ ಸುಸ್ವರೂಪ ಯುವತಿಯು ನಿಂತಿದ್ದಳು.

"Sorry ಕಮಾನೇ ಬಂದಳೆಂದು ತಿಳಿದಿದ್ದೆ ನಿಮಗೆ ಯಾರು ಬೇಕು?"

"ನಾನು ಜಯದೇವಿ ದೇಸಾಯಿ ಕಮಾನ ಗೆಳತಿ" ಎಂದು ಜಯದೇವಿಯು ನುಡಿದಳು.

"ಏನಾದರೂ ಕೆಲಸವಿತ್ತೆ?"

"ಛೆ, ಅದೇನಿಲ್ಲ, ನನಗೆ ಅವಳ ಟಿಪ್ಪಣಿ ಪುಸ್ತಕ ಬೇಕಾಗಿತ್ತು. ಅವಳು ಮನೆಗೆ ಬಾ ಎಂದು ಹೇಳಿದ್ದಳು. ಅದಕ್ಕೆ ಬಂದೆ"

ಇವಳ ರೂಪ ಕಣ್ಣಿಂದೆ ಕಟ್ಟಿಹೋಯ್ತು. ಅವನು ರಾತ್ರಿಯಲ್ಲಿ "ಕಮಾ, ಜಯದೇವಿಯು ಯಾವ ದೇಸಾಯರ ಮಗಳು?" ಎಂದು ಕೇಳಿದ.

"ಯಾಕೆ? ರಾವಸಾಹೇಬ ದೇಸಾಯರ ಕಡೆಗೆ ಹೋಗಬೇಕಾಗಿದೆ ಎಂದು ಕಾಣುತ್ತದೆ"

"ಅಲ್ಲಿಗೇಕೆ?" ಎಂದು ಆಶ್ಚರ್ಯದ ಆವಿರ್ಭಾವವನ್ನು ವ್ಯಕ್ತಪಡಿಸುತ್ತ ಶ್ರೀಧರನು ನುಡಿದನು.

"ನಿಮ್ಮ ಮಗಳನ್ನು ನನಗೆ ಕೊಡುವಿರಾ? ಎಂದು ವಿಚಾರಿಸಲಿಕ್ಕೆ" ಎಂದು ಕಮಾ ನಗುತ್ತ ನುಡಿದಳು.

"ಕಮಾ, ಬಾಯಿ ಮುಚ್ಚು" ಶ್ರೀಧರನು ಸಿಟ್ಟಿನಿಂದ ನುಡಿದ. ಆದರೆ ಆ ಸಿಟ್ಟು ಕೊನೆಯ ವರೆಗೆ ಉಳಿಯಲಿಲ್ಲ. ಅದು ಕಡತಂದ ಸಿಟ್ಟು. ಅವನಿಗೆ ನಗೆ ಬಂದಿತು. ಕಮಲಳು ನಕ್ಕಳು, ಅಣ್ಣನ ಅಭಿಪ್ರಾಯವನ್ನು ಕಮಾ ಸಂಪೂರ್ಣವಾಗಿ ಅರಿತುಕೊಂಡಳು.

ಕಮಲಳ ರಾಯಭಾರದಿಂದ ಕೊನೆಗೆ ಒಂದು ದಿನ ಮದುವೆಯು ನಿಶ್ಚಯವಾಗಿ ಜಯದೇವಿಯು ಕಮಲೆಯ ಅತ್ತಿಗೆಯಾಗಿ ಡಾಕ್ಟರನ ಮನೆಯನ್ನು ಪ್ರವೇಶಿಸಿದಳು.

ಮೊದಲಿನ ಒಂದೆರಡು ತಿಂಗಳು ಒಳ್ಳೇ ಆನಂದದಲ್ಲಿ ಕಳೆದವು. ಆದರೆ ಶರತ್ಕಾಲದಲ್ಲಿ ನಿರಭ್ರವಾದ ಆಕಾಶವು ಮಳೆಗಾಲದಲ್ಲಿ ಮೋಡಗಳಿಂದ ವ್ಯಾಪಿಸುವಂತೆ ಮನೆಯಲ್ಲಿಯ ಸುಖಮಯ ವಾತಾವರಣವು ಬದಲಾಗಿ ಅದರ ಸ್ಥಳದಲ್ಲಿ ಮಾತ್ಸರ್ಯದ ಮೋಡ ಕವಿಯಿತು.

ಹೊಸಬಳ ಆಗಮನದಿಂದ ಅಣ್ಣ-ತಂಗಿಯರಪ್ರೇಮಕ್ಕೆ ಭಂಗ ಬರತೊಡಗಿತು. ಸಣ್ಣಪುಟ್ಟ ಕಾರಣಗಳ ಮೂಲಕ ಮತ್ಸರದ ಬೀಜವು ಬಿತ್ತಲ್ಪಟ್ಟಿತು. ನಗೆಯ ವಾತಾವರಣವು ಇಲ್ಲದಾಯಿತು.

ರೂಪಾಂತರ ಹೊಂದಿದ ಮನೆಯ ಪರಿಸ್ಥಿತಿಯ ಪರಿಚಯವಾಗಿ ಕಮಲಳಿಗೆ ದುಃಖವಾಗದೆ ಹೋಗಲಿಲ್ಲ. ಆದರೆ ತಾನೇ ತಂದ ಜಯದೇವಿಯ ಬಗ್ಗೆ ಪ್ರೇಮವು ಮಾತ್ರ ಕೊಂಚ ಕೂಡ ಕಡಿಮೆಯಾಗಲಿಲ್ಲ.

"ನಾನು ಹೇಳಿದ್ದರ ಬಗ್ಗೆ ವಿಚಾರ ಮಾಡಿದಿರಾ?" ಎಂದು ಜಯದೇವಿಯು ನೀರಿನ ಕೊಡವನ್ನು ಹೊತ್ತುಕೊಂಡು ಕೋಣೆಗೆ ಹೋಗುವಾಗ ನುಡಿದಳು.

"ಜಯಾ, ನಿನ್ನ ತಲೆಯಲ್ಲಿ ಈ ಹುಚ್ಚು ಎಲ್ಲಿಂದ ಬಂದಿತು?" ಎಂದು ಪ್ರೇಮವನ್ನು ತೋರಿಸುತ್ತ ಶ್ರೀಧರನು "ಅವಳು ನಿನ್ನ ಗೆಳತಿಯಲ್ಲವೆ?" ಎಂದು ಕೇಳಿದ.

"ಗೆಳತಿಯಾಗಿದ್ದಳು. ಈಗ ನಾನು ಅವಳ ಅತ್ತಿಗೆ. ಅವಳು ನನ್ನ ನಾದಿನಿ" ಎಂದು ಜಯದೇವಿಯು ನುಡಿದಳು.

"ವ್ಹಾ! ವ್ಹಾ! ಅಂದರೆ ಗೆಳತಿಯ ಸಂಬಂಧ ಮುತ್ತಿಷ್ಟು ಗಟ್ಟಿಯಾಗಲಿಲ್ಲವೆ?"

"ಶಬ್ದಾರ್ಥ ಹೊರಳಿಸಲು ನಿಮಗೆ ಚನ್ನಾಗಿ ಬರುತ್ತದೆ. ಇನ್ನು ಮಾತು ಬೆಳೆಸುವದು ಬೇಡ. ಏನಾದರೂ ಒಂದು ನಿರ್ಣಯವನ್ನು ಹೇಳಿರಿ."

"ಜಯಾ! ಅವಳು ನನ್ನ ತಂಗಿ. ಅವಳ ವಿಷಯವಾಗಿ ನಾನು ನನ್ನ ಕರ್ತವ್ಯವನ್ನು ಮಾಡಲೇಬೇಕು" ಎಂದು ಶ್ರೀಧರನು ಗಂಭೀರ ಸ್ವರದಿಂದ ನುಡಿದನು.

ತನ್ನ ಸಲುವಾಗಿಯೇ ಏನೊ ವಾದ-ವಿವಾದ ನಡೆದಿದೆ ಎಂದು ತಿಳಿದು ಬದಿಯ ಕೋಣೆಯಲ್ಲಿ ಹೊರ ಹೊರಡುವ ಸಿದ್ಧತೆಯಲ್ಲಿದ್ದ ಕಮಲಳು ಕಿವಿಗೊಟ್ಟು ಕೇಳಹತ್ತಿದಳು. ಗಂಡ-ಹೆಂಡರ ಕಿವಿ ಮಾತುಗಳನ್ನು ಕೇಳಬಾರದೆಂದು ಅವಳಿಗೆ ಗೊತ್ತಿತ್ತು. ಆದರೆ ಕಳೆದ ಎರಡು ತಿಂಗಳಿಂದ ತನ್ನ ಸಲುವಾಗಿ ಏನು ನಡೆದಿದೆ ಎಂಬದನ್ನು ತಿಳಿದುಕೊಳ್ಳುವದು ಅವಳಿಗೆ ಅವಶ್ಯ ಬೇಕಾಗಿತ್ತು. ಅದಕ್ಕಾಗಿ ಅವಳು ಉತ್ಸುಕಳಾಗಿದ್ದಳು. ಅತ್ತಿಗೆಗೆ ತನ್ನಿಂದ ಅತಂಕವಾಗಹತ್ತಿದೆ ಎಂಬದನ್ನು ಕೇಳಿ ಅವಳಿಗೆ ಅತ್ಯಂತ ದುಃಖವಾಯಿತು. ಏನು ಮಾಡಬೇಕೆಂಬದು ಅವಳಿಗೆ ತಿಳಿಯದಾಯಿತು.

ಅಣ್ಣನ ಸಂಸಾರಕ್ಕೆ ಧಕ್ಕೆ ತರುವದಕ್ಕಿಂತ ಬೇರೊಂದು ಕೋಣೆಯಲ್ಲಿ . . . . . ಅವಳ ಕಣ್ಣಿಗೆ ಕತ್ತಲೆ ಕವಿಯಿತು.

× × ×

ಶ್ರೀಧರನು ಸ್ವಲ್ಪ ನಸುಕಿನಲ್ಲಿ ಎದ್ದು ನೋಡಿದ. ವಿನಾಲು ತಡವಾಗಿ ಏಳುವ ಆವ[illegible] [illegible] ಕಾಣಲಿಲ್ಲ. ಎಲ್ಲಿಯೋ ಹೊರಗೆ ಹೋಗಿರ ಬಹುದೆಂದು [illegible].

"ಕಮಾ, ಇಂತಹ ನಸುಕಿನಲ್ಲಿ ಎಲ್ಲಿಗೆ ಹೊರಟಿರುವಿ?" ಎಂದು ಶ್ರೀಧರನು [illegible] ಯಿಂದ ಕೇಳಿದ. ಅಣ್ಣನ ಪ್ರೇಮಪೂರಿತ ನುಡಿಗಳನ್ನು ಕೇಳಿ ಅವಳಿಗೆ ಅಳು ಬಂದಿತು. ಓಡಿ ಹೋಗಿ ಬಿಕ್ಕಿ ಬಿಕ್ಕಿ ಅಳುತ್ತ [illegible] ಗೆಗೆ ಬೀಳುವಂತೆ ಅವಳು ಬಿಕ್ಕತೊಡಗಿದಳು.

"ಅಣ್ಣಾ! ನಾನು ನಿನ್ನ ತಂಗಿಯಲ್ಲವೇ?" ಇವಳಿಂತಲೂ ಹೆಚ್ಚಿಗೆ ಅವಳಿಂದ ಏನೂ ಮಾತಾಡುವದಾಗಲಿಲ್ಲ. ಕಂಬನಿಗಳು ಮಾತ್ರ ಸುರಿಯ ಹತ್ತಿದವು. ಶ್ರೀಧರನು ಹೆದರಿದ. ಒಟ್ಟಿನ ಮೇಲೆ ನಿನ್ನಿನ ಪ್ರಸಂಗವು ಇವಳಿಗೆ ತಿಳಿದಿದೆ ಎಂದು.

"ಶ್ರೀಧರ ನನಗೆ ಪ್ರಿನ್ಸಿಪಾಲರನ್ನ ಕಾಣದೇ ಆಗದು. ಈ ಟರ್ಮಿನಲ್ಲಿ ನಾನು ಹಾಸ್ಟೆಲ್ಲಿನಲ್ಲಿರಬೇಕೆಂದಿರುವೆ."

"ಮನೆಯಲ್ಲಿ ಅಭ್ಯಾಸವಾಗುವದಿಲ್ಲವೆ?"

"ಬಿ. ಎ. ಅಭ್ಯಾಸ. ಮನೆಯ ಜಂಜಡದಿಂದ ದೂರವಿದ್ದರೇ ಒಳಿತು."

"ಕಮಾ, ನಾನು ನಿನಗೆ ಹೋಗಗೊಡುವದಿಲ್ಲ" ಎಂದು ಶ್ರೀಧರನು ನುಡಿದನು. ಕಮಲಳು ತನ್ನ ಹಟ ಬಿಡಲೊಲ್ಲಳು. ಶ್ರೀಧರನು ಅನುಮತಿ ಕೊಡಲೊಲ್ಲ. ಹೀಗಾಗಿ ಇಬ್ಬರಲ್ಲಿ ಜಗ್ಗಾಟ ನಡೆಯಿತು. ಕೊನೆಗೆ ಇಬ್ಬರಲ್ಲಿಯೂ ಒಮ್ಮತವಾಗಿ ಕೇವಲ ೨-೩ ತಿಂಗಳ ಮಟ್ಟಿಗೆ ಮಾತ್ರ ಹಾಸ್ಟೆಲ್ಲಿನಲ್ಲಿರಬೇಕೆಂದು ನಿಶ್ಚಿತವಾಯಿತು.

ಹುಟ್ಟಿದ ಮನೆ. ತಾನು ಹಾಗು ಶ್ರೀಧರನು ಕೂಡಿ ಬೆಳೆದ ಮನೆ. ಬಿಟ್ಟು ಹೊರಬೀಳುವಾಗ ಅವಳಿಗೆ ಬಹಳ ಕೆಡಕೆನಿಸಿತು.

ದಿಪಾವಳಿಯ ಹಬ್ಬ ಇನ್ನೆಂಟು ದಿನ. ಕಮಲಳು ಮನೆ ಬಿಟ್ಟು ಹೊರಬಿದ್ದಳು. ಇದು ಶ್ರೀಧರನ ಮನಸ್ಸಿಗೆ ಹತ್ತಿತು. ಇಲ್ಲಿಯ ವರೆಗೆ ಎಷ್ಟೋ ದೀಪಾವಳಿಗಳು ಬಂದು ಹೋಗಿದ್ದವು ಆದರೆ ಇಂಥ ದೀಪಾವಳಿಯು ಮಾತ್ರ ಬಂದಿದ್ದಿಲ್ಲ. ಪ್ರತಿಯೊಂದು ಭಾವ ಬಿದಿಗೆಗೆ ಕಮಲಳು ಶ್ರೀಧರನಿಗೆ ಉಡುಗೊರೆ ಕೊಡುವಳು, ಶ್ರೀಧರನಾದರೂ ಅವಳ ಪ್ರೀತಿಯ ವಸ್ತುವನ್ನು ಅವಳಿಗೆ ತಂದು ಕೊಡುವನು. ಇದು ಅವರ ರೂಢಿಯಾಗಿತ್ತು. ಆದರೆ ಇಂದು?

ಕಮಲಳು ಹೋದಂದಿನಿಂದ ಶ್ರೀಧರನ ಮನಸ್ಸಿಗೆ ಸೊಗವಿಲ್ಲ. ಅವಳ ಬಗ್ಗೆ ವಿಷಾದ. ಒಂದಿಲ್ಲೊಂದು ವಿಚಾರದಿಂದ ಅವನ ತಲೆ ಜಿಮ್ಮೆನ್ನುವದು. ದವಾಖಾನೆಯಲ್ಲಿ ರೋಗಿಗಳ ಸಂಗಡ ಕೆಲಸದ ಮಟ್ಟಿಗೆ ಮಾತ್ರ ಮಾತುಕತೆ. ಕಂಪೌಂಡರ, ಹಾಗು ರೋಗಿಗಳಿಗೆ ಆಶ್ಚರ್ಯವೆನಿಸಹತ್ತಿತು. ನಿಜವಾದ ಪರಿಸ್ಥಿತಿಯು ಅವರಿಗೇನು ಗೊತ್ತು? ಗೊತ್ತಾದರೂ ಶ್ರೀಧರ- ಕಮಲ ಇವರ ಬಂಧುತನ ಕಲ್ಪನೆ ಅವರಿಗೆ ಹೇಗೆ ಬರಬೇಕು? ಅಣ್ಣನ ಮನಸ್ಸನ್ನು ಅರಿಯಬೇಕಾದರೆ ತಂಗಿಯ ಅಂತಃಕರಣವೇ ಬೇಕು.

ಶ್ರೀಧರನು ಮಧ್ಯಾಹ್ನ ವಿಷಣ್ಣ ಮನಸ್ಸಿನಿಂದ ಮನೆಗೆ ಬಂದ. ಮನೆಗೆ ಬಂದೊಡನೆಯೇ ಅದೇ ಬಂದ ಒಂದು ಕಾಗದವನ್ನು ಜಯದೇವಿಯು ಶ್ರೀಧರನಿಗೆ ಕೊಟ್ಟಳು. ಕಾಗದದಲ್ಲಿಯ ಅಕ್ಷರಗಳನ್ನು ನೋಡಿ ಅಸ್ಥಿತಿಯಲ್ಲಿಯೂ ಸಹ ಅವನ ಮೋರೆಯ ಮೇಲೆ ನಗೆಯು ಚಿನ್ಹ ಮೂಡಿತು. ಹ್ಯಾಟ ಬೂಟಗಳನ್ನು ತೆಗೆಯುತ್ತ ಜಯದೇವಿಗೆ—

"ಮಗ! ಇಷ್ಟು ದಿನದ ಮೇಲೆ ಇಂದು ಕಾಗದ ಬರೆದಿರುವನು."

"ಯಾರು?"

"ಶರಚ್ಚಂದ್ರ ಸಾವಂತ. ನನ್ನ ಗೆಳೆಯ."

"ಏನು ಬರೆದಿರುವನು?"

"ಏನು ಬರೆದಿರುವನೋ ನೋಡೋಣ," ಎಂದು ಕಾಗದವನ್ನು ಓದತೊಡಗಿದ.

"ವಾಹವ್ವಾ! ನಾಳೆ ಬರುವನಂತೆ"

"ಇಲ್ಲಿಗೇ?" ಎಂದು ಜಯದೇವಿಯು ಕೇಳಿದಳು.

"ಹುಂ" ಎಂದು ಕಾಗದವನ್ನು ಓದುತ್ತ ಓದುತ್ತ ಶ್ರೀಧರನು ನುಡಿದನು. ಅವನಿಗೆ ಗೆಳೆಯನ ಕಾಗದ ನೋಡಿ ಬಹಳ ಆನಂದವಾಗಿತ್ತು. ಶರಚ್ಚಂದ್ರನು ಈ ರೀತಿ ಬರೆದಿದ್ದನು— "ನಾನು ನಾಳೆ ನಿಮ್ಮಲ್ಲಿಗೆ ಬರುವೆ. ಭಾವ ಬಿದಿಗೆಯ ಉಡುಗರೆಯನ್ನು ಅತ್ತಿಗೆಯವರಿಂದ ಪಡೆಯಲು. ಪ್ರತಿ ಭಾವ ಬಿದಿಗೆಗೆ ಕೆಡಕೆನಿಸುತ್ತಿತ್ತು. ಅತ್ತಿಗೆಯವರನ್ನು ತಂಗಿ ಎಂದು ತಿಳಿಯಬೇಕು ಅವರಿಂದ ನನ್ನ ಹೌಸನ್ನು ತೀರಿಸಿಕೊಳ್ಳಬೇಕು ಎಂದು ನಿರ್ಧರಿಸಿರುವೆ. ಈಸಲ ಕಮಲ ಹಾಗು ಅತ್ತಿಗೆಯವರ ಭಾವ ಬಿದಿಗೆಯು ಒಳ್ಳೇ ಆಡಂಬರವಾಗಿ ಜರಗಬಹುದಲ್ಲವೇ?

[illegible] ಅಂದು ಕೊಡಲು [illegible] ಬರೆದಿದೆ. ಕಮಲ [illegible] ನಾನು [illegible] ನನ್ನ [illegible] ಎಂದು [illegible] ಬರೆಯಬೇಕೆನ್ನುವ ಅವರ [illegible] ಕೇಳುವದೇ ತಿಳಿಯದಾಗಿದೆ.

ಶ್ರೀಧರನು ಕಾಗದ ಮಡಚಿದ, ಅದೇ ಒಂದು ವಿಚಾರದಲ್ಲಿ ಮುಳುಗಿದ. ಒಮ್ಮೆಲೆ ಅವನ ಮುಖ ಅರಳಿತು. ಅವನು ಜಯದೇವಿಯನ್ನು ಕರೆದು—"ಜಯಾ, ನನ್ನ ಹ್ಯಾಟನ್ನು ತೆಗೆದು ಕೊಂಡು ಬಾ" ಎಂದು ಒದರಿದ.

"ಇನ್ನು ಎಲ್ಲಿಗೆ ಹೊರಟ್ಟಿರಿ" ಎಂದು ಜಯದೇವಿ ಆಶ್ಚರ್ಯ [illegible] ಕೇಳಿದಳು.

"ಕಮಲಳಿಗೆ ಬೇಗ ಕರೆದು ತಬೈಬೇಕು. [illegible] ನೀನು ತವರಿಸುತ್ತಿದ್ದಲ್ಲವೆ? ಅದಕ್ಕಾಗಿ ಪರಸ್ಪರವಾಗಿದೆ. ಅವಳನ್ನು ಈಗ ಮದುವೆಗೆ ಒಪ್ಪಿಸುತ್ತೇನೆ."

"ಸರಿ. ಅವಳು ಮದುವೆಗೆ ಒಪ್ಪಿದರೆ [illegible] ಈಗ ನೀವು ಕಾಲೇಜಿಗೆ ಹೋಗಲೇಕೆ [illegible] ಬೇಕು? ಊಟ ಮುಗಿಸಿ ಹೊರಟರಾಗದೆ?"

"ಆದಾಗದು. ಹಬ್ಬಕ್ಕೆ ವರ ಬರಲಿದ್ದಾನೆ. ಆ ಮೊದಲು ವಧುವನ್ನು ಕರೆತಂದು ಬಿಡುವೆ. ಕಮಲಾ ಬಂದ ಮೇಲೆಯೇ ಊಟ ಮಾಡೋಣ" ಎನ್ನುತ್ತ ಕೈಲಿದ್ದ ಕಾಗದವನ್ನು ಜಯದೇವಿಗೆ ಕೊಟ್ಟು ಹೊರಹೊರಟನು.

ಕಮಲಾ ಊಟಕ್ಕೆ ಹೊರಟಿದ್ದಳು. ಅಣ್ಣನನ್ನು ನೋಡಿ, ಬೇಗನೆ ಇಲ್ಲೇನು ಈ ವೇಳೆಯಲ್ಲಿ ಎಂದು ಪ್ರಶ್ನಸೂಚಕ ದೃಷ್ಟಿಯಿಂದ ನೋಡುತ್ತಿರಲು ಶ್ರೀಧರನೇ ತಂಗಿಯ ಮೈದಡವಿ ನೊಡಲು ಮಾತನಾಡಿದನು.

"ನಡೆ. ಇಂದು ಮನೆಯಲ್ಲಿಯೇ ಊಟ ಮಾಡೋಣ. ಶರಚ್ಚಂದ್ರ ಬರಲಿದ್ದಾನೆ. ಅವನನ್ನು ಸ್ವಾಗತಿಸಲು ನೀನಿರಬೇಡವೆ" ಎಂದನು.

ಕಮಲಾ ನಾಚಿ ತಲೆ ತಗ್ಗಿಸಿದಳು. ಮುಂದು ಮಾತಾಡದೆ ದಾರದ ಗೊಂಬೆಯಂತೆ ಅಣ್ಣನನ್ನು ಹಿಂಬಾಲಿಸಿ ನಡೆದಳು. ರಕ್ತದ ಸೆಳೆತವೇ ಹೀಗೆ.

ಗಾಂಧಿ ಸ್ಮಾರಕ ನಿಧಿ

ಬಿರ್ಲಾಗುಂಪಿನ ಕಾರಖಾನೆಯವರು-ಮ. ಗಾಂಧಿ ಸ್ಮಾರಕ ನಿಧಿಗೆ ೧೫ ಲಕ್ಷ ೧ ಸಾವಿರ ರೂ.ಗಳನ್ನು ಕೊಟ್ಟಿರುವರೆಂದು ತಿಳಿಯುತ್ತದೆ.

Reg. No. B. 3148

LICENCE No. 3
Licensed to Post without Prepayment

KARMAVEER 16-8-48

ವಾರದ ಭವಿಷ್ಯ

ಜ್ಯೋತಿಷಿ—ಜ್ಯೋತಿಷ್ಯ ಶಾಸ್ತ್ರಿ ಭಟ, ಭವಿಷ್ಯಕಥನ ಆಫೀಸ ಖಡೇಬಜಾರ, ಬೆಳಗಾವಿ.

ಅಗಸ್ಟ ೧೬ ರಿಂದ ೨೨ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಮಕ್ಕಳಲ್ಲಿ ಒಬ್ಬರಿಗೆ ಬಹಳ ಕ್ಲೇಶ ಅಲ್ಲದೆ ಉಳಿದವರ ಪ್ರಕೃತಿಯೂ ಬಹಳ ಗಾಬರಿಗೊಳಿಸುವಂತಹದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದ ಪ್ರಗತಿಯಲ್ಲಿ ಕಾಯಿದೆಯ ಮೋಹ ಬೀಳುವದರಿಂದ ಬಹಳ ಅಡಚಣೆ ಮತ್ತು ಪ್ರತಿಷ್ಠೆಗೆ ಬಹಳ ಕೊರತೆಯುಂಟಾಗುವ ಯೋಗ. ದ್ರವ್ಯ ಲಾಭ ತುಂಬಾ. ಬುದ್ಧಿ ಸಾಹಸದ್ದರಿಂದ ಬಹಳ ಅಡಚಣೆ ದೂರಾಗುವದರಿಂದ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳಿಗೆ ಹಳು ಕೆರೆ ತೀರದ ಕುಡಿಸುವಂತೆ ಯಶಸ್ಸು. ಮಿತ್ರಸುಖ ಉತ್ತಮ. ಆದರೆ ಅವರಲ್ಲಿ ಒಬ್ಬನು ಮೋಸ ಮಾಡುವ ಸಂಭವ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ಮೊದಲನೇ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೬, ೨೦, ೨೧ ಅನುಕೂಲ.

ವೃಷಭ

ಮಕ್ಕಳಲ್ಲಿ ಕ್ಲೇಶ. ಉಳಿದವರಿಗೆ ಆರೋಗ್ಯ ಮತ್ತು ಪ್ರಾಪಂಚಿಕ ಸುಖ ಮನಸ್ಸಿನಂತೆ. ಸಂಗ್ರಹದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಹಿತಶತ್ರುಗಳ ಕಡೆಯಿಂದ ನಿಮ್ಮ ಮೇಲೆ ಮಸ್ತಕ್ಷೇಪದ ಆರೋಪ. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆಯ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಕೃತ್ತಿಕೆಯ ಕೊನೆಯ ೩ ಮತ್ತು ರೋಹಿಣಿಯ ಮೊದಲನೇ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೧, ೨೨ ಅನುಕೂಲ.

ಮಿಥುನ

ಪ್ರಕೃತಿ ಉತ್ತಮ. ರತಿಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಹೆಂಡತಿಯ ಸ್ವಭಾವ ಮನಸ್ಸಿಗೆ ಬಾರದಂತಹದು. ಮಕ್ಕಳು ವಿಪರೀತ ಸಾಹಸದ ಕೆಲಸ ಮಾಡುತ್ತ ನಡೆಯುವದರಿಂದ ಆಲೋ ಕೆಟ್ಟ ಪರಿಣಾಮದ ಬಗ್ಗೆ ಮನಸ್ಸು ಸಾಶಂಕ. ಬಂಧು ವರ್ಗದವರಲ್ಲಿ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಆ ಸಂಬಂಧದಲ್ಲಿ ಪ್ರತಿಯೊಂದು ಕೆಲಸದಲ್ಲಿ ಬಹಳ ತೊಂದರೆ ಮತ್ತು ಉದ್ವಾಮಕತನದಿಂದ ವರ್ತಿಸುವ ಜನರ ಸಂಪರ್ಕ ಹಿಡಿಯಬೇಕಾದ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸಾದಿ ಕೆಲಸ ಹಿತವು. ಆರಿದ್ರೆಯ ಕೊನೆಯ ಮತ್ತು ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೬, ೨೦, ೨೨ ಅನುಕೂಲ.

ಕರ್ಕ

ಸ್ವತಃ ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಮತ್ತು ಮಾನಸಿಕ ಸಮಾಧಾನದ ವಿಷಯಗಳಲ್ಲಿ ಬಹಳ ತೊಂದರೆ. ತಲೆತಿರುಕ ಸ್ವಭಾವದ ಒಬ್ಬಿಬ್ಬರು ಅತಿಥಿಗಳು ಅಗಂತುಕರಾಗಿ ಬಂದು ಮನೆಯಲ್ಲಿಯೇ ಬಿಡುವರು. ಎಲ್ಲಿ ಅವರಿಗೆ ತೊಂದರೆ ಕೊಡುವ ಮತ್ತು ಪರ್ವತಸ್ತು ಪ್ರಸ್ತಾಪಿಸುವ ಪ್ರಯತ್ನ ಮಾಡುವ ಸಂಭವ. ಅವರು ಮನಸಿಗೆ ಬಂದ ವಸ್ತುಗಳನ್ನು ಮೇಲಿಂದ ಮೇಲೆ ಬೇಡುವರು. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆಯೂ ಅನುಕೂಲ. ಆದರೆ ಲಾಭ ಬಹಳ ಕಡಮೆ. ನೋಕರರ ಬಹಳ ವಿರೋಧ. ಹೆಂಡತಿಯು ದ್ವೇಷ. ಮಿತ್ರರಿಂದ ಅಪಾಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸಿನ ಹಾಸದಿಂದ ವೆಚ್ಚ ಮತ್ತು ತೊಂದರೆ ಹೆಚ್ಚು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷದ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೧೭, ೧೮, ೨೨ ಅನುಕೂಲ.

ಸಿಂಹ

ಪ್ರಕೃತಿ ಉತ್ತಮ. ಆದರೆ ಹೆಂಡತಿಯು ಬೇಡಾದ ಮಾತುಗಳಲ್ಲಿಯೂ ವಿಪರೀತ ದುರಾಗ್ರಹ ಹಾಕುವಳು. ಮಕ್ಕಳಲ್ಲಿ ವಿಶೇಷ ಪ್ರಿಯವಿದ್ದ ಮಗುವೊಂದು ಬಹಳ ದಿನಗಳ ವರೆಗೆ ಬೇರೆ ಊರಿಗೆ ಹೋದ್ದರಿಂದ ಮನಸ್ಸಿನಲ್ಲಿ ಉದಾಸೀನ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ತುಂಬ. ಆದರೆ ಪ್ರತಿಯೊಂದರಲ್ಲಿಯೂ ಆಯತ್ತ ಹೊತ್ತಿನಲ್ಲಿ ಸ್ವಲ್ಪಾದರೂ ಕೊರತೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರಸುಖ ಉತ್ತಮ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಮಘಾದ ಕೊನೆಯ ೨ ಮತ್ತು ಪೂರ್ವಾದ ಮೊದಲನೇ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೬, ೨೦, ೨೧ ಅನುಕೂಲ.

ಕನ್ಯಾ

ಪ್ರಕೃತಿ ಸಾಧಾರಣವೆ. ಮಕ್ಕಳಿಗೆ ಕ್ಲೇಶ. ಸ್ತ್ರೀಸುಖ ಅನುಕೂಲ. ಆದರೆ ಒಟ್ಟಾರೆ ಪ್ರಾಪಂಚಿಕ ಸಮಾಧಾನ ಕಡಮೆಯೇ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅನುಕೂಲ. ಆದರೆ ಪ್ರತಿಷ್ಠೆಗೆ ಕುಂದು ಉಂಟಾಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಹೊಟ್ಟೆ ಕೆಲಸ ಮಾಡುವ ಮೋಹ. ಮಿತ್ರತ್ವದಲ್ಲಿ ವಿರೋಧ. ಪ್ರವಾಸ ಅನುಕೂಲ. ಆದರೆ ಉತ್ತರಾದ ಕೊನೆಯ ೩ ಮತ್ತು ಹಸ್ತಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೭, ೧೮, ೧೯, ೨೨ ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಆದರೆ ಹೆಂಡತಿ ಮೇಲಿಂದ ಮೇಲೆ ಕಿಟಕಿಟಿ ಮಾಡಹತ್ತುವದರಿಂದ ಪ್ರಾಪಂಚಿಕ ಸಮಾಧಾನ ಬಹಳ ಕಡಮೆ. ಮಕ್ಕಳಲ್ಲಿ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಕೆಲ ಕೆಲಸಗಳಲ್ಲಿ ಮನಸ್ಸಿನ ವಿರುದ್ಧ ಯಾರಾದರೊಬ್ಬರು ಒಂದು ಬಗೆಯ ಅಂಜಿಕೆಯನ್ನು ಹಾಕಿದ್ದಾದರೆ ನಿರರ್ಥಕ ವೆಚ್ಚ. ಮಿತ್ರತ್ವದಲ್ಲಿ ತಪ್ಪು ತಿಳವಳಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಮತ್ತು ಶತ್ರುಗಳು ಬಗೆ ಬಗೆಯಿಂದ ತೊಂದರೆ ಕೊಡುವ ಪ್ರಯತ್ನ ನಡೆಸುವರು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಸ್ವಾತಿಯ ಕೊನೆಯ ೨ ಮತ್ತು ವಿಶಾಖದ ಮೊದಲನೆ ೨ ಚರಣಕ್ಕೆ ಹೆಚ್ಚು ತೊಂದರೆ. ತಾ. ೧೬, ೨೦, ೨೧ ಅನುಕೂಲ.

ವೃಶ್ಚಿಕ

ನಿಮ್ಮ ಆರೋಗ್ಯ ಅನುಕೂಲ. ಆದರೆ ಹೆಂಡತಿಗೆ ಕಿರಕೂಳ ತಕರಾರು. ಮಕ್ಕಳಲ್ಲಿ ಉನ್ನತಿ ಪ್ರಿಯ ಮತ್ತು ಅಪ್ರಿಯ ಹೀಗೆ ಎರಡು ವ್ಯಕ್ತಿಗಳೊಡನೆ ಏಕಕಾಲಕ್ಕೆ ಸಹವಾಸ. ಇಲ್ಲವೆ ಭೆಟ್ಟಿಯ ಯೋಗವುಂಟಾಗುವದರಿಂದ ಮನಸ್ಸಿಗೆ ಬಹಳ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಯ ಸ್ಥೈರ್ಯದ ಬಗ್ಗೆ ಅನಕ್ಕಿಂತ ನಿಮ್ಮ ಮನಸ್ಸು ಹೆಚ್ಚು ಸಾಶಂಕ. ಮಿತ್ರರು ನಿಮ್ಮ ಉತ್ಕರ್ಷಕ್ಕಾಗಿ ಬಹಳ ದ್ವೇಷ ಮಾಡುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಅನುಕೂಲತೆ. ಕೆಲವೊಂದು ಧಾರ್ಮಿಕ ಕೃತ್ಯ ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದಲನೇ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೬—೨೭ ೧೮—೨೨ ಅನುಕೂಲ.

ಧನು

ಹೆಂಡತಿಯ ಆರೋಗ್ಯ ಅನುಕೂಲ ಆದರೆ ನಿಮಗೂ ಮಕ್ಕಳಿಗೂ ಸ್ವಲ್ಪ ಕೆಡುವದು. ಪ್ರಾಪಂಚಿಕ ಸುಖದಲ್ಲಿ ಮೊದಲಿಗಿಂತ ಸ್ವಲ್ಪ ಸುಧಾರಣೆ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ತುಂಬಾ ಲಾಭ. ಆದರೆ ಪ್ರತಿಷ್ಠೆಯಲ್ಲಿ ಕೊರತೆಯುಂಟಾಗುವಂತಹ ಕೆಲವೊಂದು ಸಂಗತಿಯನ್ನು ಬೇಕಂತಲೆ ಮಾಡುವ ಮೋಹ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಅನುಕೂಲ. ಆದರೆ ವೆಚ್ಚ ಮತ್ತು ತೊಂದರೆ ಬಹಳ. ಮಿತ್ರ ಸುಖ ಉತ್ತಮ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲನೇ ೨ ಚರಣಗಳಿಗೆ ತೊಂದರೆ ಕಡಮೆ. ತಾ.೧೬-೧೭-೧೮-೧೯ ಅನುಕೂಲ.

ಮಕರ

ಪ್ರಕೃತಿಗೆ ಸ್ವಲ್ಪ ಕ್ಲೇಶ: ಸ್ತ್ರೀ ದೂರಸ್ಥಳಿಲ್ಲವೆ ಅವಳಿಗೂ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಕಡಮೆ. ಆದರೆ ಲಾಭ ತುಂಬಾ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರ ಸುಖ ಬಹಳ ಉತ್ತಮ. ಸ್ವಲ್ಪ ಅವಚಿತ ಲಾಭ. ಪ್ರವಾಸಾದಿ ಕೆಲಸ ತೊಂದರೆಯದು ಉತ್ತರಾಷಾಢದ ಕೊನೆಯ ೨ ಮತ್ತು ಶ್ರವಣಾದ ಮೊದಲನೇ ೨ ಚರಣಗಳಿಗೆ ತೊಂದರೆ ಕಡಮೆ. ತಾ.೨೦—೨೧—೨೨ ಅನುಕೂಲ.

ಕುಂಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ಸ್ವಲ್ಪ ಕಾಹಿಲೆಯೆ. ಆದರೆ ಮಕ್ಕಳಿಗೆ ಉತ್ಕರ್ಷ ಮತ್ತು ಅವರ ಹಾಗು ಉಳಿದ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರತಿಷ್ಠೆ ಹಾಗು ಲಾಭವೂ ಆದರ ಕೆಳಗೆಯೇ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಶತತಾರಿಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ.೧೬-೨೧-೨೨ ಅನುಕೂಲ.

ಮೀನ

ಪ್ರಕೃತಿ ಉತ್ತಮ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಮನಸ್ಸಿನಂತೆ ಪ್ರತಿಯೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಯಶಸ್ಸು. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಲಾಭವೂ ತುಂಬ. ಆದರೆ ಅದ ಆಗುವಾಗ ಬಹಳ ಕಿಟಕಿಟಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿಯೇ ಹೆಚ್ಚು ಅನುಕೂಲ. ಆದರೆ ಉತ್ತರಾಭಾದ್ರಪದದ ಕೊನೆಯ ೨ ಮತ್ತು ರೇವತಿಯ ಮೊದಲನೇ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ.೧೬-೧೭-೧೮—೨೨ ಅನುಕೂಲ.

ಈ ಪತ್ರಿಕೆಯು ಮುದ್ರಣ ... "ಲೋಕಶಿಕ್ಷಣ ಪ್ರಿಂಟಿಂಗ್" ಪ್ರೆಸ್‌ದಲ್ಲಿ ... ಪ್ರಕಟಿಸಲಾಯಿತು.